

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 14 ಮಂಗಳವಾರ 2023

ಸಂಪುಟ: 43 | ಸಂಚಿಕೆ: 324 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೊದಲ ಹಂತದಲ್ಲಿ 11,133 ಪೌರಕಾರ್ಮಿಕರ ಖಾಯಂ

2ನೇ ಹಂತದಲ್ಲಿ 12,867 ಪೌರಕಾರ್ಮಿಕರ ಖಾಯಂ ; ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಕೋಟೆ ಎಂ.ಶಿವಣ್ಣ: ಈಗಾಗಲೇ ಪ್ರಕ್ರಿಯೆ ಆರಂಭ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಅಧ್ಯಕ್ಷತೆಯಲ್ಲಿ ಪೌರಕಾರ್ಮಿಕರ ಕುಂದು ಕೊರತೆ ಸಂಬಂಧ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಯಿತು.

ಮೈಸೂರು, ಮಾ.13(ಪಿಎಂ)– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿಯಡಿ ಕೆಲಸ ಮಾಡುತ್ತಿರುವ 11,133 ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಅಲ್ಲದೆ, ಎರಡನೇ ಹಂತದಲ್ಲಿ 12,867 ಪೌರಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ತೀರ್ಮಾನಿಸಿದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಪೌರಕಾರ್ಮಿಕರ ಕುಂದು ಕೊರತೆ ಸಂಬಂಧ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿದ ಅವರು, ಬಳಿಕ ಇಲ್ಲಿನ ಕೋರ್ಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿಯಡಿ ಕೆಲಸ ಮಾಡುವ ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಮುಖ್ಯಮಂತ್ರಿಗಳು ತೀರ್ಮಾನಿಸಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಮೊದಲನೇ ಹಂತದಲ್ಲಿ ನೇರ ಪಾವತಿಯಡಿ ಕೆಲಸ ಮಾಡುತ್ತಿರುವ 11,133 ಮಂದಿ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಜೊತೆಗೆ ಎರಡನೇ ಹಂತದಲ್ಲಿ 12,867 ನೇರ ಪಾವತಿ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಪ್ರಕ್ರಿಯೆ ಆರಂಭಿಸಲಾಗುವುದು. ▶ 8ನೇ ಪುಟಕ್ಕೆ

170 ಮಂದಿಯ ತಾತ್ಕಾಲಿಕ ಆಯ್ಕೆ ಪಟ್ಟಿ ರದ್ದಾಗಿಲ್ಲ

ಮೈಸೂರು, ಮಾ.13(ಪಿಎಂ)– ಮೈಸೂರು ಮಹಾನಗರ ಪಾಲಿಕೆಯಲ್ಲಿ 730 ಪೌರಕಾರ್ಮಿಕ ಹುದ್ದೆಗಳು ಖಾಯಂ ಹುದ್ದೆಗಳಾಗಿದ್ದು, ಈ ಪೈಕಿ ಖಾಲಿ ಇದ್ದ 205 ಹುದ್ದೆಗಳ ಭರ್ತಿಗೆ ಇತ್ತೀಚೆಗೆ ಅಧಿಸೂಚನೆ ಹೊರಡಿಸಿ, 170 ಮಂದಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆಗೆ ಮಂಜೂರಾದ ಪೌರಕಾರ್ಮಿಕ ಹುದ್ದೆಗಳ ಸಂಖ್ಯೆ 1,474. ಈ ಪೈಕಿ ಶೇ.50ರಷ್ಟು ಖಾಯಂ ಹುದ್ದೆಗಳು (730). ಉಳಿದಂತೆ 730 ನೇರ ಪಾವತಿ ಹುದ್ದೆಗಳಾಗಿವೆ. 730 ಖಾಯಂ ಹುದ್ದೆಗಳಲ್ಲಿ 205 ಖಾಲಿ ಇದ್ದವು. ▶ 8ನೇ ಪುಟಕ್ಕೆ

ಮುಡಾದಿಂದ 4.5 ಕೋಟಿ ಉಳಿತಾಯ ಬಜೆಟ್ ಮಂಡನೆ

ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಪ್ರಸಕ್ತ ಸಾಲಿನ ಪ್ರಾಧಿಕಾರದ ಬಜೆಟ್ ಮಂಡಿಸಿದ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್



ಮೈಸೂರು, ಮಾ. 13 (ಆರ್‌ಕೆ)– 2023–24ನೇ ಸಾಲಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ 4.5 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಲಾಗಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಮುಡಾ ಕಚೇರಿ ಸಭಾಂಗಣದಲ್ಲಿ ಪ್ರಾಧಿಕಾರದ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಿದರು.

ಈ ವರ್ಷ 50,2260.88 ಲಕ್ಷ ರೂ.ಗಳ ಸಂಪನ್ಮೂಲವನ್ನು ವಿವಿಧ ಮೂಲಗಳಿಂದ ಕ್ರೋಢೀಕರಿಸಲು ಉದ್ದೇಶಿಸಲಾಗಿದ್ದು, ಪ್ರಾಧಿಕಾರದಿಂದ ಮೈಸೂರು ನಗರದ ಅಭಿವೃದ್ಧಿಗೆ 49,768.37 ಲಕ್ಷ ರೂ. ಅನುದಾನ ವೆಚ್ಚ ಮಾಡಲು ಮುಂದಾಗಿರುವುದರಿಂದ ಪ್ರಸಕ್ತ ಸಾಲಿಗೆ 458.51 ಲಕ್ಷ ರೂ.ಗಳ ಹೆಚ್ಚುವರಿ ಉಳಿತಾಯ ಬಜೆಟ್ ಅನ್ನು ಸಭೆಗೆ ಮಂಡಿಸಿ ಅನುಮೋದನೆ ಪಡೆಯಲಾಯಿತು.

■ ಆದಾಯದ ಮೂಲಗಳು

ಬಡಾವಣೆ ನಕ್ಷೆ ಶುಲ್ಕ, ಮನೆ ನಿವೇಶನ ಕಂದಾಯ, ಖಾತಾ ನೋಂದಣಿ, ಖಾತಾ ವರ್ಗಾವಣೆ ಶುಲ್ಕ (ನಿಧಿ–1 ರಲ್ಲಿ) ಮತ್ತು ನಿಧಿ–2ರ ಅಭಿವೃದ್ಧಿ ಶುಲ್ಕದಿಂದ 9,500 ಲಕ್ಷ ರೂ., ಕೆರೆ ಪುನಶ್ಚೇತನ ಶುಲ್ಕದಿಂದ 1,000 ಲಕ್ಷ ರೂ. ಕೊಳಚೆ ಪ್ರದೇಶ ಅಭಿವೃದ್ಧಿ ಶುಲ್ಕದಿಂದ 50 ಲಕ್ಷ ರೂ., ನಿವೇಶನ, ಮನೆ ಹಂಚಿಕೆ ಮತ್ತು ಹರಾಜು, ಸಿಎ ನಿವೇಶನ ಹಂಚಿಕೆ, ಕ್ರಯಪತ್ರ ದಂಡ ಶುಲ್ಕಗಳಿಂದ 39,000 ಲಕ್ಷ ರೂ. ಅಂದಾಜಿಸಲಾಗಿದೆ.

ಮುಡಾದಿಂದ ಅನುಮೋದನೆಗೊಂಡ ▶ 6ನೇ ಪುಟಕ್ಕೆ

50:50 ಅನುಪಾತದಲ್ಲಿ ಹೊಸ ವಸತಿ ಬಡಾವಣೆ: ಯುದ್ಧ ಸ್ಮಾರಕ ಸೌಂದರ್ಯೀಕರಣಕ್ಕೆ ಅನುದಾನ

ಹಲವು ವಿಶೇಷ ಯೋಜನೆಗಳ ಘೋಷಣೆ

ಮೈಸೂರು, ಮಾ.13(ಆರ್‌ಕೆ)– ರೈತರ ಸಹಭಾಗಿತ್ವದಲ್ಲಿ ಹೊಸ ಬಡಾವಣೆಗಳ ರಚನೆ, ರಿಂಗ್ ರಸ್ತೆಯಲ್ಲಿ ಕೆಳ ಸೇತುವೆ, ಯುದ್ಧ ಸ್ಮಾರಕ ಸೌಂದರ್ಯೀಕರಣ, ವಾಣಿಜ್ಯ ಸಂಕೀರ್ಣ ನಿರ್ಮಾಣ ಸೇರಿದಂತೆ ಮೈಸೂರು ನಗರದ ಅಭಿವೃದ್ಧಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮುಡಾ ಹಲವು ಹೊಸ ಯೋಜನೆಗಳನ್ನು ಪ್ರಕಟಿಸಿದೆ.

■ **ವಸತಿ ಬಡಾವಣೆ:** ಮೈಸೂರು ತಾಲೂಕು, ಬೊಮ್ಮೇನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಪ್ರದೇಶದಲ್ಲಿ 50:50 ಅನುಪಾತದಲ್ಲಿ ವಸತಿ ಯೋಜನೆ ಕೈಗೆತ್ತಿಕೊಳ್ಳಲು ರೈತರು ಆಸಕ್ತಿ ತೋರಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಪ್ರಕ್ರಿಯೆ ನಡೆಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

■ **ರಿಂಗ್ ರಸ್ತೆಗೆ ಕೆಳಸೇತುವೆ:** ವಿಜಯನಗರ 4ನೇ ಹಂತದ 1 ಮತ್ತು 2ನೇ ಬಡಾವಣೆ ಮತ್ತು ವಿಜಯನಗರ 3ನೇ ಹಂತ ನಡುವೆ ರಸ್ತೆಯಲ್ಲಿ ಹಾದು ಹೋದ ರಿಂಗ್ ರಸ್ತೆಯಲ್ಲಿ ಕೆಳ ಸೇತುವೆ ನಿರ್ಮಿಸಲು ಉದ್ದೇಶಿಸಲಾಗಿದ್ದು, ▶ 6ನೇ ಪುಟಕ್ಕೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಯಿಂದ ಟ್ರಾಫಿಕ್ ಜಾಮ್ ಜಾಸ್ತಿ

IISC ತಜ್ಞರ ಆತಂಕ

ಬೆಂಗಳೂರು, ಮಾ.13– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕೃತವಾಗಿ ಚಾಲನೆ ನೀಡಿದ್ದು, ಟ್ರಾಫಿಕ್ ಜಾಮ್ ಸಮಸ್ಯೆಗೆ ಪರಿಹಾರವಾಗಬೇಕಿದ್ದ ಹೆದ್ದಾರಿ ಇದೀಗ ಮೈಸೂರು–ಬೆಂಗಳೂರು ಅವಳಿ ನಗರದಲ್ಲಿ ಸಂಚಾರ ದಟ್ಟಣೆಯನ್ನು ಇನ್ನಷ್ಟು ಹದಗೆಡಿಸುವ ಸಾಧ್ಯತೆಯಿದೆ ಎಂದು ಸಂಚಾರ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎಕ್ಸ್‌ಪ್ರೆಸ್‌ವೇಯ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಈಗಾಗಲೇ ದಟ್ಟಣೆ ಇದೆ ಎಂದು ಐಐಎಸ್‌ಸಿಯ ಮೊಬಿಲಿಟಿ ತಜ್ಞ ಡಾ ಆಶಿಶ್ ವರ್ಮಾ ಹೇಳಿದ್ದು, ವೈಯಕ್ತಿಕ ವಾಹನಗಳ ಚಾಲನೆ ಹೆಚ್ಚಳವಾಗಿರುವುದೇ ▶ 6ನೇ ಪುಟಕ್ಕೆ

ಇಂದಿನಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಟೋಲ್ ಸಂಗ್ರಹ

ಬೆಂಗಳೂರು–ನಿಡಘಟ್ಟ ನಡುವೆ ಶುಲ್ಕ ಸಂಗ್ರಹ: ಈ ಭಾಗದ ಸರ್ವಿಸ್ ರಸ್ತೆ ಸಂಚಾರಕ್ಕೆ ಮುಕ್ತ



ರಾಮನಗರ, ಮಾ. 13– ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯಲ್ಲಿ ನಾಳೆಯಿಂದ (ಮಾ. 14ರ ಬೆಳಗ್ಗೆ 8 ಗಂಟೆಯಿಂದ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರಿನಿಂದ ಮಂಡ್ಯ ಜಿಲ್ಲೆಯ ನಿಡಘಟ್ಟದವರೆಗೆ ಟೋಲ್‌ಸಂಗ್ರಹ ಮಾಡುತ್ತಿದೆ.

ಈ ಭಾಗದಲ್ಲಿನ ಎಲ್ಲ ಸರ್ವಿಸ್ ರಸ್ತೆಗಳ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಟೋಲ್‌ಸಂಗ್ರಹವನ್ನು ಆರಂಭಿಸಲಾಗುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅಧಿಕೃತವಾಗಿ ನಿನ್ನೆ ಮಂಡ್ಯ ಜಿಲ್ಲೆಯ ಗೆಜ್ಜಲಗೆರೆ ಬಳಿ ಮೈಸೂರು ಬೆಂಗಳೂರು ದಶಪಥ ಹೆದ್ದಾರಿ ಲೋಕಾರ್ಪಣೆ ಮಾಡಿದ್ದರು. ಈಗ ಟೋಲ್‌ಸಂಗ್ರಹಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ. ಈ ಹಿಂದೆ ಪ್ರಕಟಣೆ ಹೊರಡಿಸಿದಂತೆ ಟೋಲ್ ಸಂಗ್ರಹ ದರವನ್ನು ▶ 6ನೇ ಪುಟಕ್ಕೆ

ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ಮತ್ತೆ ಮುಂದೂಡಿಕೆ

ಕಾಂಗ್ರೆಸ್, ಜಾ.ದಳ ಸದಸ್ಯರ ಆಕ್ರೋಶ, ಬಿಜೆಪಿಯಿಂದ ಮುಂದುವರಿದ ಹೈಡ್ರಾಮಾ





ಮೈಸೂರು, ಮಾ.13(ಆರ್‌ಕೆ)–ಮೇಯರ್ ಹಾಗೂ ಬಿಜೆಪಿ ಸದಸ್ಯರು ಗೈರು ಹಾಜರಾದ ಹಿನ್ನೆಲೆಯಲ್ಲಿ ಇಂದು ನಡೆಯಬೇಕಿದ್ದ ಮೈಸೂರು ಮಹಾನಗರ ಪಾಲಿಕೆ ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಮತ್ತೆ ಮುಂದೂಡಲ್ಪಟ್ಟಿತು.

ಪಾಲಿಕೆಯ ನವೀಕೃತ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಯೋಜನಾ ಸ್ಥಾಯಿ ಸಮಿತಿ, ಲೆಕ್ಕಪತ್ರ ಸ್ಥಾಯಿ ಸಮಿತಿ, ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಹಣಕಾಸು ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಿಗದಿಪಡಿಸಿ ಮೇಯರ್ ಶಿವಕುಮಾರ್ ಸೂಚನೆ ಮೇರೆಗೆ ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ ಅವರು ಅಧಿಸೂಚನೆ ಹೊರಡಿಸಿದ್ದರು. ಮೇಯರ್ ಅಧ್ಯಕ್ಷತೆಯ ಸಭೆಯಲ್ಲಿ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆಯಬೇಕಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಸರಿಯಾದ ಸಮಯಕ್ಕೆ ಹಾಜರಾಗಿ ನಾಮಪತ್ರ ಸಲ್ಲಿಸಲು ಸಜ್ಜಾಗಿದ್ದರು. ಆದರೆ ಮೇಯರ್ ಶಿವಕುಮಾರ್ ಹಾಗೂ ಬಿಜೆಪಿ ಸದಸ್ಯರು ಸಭೆಗೆ ಬರಲೇ ಇಲ್ಲ. ಅಲ್ಲಿಯವರೆಗೂ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀ ಕಾಂತರೆಡ್ಡಿ ಹಾಗೂ ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ ಕಾದು ಕುಳಿತಿದ್ದರಾದರೂ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮಧ್ಯಾಹ್ನ 1 ಗಂಟೆ ನಂತರ ಸ್ಥಳದಿಂದ ತೆರಳಿದರು.


ಮೇಯರ್ ಹಾಗೂ ಬಿಜೆಪಿ ಸದಸ್ಯರು ಬರಬಹುದು. ಚುನಾವಣೆ ಮಧ್ಯಾಹ್ನವಾದರೂ ನಡೆಯಬಹುದೆಂದು ನಿರೀಕ್ಷಿಸಿದ್ದ ಕಾಂಗ್ರೆಸ್‌ನ ಅಯೂಬ್ ಖಾನ್, ಜೆಡಿಎಸ್‌ನ ಅಶ್ವಿನಿ ಅನಂತು ಸೇರಿದಂತೆ ಪಾಲಿಕೆ ಸದಸ್ಯರು ಮೇಯರ್ ಶಿವಕುಮಾರ್ ಹಾಗೂ ಬಿಜೆಪಿ ಸದಸ್ಯರ ವರ್ತನೆಗೆ ಬೇಸತ್ತು ಆಕ್ರೋಶ ವ್ಯಕ್ತಪಡಿಸಿ ಮಧ್ಯಾಹ್ನ 1.30 ಗಂಟೆಗೆ ಸ್ಥಳದಿಂದ ನಿರ್ಗಮಿಸಿದರು. ▶ 8ನೇ ಪುಟಕ್ಕೆ

ಅನಾರೋಗ್ಯದಿಂದ ಸಭೆಗೆ ಗೈರಾದೆ



ಮೈಸೂರು, ಮಾ.13(ಆರ್‌ಕೆ)–ಅನಾರೋಗ್ಯ ಕಾರಣ ನಾನು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಸಭೆಗೆ ಹಾಜರಾಗಲು ಸಾಧ್ಯವಾಗಲಿಲ್ಲ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ಇಂದು ಬೆಳಗ್ಗೆ ಆರೋಗ್ಯದಲ್ಲಿ ಏರುಪೇರಾಗಿದೆ. ವೈದ್ಯರ ಸಲಹೆಯಂತೆ ನಾನು ಆಸ್ಪತ್ರೆಗೆ ತೆರಳಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕಾಯಿತು. ನಾನೇ ಸಭೆಗೆ ಗೈರು ಹಾಜರಾದ ಕಾರಣ ನಮ್ಮ ಪಕ್ಷದ ಪಾಲಿಕೆ ಸದಸ್ಯರೂ ಸಭೆಗೆ ಹಾಜರಾಗದೇ ಪಾಲಿಕೆ ಕಚೇರಿಯಿಂದ ಹಿಂದಿರುಗಿದ್ದಾರೆಂದು ತಿಳಿದು ಬಂತು ಎಂದರು. ನನ್ನ ನಿರ್ದೇಶನದಂತೆಯೇ ಕೌನ್ಸಿಲ್ ಕಾರ್ಯದರ್ಶಿಗಳು ಸ್ಥಾಯಿ ▶ 8ನೇ ಪುಟಕ್ಕೆ

ಮಾಜಿ ರಾಯಭಾರಿ ಎ.ಮಾಧವನ್ ನಿಧನ



ಮೈಸೂರು, ಮಾ.13(ಪಿಎಂ)– ಹಿಂದಿನ ಯುಎಸ್‌ಎಸ್‌ಆರ್‌ನ ಮಾಸ್ಕೋ, ಜಪಾನ್ ಮತ್ತು ಜರ್ಮನಿಯಲ್ಲಿ ಭಾರತದ ರಾಯಭಾರಿಯಾಗಿದ್ದು, ಈಗ ಮೈಸೂರಿನಲ್ಲಿ ನೆಲೆಸಿದ್ದ ಎ.ಮಾಧವನ್ (89) ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಲೇಖಕರೂ ಆದ ಪತ್ನಿ ಶ್ರೀಮತಿ ಗಿರಿಜಾ ಮಾಧವನ್, ಅಮೆರಿಕದಲ್ಲಿ ನೆಲೆಸಿರುವ ಪುತ್ರ ಸೇರಿದಂತೆ ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ತಮಿಳುನಾಡು ಮೂಲದವರಾದ ಎ. ಮಾಧವನ್, ಎಂ.ಅನಂತನಾರಾಯಣನ್ ಮತ್ತು ಅಖೀಲಾಂಡೇಶ್ವರಿ ಪುತ್ರರಾಗಿ 1933ರ ಅ.9ರಂದು ಜನಿಸಿದರು. ಇವರ ತಂದೆ ಎಂ.ಅನಂತನಾರಾಯಣನ್ ನ್ಯಾಯಮೂರ್ತಿಗಳಾಗಿದ್ದರು. ತಮಿಳುನಾಡಿನ ತಂಜಾವೂರಿನಲ್ಲಿ ಕಿಂಗ್ಸ್ ಹೈಸ್ಕೂಲ್‌ನಲ್ಲಿ ಶಾಲಾ ಶಿಕ್ಷಣ ಪಡೆದ ಎ.ಮಾಧವನ್, ಬಳಿಕ ಅಂದಿನ ಮದ್ರಾಸ್‌ನ ಲೊಯೊಲಾ ಕಾಲೇಜಿನಲ್ಲಿ ಬಿಎ ಆನರ್ಸ್ ಶಿಕ್ಷಣ ಪೂರೈಸಿದರು. ಎಂಎ ಪದವೀಧರರಾದ ಇವರು, ಯುಕೆಯ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ ಅಧೀನದ ಟ್ರಿನಿಟಿ ಕಾಲೇಜಿನಲ್ಲಿ ಒಂದು ವರ್ಷ ಉನ್ನತ ವ್ಯಾಸಂಗ ಮಾಡಿದ್ದರು. ಅಲ್ಲದೆ, ಪೀಕಿಂಗ್, ಲಂಡನ್, ಹಾಂಗ್‌ಕಾಂಗ್ ಸೇರಿದಂತೆ ವಿವಿಧ ದೇಶಗಳಲ್ಲಿ ನಾನಾ ಉನ್ನತ ಹುದ್ದೆ ಅಲಂಕರಿಸಿದ್ದರು. ಜೊತೆಗೆ ಹಾರ್ವರ್ಡ್ ವಿಶ್ವವಿದ್ಯಾಲಯದ ಫೆಲೋ ಆಗಿದ್ದರು. ▶ 8ನೇ ಪುಟಕ್ಕೆ




ಈ ಚುನಾವಣೆಯಲ್ಲಿ ಮತಗಟ್ಟೆಗಳು ವಿಹಾರ ತಾಣಗಳಂತಿರುತ್ತವೆ

ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸುಧಾರಣೆ ಹಾದಿ...









ಮೈಸೂರು, ಮಾ.13(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸುವುದರೊಂದಿಗೆ, ನಾನಾ ಆಮಿಷ, ಅಕ್ರಮಗಳನ್ನು ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿಧಾನಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಚುನಾವಣಾ ಆಯೋಗದ ಸೂಚನೆ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಮುಖವಾಗಿ ಈ ಬಾರಿ ಮತದಾನದ ಪ್ರಮಾಣ ಹೆಚ್ಚಿಸಬೇಕೆಂದು ಉದ್ದೇಶಿಸಲಾಗಿದೆ. ಹಿಂದಿನ ಚುನಾವಣೆಗಳಲ್ಲಿ ವಿದ್ಯಾವಂತರು ಹೆಚ್ಚಾಗಿರುವ ಬೂತ್ ಪ್ರದೇಶದಲ್ಲಿ ಮತದಾನದ ಪ್ರಮಾಣ ಕುಸಿದಿದೆ. ಈ ಬಾರಿ ನಾನಾ ಕಾರ್ಯಕ್ರಮದ ಮೂಲಕ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

■ **ವಿಶೇಷ ಅಭಿಯಾನ:** ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂರು ವಿಧಾನಸಭೆ ಕ್ಷೇತ್ರಗಳಲ್ಲಿ ಕಡಿಮೆ ಮತದಾನವಾಗಿರುವ ಬಡಾವಣೆಗಳಲ್ಲಿ ಜಿಲ್ಲಾಡಳಿತದಿಂದ ಎರಡು ವಿಶೇಷ ಅಭಿಯಾನ– 'ನಿಮ್ಮ ಮತಗಟ್ಟೆಯ ಬಗ್ಗೆ ತಿಳಿದುಕೊಳ್ಳಿ' ಹಾಗೂ 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ' ಘೋಷಣೆಯೊಂದಿಗೆ ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನದಂತೆ ಮತಗಟ್ಟೆಯನ್ನು ಆಕರ್ಷಣೀಯಗೊಳಿಸುವುದು. ಮತದಾನ ಮಾಡಲು ಬರುವವರು ಸಾಲಿನಲ್ಲಿ ನಿಲ್ಲುವುದಕ್ಕಿಂತ ವಿಶ್ರಾಂತಿ ಪಡೆಯಲು ನಿರೀಕ್ಷಣಾ ಕೊಠಡಿ ನಿರ್ಮಿಸುವುದು, ಮಕ್ಕಳೊಂದಿಗೆ ಮತದಾನ ಮಾಡಲು ಬರುವವರಿಗೂ ಮಕ್ಕಳ ಪಾಲನೆಗೆ ಪ್ರತ್ಯೇಕ ಕೊಠಡಿ ಕಾಯ್ದಿರಿಸಲಾಗುತ್ತದೆ. ಮತಗಟ್ಟೆ ಸುತ್ತಲೂ ವಾಯು ವಿಹಾರಕ್ಕೆ ಅವಕಾಶ ನೀಡಲಾಗುವುದು. ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರಿ ಕಚೇರಿಗಳಲ್ಲಿ ಮತದಾನ ಜಾಗೃತಿ ಫಲಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.


■ **ಹಿರಿಯರು, ವಿಕಲಚೇತನರು ಮನೆಯಿಂದಲೇ ಮತದಾನ:** ಮತಗಟ್ಟೆಗೆ ಬಂದು ಮತದಾನ ಮಾಡಲು ಬರಲು ಸಾಧ್ಯವಾಗದೆ ಇರುವ ಹಿರಿಯ ನಾಗರಿಕರು ಹಾಗೂ ವಿಕಲಚೇತನರಿಗೆ ಮನೆಯಿಂದಲೇ ಮತದಾನ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಲಾಗಿದೆ. ಇದಕ್ಕಾಗಿ ಸಮೀಕ್ಷೆ ನಡೆಸಲಾಗಿದ್ದು, 80 ವರ್ಷ ಮೇಲ್ಪಟ್ಟವರು, ಹಾಸಿಗೆ ಹಿಡಿದಿರುವ 80 ಸಾವಿರ ಮತದಾರರು ಹಾಗೂ 30 ಸಾವಿರಕ್ಕೂ ಹೆಚ್ಚು ವಿಶೇಷಚೇತನ ಮತದಾರರ ಪಟ್ಟಿ ತಯಾರಿಸಲಾಗಿದೆ. ಆಯೋಗ ಸಮ್ಮತಿಸಿದರೆ, ಪೋಸ್ಟಲ್ ಬ್ಯಾಲೆಟ್ ಪೇಪರ್ ಮೂಲಕ ಅವರ ಮನೆಗೆ ಹೋಗಿ ಹಕ್ಕು ಚಲಾಯಿಸುವ ಕಾರ್ಯಕ್ಕೆ ಚಾಲನೆ ದೊರೆಯಲಿದೆ ಎಂದರು.

■ **ಮತದಾರರ ಪಟ್ಟಿಯಲ್ಲಿ ಹೆಸರು ಖಚಿತಪಡಿಸಿಕೊಳ್ಳಿ :** ಮೈಸೂರು ಜಿಲ್ಲೆಯಲ್ಲಿ ವಿವಿಧ ಕಾರಣದಿಂದ 1.20 ಲಕ್ಷ ಜನರ ಹೆಸರು ಕೈಬಿಟ್ಟುಹೋಗಿದೆ. ಎರಡು ಕಡೆ ದಾಖಲಾಗಿರುವ 80 ಸಾವಿರ ಮಂದಿಯ ಹೆಸರುಗಳು ಕೈಬಿಡಲಾಗಿದೆ. ಈ ಸಂದರ್ಭದಲ್ಲಿ ಕೆಲವರ ಹೆಸರು ಆಕಸ್ಮಿಕವಾಗಿ ಕೈಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯಾ ಎಂದು ಖಚಿತಪಡಿಸಿಕೊಳ್ಳಲು ಮತಗಟ್ಟೆಯ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು. ಮತದಾರರಿಗೆ ನೆರವಾಗುವ ನಿಟ್ಟಿನಲ್ಲಿ ಪ್ರತಿ ಮತಗಟ್ಟೆ ಮೇಲೆ ಮತಗಟ್ಟೆ ಅಧಿಕಾರಿ ಹೆಸರು ಹಾಗೂ ಅವರ ಮೊಬೈಲ್ ನಂಬರ್ ಬರೆಸಲಾಗುತ್ತಿದೆ. ಆಯಾ ▶ 8ನೇ ಪುಟಕ್ಕೆ



ರಾಜ್ಯದಲ್ಲಿ ಮೋದಿ ಸುನಾಮಿ!

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರ್ಷಚಿತ್ತ



ಬೆಂಗಳೂರು, ಮಾ.13(ಕೆಎಂಶಿ)–ರಾಜ್ಯದಲ್ಲಿ ಈಗಾಗಲೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸುನಾಮಿ ಆರಂಭವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಹಲವು ಭಾಗಗಳಿಗೆ ಪ್ರಧಾನಿ ಅವರು ಭೇಟಿ ನೀಡಿದ್ದು, ಡಬಲ್ ಎಂಜಿನ್ ಸರ್ಕಾರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಚಾರ ಮಾಡಿದ್ದಾರೆ ಎಂದರು. ಇದರಿಂದ ಮೋದಿ, ಬಿಜೆಪಿಯ ಕುರಿತಂತೆ ಜನರ ಒಲವು ವ್ಯಕ್ತವಾಗಿದೆ. ಮೋದಿಯವರು ಭಾರತದ ಮಹಾನ್ ನಾಯಕ. ಅತ್ಯಂತ ಕಷ್ಟ ಕಾಲದಲ್ಲಿ ಭಾರತವನ್ನು ಎತ್ತಿಹಿಡಿದವರು. ಭಾರತದ ಗಡಿ ರಕ್ಷಣೆ ಮಾಡಿ ಆಂತರಿಕ ಸುರಕ್ಷತೆಯನ್ನು ಖಾತ್ರಿಪಡಿಸಿದ್ದಾರೆ. ಭಾರತವನ್ನು ಅಭಿವೃದ್ಧಿ ಪಥದಲ್ಲಿ ನಡೆಸಿ ಕೋವಿಡ್ ಸಂದರ್ಭದಲ್ಲಿ ಬಡವರ ಕೈಹಿಡಿದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಾಜಿ ಸಚಿವ ವಿ.ಸೋಮಣ್ಣ ಮತ್ತು ನಾನು ಬಹಳ ಹಳೆಯ ಸ್ನೇಹಿತರು. ನಿನ್ನೆ ಹುಬ್ಬಳ್ಳಿಯಲ್ಲಿ ಔಪಚಾರಿಕವಾಗಿ ಭೇಟಿ ಆಗಿದ್ದಷ್ಟೇ. ನಮ್ಮ ಭೇಟಿ ವೇಳೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ವಿ.ಸೋಮಣ್ಣ ಜತೆಗೇ ಇದ್ದಾರೆ. ಮುಂದೆಯೂ ಇರುತ್ತಾರೆ. ಪಕ್ಷ ಬಿಡುತ್ತಾರೆ ಎನ್ನುವುದು ಊಹಾಪೋಹ ಎಂದರು.

ಕೆಪಿಟಿಸಿಎಲ್ ಹಾಗೂ ಎಸ್ಕಾಂನವರೊಂದಿಗೆ ನಮ್ಮ ಸಚಿವರು ಸಂಪರ್ಕದಲ್ಲಿದ್ದಾರೆ. ಸಮಸ್ಯೆ ಬಗೆಹರಿಸಲಾಗುವುದು ಎಂದು ಹೇಳಿದರು.

ಡಾ. ಬಾಲಗಂಗಾಧರನಾಥ ಶ್ರೀಗಳ ಹೆಸರು ಮರೆ ಮಾಡಿ

ಕಾಲ್ಪನಿಕ ಪಾತ್ರಗಳ ಹೆಸರಲ್ಲಿ ಮಹಾದ್ವಾರ ಸರಿಯೇ?

● ಬಿಜೆಪಿ ವಿರುದ್ಧ ಜೆಡಿಎಸ್ ವಾಗ್ದಾಳಿ ● ಪ್ರಧಾನಿ ಮಂಡ್ಯ ಭೇಟಿ ವೇಳೆ ಮರಳು ಮಾಡುವ ಯತ್ನಕ್ಕೆ ಖಂಡನೆ

ಬೆಂಗಳೂರು, ಮಾ. 13(ಕೆಎಂಶಿ)– ಕಪೋಲಕಲ್ಪಿತ ಪಾತ್ರಗಳನ್ನು ಸೃಷ್ಟಿಸಿ, ಜನರ ತಲೆಯಲ್ಲಿ ಕೋಮು ದ್ವೇಷ ವಿಷ ಬೀಜ ಬಿತ್ತಿ, ಅದು ಹೆಮ್ಮರವಾಗಿ ಬೆಳೆಯಲು ತನು–ಮನ–ಧನವನ್ನೆಲ್ಲ ಅರ್ಪಿಸುವ ಪಕ್ಷ ಬಿಜೆಪಿ ಎಂದು ಜೆಡಿಎಸ್ ಆರೋಪಿಸಿದೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಜೆಡಿಎಸ್, ಟಿಪ್ಪು ಸುಲ್ತಾನನನ್ನು ಕೊಂದವರು ಎನ್ನಲಾಗುವ ಕಾಲ್ಪನಿಕ ಪಾತ್ರಗಳಾದ ಉರಿಗೌಡ, ನಂಜೇಗೌಡ ಎಂಬ ಹೆಸರುಗಳನ್ನು ಪ್ರಧಾನಿ ರೋಡ್ ಶೋ ನಡೆಸಿದ ಮಹಾದ್ವಾರಕ್ಕೆ ಇಟ್ಟಿದ್ದು ಏಕೆ ಎಂದು ಪ್ರಶ್ನಿಸಿದೆ.

ಮಹಾದ್ವಾರಕ್ಕೆ ಇದ್ದ ಒಕ್ಕಲಿಗರ ಗುರು ಆದಿಚುಂಚನಗಿರಿ ಪೀಠಾಧ್ಯಕ್ಷರಾಗಿದ್ದ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಹೆಸರನ್ನು ಮುಚ್ಚಿ, ಆ ಜಾಗದಲ್ಲಿ ಈ ಕಾಲ್ಪನಿಕ ಪಾತ್ರಗಳ ಹೆಸರನ್ನು ಹಾಕಿದ್ದ ಉದ್ದೇಶವೇನು. ಇಂತಹ ಚಿಲ್ಲರೆ, ದ್ವೇಷ ತುಂಬಿದ ನಡೆಯಿಂದ ಒಕ್ಕಲಿಗರ ಮನ ಗೆಲ್ಲಬಹುದು ಎಂಬ ಭ್ರಮೆಯಲ್ಲಿದ್ದರೆ ಅದು ಶತಮೂರ್ಖತನ ಎಂದು ಟೀಕಿಸಿದೆ.

ಹೆಸರು ಬದಲಿಸಿದ ನಂತರ ಸಾರ್ವಜನಿಕರು, ಸ್ಥಳೀಯರು, ಹಾಗೂ ಪ್ರಗತಿಪರ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದತಡ, ಜಿಲ್ಲಾಡಳಿತವು ಈ ಹೆಸರನ್ನು ತೆರವುಗೊಳಿಸಿದೆ.



ಇಂತಹ ನಿರ್ಲಜ್ಜೆಗೇಡಿ ನಡೆಯು ಇಡೀ ರಾಜ್ಯ ಬಿಜೆಪಿ ಸರ್ಕಾರದ ನೀಚ ರಾಜಕಾರಣಕ್ಕೆ ಹಿಡಿದ ಕನ್ನಡಿ. ಸುಳ್ಳುಗಳಿಗೆ ಆಯಸ್ಸು ಬಹಳ ಕಮ್ಮಿ ಎಂದು ವಾಗ್ದಾಳಿ ನಡೆಸಿದೆ.

ಮಾಂಸ ತಿಂದು ದೇವಸ್ಥಾನಕ್ಕೆ ತೆರಳಿದ ಸಿ.ಟಿ.ರವಿಯವರೇ, ಉರಿಗೌಡ, ನಂಜೇಗೌಡನ ಹೆಸರಲ್ಲಿ ಶಾಶ್ವತ ದ್ವಾರ ನಿರ್ಮಿಸುತ್ತೀರಾ. ನಾಚಿಕೆಯಾಗಬೇಕು ನಿಮಗೆ. ಕೊಳಕು ಮಟ್ಟದ ರಾಜಕಾರಣವನ್ನೇ ಉಸಿರಾಗಿಸಿಕೊಂಡಿರುವ ನಿಮಗೆ ಪ್ರಧಾನಿಯವರ ಗುಲಾಮಗಿರಿ ಮಾಡುವ ಅನಿವಾರ್ಯತೆ ಇದೆ. ಒಕ್ಕಲಿಗರು ಸ್ವಾಭಿಮಾನಕ್ಕೆ ಹೆಸರಾದವರು. ಇಡೀ ಒಕ್ಕಲಿಗ ಸಮುದಾಯವನ್ನು ಅಪಹಾಸ್ಯಕ್ಕೆ ಗುರಿ ಮಾಡುವ ಮೂಲಕ ಏನನ್ನು ಸಾಧಿಸಲು ರಾಜ್ಯ ಬಿಜೆಪಿ ಪಕ್ಷ ಹೊರಟಿದೆ ಎಂಬುದು ಸ್ಪಷ್ಟ. ಅವರ ಈ ಧ್ರುವೀಕರಣದ ರಾಜಕೀಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಳಸಿದರೆ ಅದಕ್ಕೆ ಹೆಚ್ಚು ಪ್ರಚಾರ ಸಿಗುತ್ತದೆ ಎಂಬ ಕಲ್ಪನೆ ಅವರಿಗಿದೆ. ಅದರ ಭಾಗವಾಗಿಯೇ ಈ ಪ್ರಯೋಗ ಎಂದು ಟೀಕಾಪ್ರಹಾರ ನಡೆಸಿದೆ. ಈ ಕುತಂತ್ರ ರಾಜಕಾರಣ ನಡೆಸಲು ಪ್ರಧಾನಿಯವರೇ ರಾಜ್ಯ ಬಿಜೆಪಿಗೆ ನಿರ್ದೇಶನ ನೀಡಿದರೆ ಆರ್‌ಎಸ್‌ಎಸ್ ಪ್ರಣೀತ ಸಿದ್ಧಾಂತದ ಆಧಾರದಲ್ಲಿ ದ್ವೇಷವನ್ನು ಹರಡಲು ಒಕ್ಕಲಿಗ ಸಮುದಾಯವನ್ನು ಕೊಲೆಗಡುಕರು ಎಂದು ಚಿತ್ರಿಸಿ ಅವಮಾನ ಮಾಡಲಾಗಿದೆ ಎಂದು ಆರೋಪಿಸಿದೆ. ತಾಳ್ಮೆ, ಸ್ವಾಭಿಮಾನ, ಸ್ವಂತಿಕೆ, ಸೇವೆ, ಸೌಹಾರ್ದತೆ ಮತ್ತು ಸಮನ್ವಯ ತತ್ವಗಳನ್ನು ಅಳವಡಿಸಿಕೊಂಡು ಬೆಳೆದಿದ್ದು ಈ ನಾಡಿನ ಒಕ್ಕಲಿಗ ಸಮುದಾಯದ ಹೆಗ್ಗಳಿಕೆ. ದ್ವೇಷ ಮತ್ತು ಹಸಿ ಸುಳ್ಳುಗಳನ್ನು ಅವರೆಂದು ಪೋಷಿಸಿ, ಬೆಳೆಸಿದವರಲ್ಲ. ಒಂದೀಡಿ ಸಮುದಾಯವನ್ನು ಇಷ್ಟು ನಿಕೃಷ್ಟವಾದ ರಾಜಕಾರಣಕ್ಕೆ ಇಳಿಸಿ, ಬಳಸಬಹುದು ಎಂಬ ಚಿಂತನೆಯೇ ಹೊಲಸು ಎಂದಿದೆ. ಇಂತಹ ಚಿಲ್ಲರೆ ರಾಜಕಾರಣವು ಈ ಸಲದ ಚುನಾವಣೆಯಲ್ಲಿ ಯಾವ ಫಲವನ್ನೂ ನೀಡುವುದಿಲ್ಲ. ನಾಡಿನ ಒಕ್ಕಲಿಗ ಸಮುದಾಯ ಬಹಳ ಪ್ರಬುದ್ಧವಾಗಿ ಈ ಮಹಾ ಸುಳ್ಳಿನ ರಾಜಕಾರಣವನ್ನು ಎದುರಿಸಲಿದೆ. ಚುನಾವಣೆಯಲ್ಲಿ ರಾಜ್ಯ ಬಿಜೆಪಿಗೆ ಕಪಾಳಮೋಕ್ಷ ಕಟ್ಟಿಟ್ಟಬುತ್ತಿ. ಸತ್ಯ, ಸಹಬಾಳ್ವೆ ಮತ್ತು ವಿಶ್ವ ಮಾನವ ತತ್ವವಷ್ಟೇ ಗೆಲ್ಲಲಿದೆ ಎಂದು ಹೇಳಿದೆ.

ಇಂದು ರಾಜ್ಯ ಮಟ್ಟದ ಕಾರ್ಯಾಗಾರ

ಮೈಸೂರು,ಮಾ.13– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಅಭಿವೃದ್ಧಿ ನಿಗಮದ ವತಿಯಿಂದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ನಿಯಮ 2013 ರ ಪರಿಣಾಮಕಾರಿ ಅನುಷ್ಠಾನ ಕುರಿತು ರಾಜ್ಯ ಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಮಾ.14 ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಸಾಮಾಜಿಕ ಮತ್ತು ಸಬಲೀಕರಣ ಮಂತ್ರಾಲಯದ ಸಚಿವ ಎ. ನಾರಾಯಣ ಸ್ವಾಮಿ ಸಾಕ್ಷ್ಯಚಿತ್ರ ಬಿಡುಗಡೆ ಮಾಡುವರು. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಮತ್ತು ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್ "ಆಯೋಗದ ಎರಡು ವರ್ಷಗಳ ಸಾಧನೆ" ಪುಸ್ತಕವನ್ನು ಬಿಡುಗಡೆ ಮಾಡುವರು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಶಿವಣ್ಣ .ಎಂ ಕೋಟೆ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ವೆಂಕಟೇಶ್, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ. ವೆಂಕಟೇಶ್, ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್, ಟಿ.ಐ.ಡಿ.ಇ.ನ ಕಾರ್ಯನಿರ್ವಾಹಕ ನಿರ್ದೇಶಕ ಕೆ.ರಾಜೇಂದ್ರನ್ ಹಾಗೂ ಬಿ.ಒ.ಆರ್.ಡಿ.ಎ.ನ ನಿರ್ದೇಶಕ ಸ್ಟಾನ್ಲಿನ್ ಟ್ಸೆಫೆಲ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಭೂತ, ಭವಿಷ್ಯತ್ತಿನ ಗೋಜಿಲ್ಲದೆ ವರ್ತಮಾನದ್ದೇ ನೈಜ ಜೀವನ

ವಿಶೇಷಚೇತನ ಸಾಧಕಿ ಸುಮಿತ್ರ ಅಭಿಮತ



ಮೈಸೂರು, ಮಾ.13–ನಿನ್ನೆಯನ್ನು ನೆನೆಸಿಕೊಳ್ಳದೆ, ನಾಳೆಯ ನಿರೀಕ್ಷಿಸದೆ ವರ್ತಮಾನದಲ್ಲಿ ಜೀವಿಸುವುದೇ ಜೀವನ ಎಂದು ವಿಶೇಷಚೇತನ ಸಾಧಕಿ ಸುಮಿತ್ರ ತಿಳಿಸಿದರು. ನಗರದ ಮೈಸೂರು ಆರ್ಟ್ ಗ್ಯಾಲರಿ ಆಯೋಜಿಸಿದ್ದ 77ನೇ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ತಾವು ಸಾಗಿ ಬಂದ ದಾರಿಯನ್ನು ಸ್ಮರಿಸಿಕೊಂಡ ಸುಮಿತ್ರ, ಬಾಲ್ಯದಲ್ಲಿಯೇ ಪೋಲಿಯೋ ಕಾಯಿಲೆಗೆ ತುತ್ತಾಗಿ ಕಾಲುಗಳ ಸ್ವಾಧೀನ ತಪ್ಪಿದರೂ, ಚಿಂತಿಸದೆ ಅದನ್ನೇ ಸವಾಲಾಗಿ ಸ್ವೀಕರಿಸಿ ಶಿಕ್ಷಣ ಪಡೆದು, ಹಲವಾರು ಸವಾಲುಗಳನ್ನು ಎದುರಿಸಿ ಉಚ್ಚನ್ಯಾಯಾಲಯದ ಉದ್ಯೋಗಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಈಗಲೂ ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದಾಗಿ ತಿಳಿಸಿದರು.

ಬಡ ರೋಗಿಗಳಿಗೆ ದಾದಿಯಾಗಿ, ಹಸಿದವರಿಗೆ ಮಾತೆಯಾಗಿ ಹಾಗೂ ಗ್ರಾಮೀಣ ಪ್ರದೇಶದ ಶಿಕ್ಷಣ ವಂಚಿತರಿಗೆ ಆಸರೆಯಾಗಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ನೃಪತುಂಗ ಕನ್ನಡ ಶಾಲೆಗೆ 10 ಸಾವಿರ ರೂಗಳ ದೇಣಿಗೆಯನ್ನು ಅವರು ನೀಡಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮನೋರೋಗ ತಜ್ಞೆ ಡಾ. ಸುಜಾತ ಭಾಸ್ಕರ್ ಮಾತನಾಡಿ, ಇಂದು ಶಿಕ್ಷಣ ದಾರಿತಪ್ಪುತ್ತಿದ್ದು ಮಕ್ಕಳು ತಮ್ಮ ಬಾಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಸಂಬಂಧಗಳು ಕಾಣೆಯಾಗುತ್ತಿವೆ. ಮೊಬೈಲ್, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದಾಗಿ ಪೋಷಕರು ಮಕ್ಕಳೊಂದಿಗೆ ಕಳೆಯಲು ಸಮಯವಿಲ್ಲದಂತಾಗಿದೆ. ಇವೆಲ್ಲವನ್ನೂ ಬದಿಗಿಟ್ಟು ಮಕ್ಕಳೊಂದಿಗೆ ಕೆಲಕಾಲ ಕಳೆಯುವಂತೆ ಸಲಹೆ ನೀಡಿದರು. ವಿಶೇಷ ಆಹ್ವಾನಿತರಾಗಿ ಹೇಮಲತಾ, ರೇಣುಕಾ, ರೇಖಾ, ರೋಹಿಣಿ ಹಾಗೂ ಜಯಶ್ರೀ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮೈಸೂರು ಆರ್ಟ್ ಗ್ಯಾಲರಿಯ ಸಂಸ್ಥಾಪಕರಾದ ಎಲ್.ಶಿವಲಿಂಗಪ್ಪ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಕಾರ್ಯದರ್ಶಿ ಡಾ.ಜಮುನಾರಾಣಿ ಮಿರ್ಲೆ ಸಂವಾದ ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು. ಸಾಂಬಮೂರ್ತಿಯವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಚಾಲಕ ಶ್ರೀಕಂಠಮೂರ್ತಿ ವಂದಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಚಿರಂಜೀವಿ ಸಂಸ್ಥೆ: ನಾಡೋಜ ಮಹೇಶ್ ಜೋಶಿ

ಬನ್ನೂರು ರಾಜು ಸೇರಿ 49 ಮಂದಿಗೆ ದತ್ತಿ ಪ್ರಶಸ್ತಿ ಪ್ರದಾನ



ಮೈಸೂರು, ಮಾ. 13– ಏಳು ಕೋಟಿ ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಿರುವ ನೂರೆಂಟು ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಪರಿಷತ್ತು ಸೂರ್ಯ ಚಂದ್ರರಾದಿಯಾಗಿ ಕನ್ನಡ ನೆಲ, ಜಲ, ಕನ್ನಡ ಭಾಷೆ ಇರುವ ತನಕವೂ ಮಾತ್ರವಲ್ಲ, ಚಿರಂಜೀವಿ ಸಂಸ್ಥೆಯೆಂದು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಹೇಳಿದರು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದ ಶ್ರೀ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಜರುಗಿದ 2021ನೇ ಸಾಲಿನ ವಿವಿಧ ಸಾಹಿತ್ಯ ಕೃತಿಗಳಿಗೆ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಸ್ತ ಕನ್ನಡಿಗರ ಅಸ್ಮಿತೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತನ್ನು ಮೃತ ಸಂಸ್ಥೆ ಎಂಬಂತೆ ಬಿಂಬಿಸಿ ದೂರದರ್ಶನ ಕೇಂದ್ರದಲ್ಲಿ ಅಸಂಬದ್ಧ ಮಾತುಗಳನ್ನಾಡಿರುವ ದೂರದರ್ಶನ ಕೇಂದ್ರದ ಸಹಾಯಕ ನಿರ್ದೇಶಕಿ ನಿರ್ಮಲಾ ಸಿ.ಯಲಿಗಾರ್ ನಡೆಯನ್ನು ಪ್ರತಿಯೊಬ್ಬ ಕನ್ನಡಿಗರೂ ಖಂಡಿಸಬೇಕು ಎಂದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಡಾ.ನಿರಂಜನ ವಾನಳ್ಳಿ ಅವರು, ಕನ್ನಡ ಸಾಹಿತ್ಯ ಪರಂಪರೆ ಬಹು ದೊಡ್ಡದು. ಪ್ರತಿ ವರ್ಷ ಉತ್ತಮವಾದ ಸಾವಿರಾರು ಪುಸ್ತಕಗಳು ಪ್ರಕಟವಾಗಿ ಸಾಹಿತ್ಯ ಕ್ಷೇತ್ರವನ್ನು ಮುಟ್ಟುತ್ತಿವೆ. ಇಂತಹ ಕೃತಿಗಳನ್ನು ಓದುಗರಿಗೆ ಮುಟ್ಟಿಸುವ ಕೆಲಸ ವ್ಯವಸ್ಥಿತವಾಗಿ ಆಗಬೇಕಾಗಿದೆ. ಪ್ರತಿ ಮನೆಯಲ್ಲೂ ಒಂದು ಪುಟ್ಟ ಗ್ರಂಥಾಲಯ ಇರುವಂತಾಗಬೇಕು. ಹಾಗೆಯೇ ನಮ್ಮಲ್ಲಿ ಬರೆಯುವವರ ಸಂಖ್ಯೆ ಕೂಡ ಹೆಚ್ಚಿದ್ದು ಅವರನ್ನೂ ಸರಿಯಾಗಿ ಗುರುತಿಸಿ ಗೌರವಿಸುವಂತಹ ಕಾರ್ಯವೂ ಆಗಬೇಕಾಗಿದೆ ಎಂದು ಅವುಗಳ ಕರ್ತೃಗಳನ್ನು ಗೌರವಿಸುವ ಹಾಗೂ ಪರಿಷತ್ತಿನ ಮೂಲಕ ಕನ್ನಡ ಸೇವೆಯನ್ನು ಪ್ರೀತಿಯಿಂದ ಮಹೇಶ್ ಜೋಶಿ ಮಾಡುತ್ತಿದ್ದಾರೆಂದು ಶ್ಲಾಘಿಸಿದ ಅವರು, ಇಂದು 49 ಮಂದಿ ಸಾಹಿತಿಗಳು ದತ್ತಿ ಪ್ರಶಸ್ತಿಯ ಗೌರವಕ್ಕೆ ಭಾಜನರಾಗಿದ್ದಾರೆ. ಇದು ಮುಂದಿನ ವರ್ಷ ನೂರು ಆಗಬೇಕೆಂದು ಆಶಿಸಿದರು.

ಮುಖ್ಯಮಂತ್ರಿಗಳ ಕಾರ್ಯದರ್ಶಿ ಹಾಗೂ ಮಂಡ್ಯ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಗಳೂ ಆದ ಜಯರಾಮ್ ರಾಯಪೂರ, ಸಾಹಿತಿಗಳಾದ ಬನ್ನೂರು ಕೆ.ರಾಜು, ಸೋಮಲಿಂಗ ಬೇಡರ, ಆನಂದ್ ಗೋಪಾಲ್, ಸ್ಮಿತಾ ಅಮೃತರಾಜ್ ಸಂಪಾಜೆ, ಶಂಕರ ದೇವರು ಹಿರೇಮಠ ಸೇರಿದಂತೆ ನಲವತ್ತೊಂಬತ್ತು ಮಂದಿ ಸಾಹಿತಿಗಳಿಗೆ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ದತ್ತಿ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿದರು.

ನಂತರ ಮಾತನಾಡಿದ ಅವರು, ಒಂದನೇ ತರಗತಿಯಿಂದ ಐದರವರೆಗೆ ಕನ್ನಡ ಭಾಷೆಯಲ್ಲಿ ಕಲಿಯುವುದು ಕಡ್ಡಾಯವಾಗಬೇಕು. ಇದಕ್ಕಾಗಿ ಇರುವ ಭಾಷಾ ಮಾಧ್ಯಮದ ಗೊಂದಲವನ್ನು ಇದುವರೆಗೂ ಸರಿಪಡಿಸಲು ಸಾಧ್ಯವಾಗಿಲ್ಲ. ಸರ್ಕಾರಕ್ಕೆ ಈ ಬಗ್ಗೆ ಇಚ್ಛಾಶಕ್ತಿ ಇದೆ. ಆದರೆ ಅದನ್ನು ಕಾನೂನಿನ ಮೂಲಕ ಜಾರಿಗೆ ತರುವಾಗ ತೊಡಕು ಉಂಟಾಗುತ್ತಿದೆ. ಇದಕ್ಕಾಗಿ ನ್ಯಾಯಾಲಯದಿಂದ ಉಂಟಾಗುವ ಅಡ್ಡಿ ನಿವಾರಣೆಗೆ ಸಾಂವಿಧಾನಿಕ ರಕ್ಷಣೆ ಕೊಡಬೇಕು. ಇದು ಕೇವಲ ಕನ್ನಡ ಭಾಷೆಗೆ ಸೀಮಿತವಾಗದೆ ಇತರೆ ಭಾರತೀಯ ಭಾಷೆಗಳಿಗೂ ಈ ಸಮಸ್ಯೆ ಕಗ್ಗಂಟಾಗಿದ್ದು ಅವರಿಗೂ ಇದರ ಅನುಭವ ಆಗಿದೆ. ಆದ್ದರಿಂದ ಇದನ್ನು ಮೆಟ್ಟಿ ನಿಲ್ಲಲು ನಮ್ಮ ಭಾರತೀಯ ಭಾಷೆಗಳಿಗೆ ಸಾಂವಿಧಾನಿಕ ರಕ್ಷಣೆ ಕೊಡಲೇಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಕನ್ನಡವೂ ಸೇರಿದಂತೆ ಇತರೆ ಭಾರತೀಯ ಭಾಷೆಗಳಿಗೂ ಬಹಳ ಕಷ್ಟವಾಗುತ್ತದೆ ಎಂದು ಹೇಳಿದರು.

ದತ್ತಿ ಪ್ರಶಸ್ತಿ ಪುರಸ್ಕೃತರ ಪರವಾಗಿ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿದರು. ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು, ಪತ್ರಕರ್ತ ಹಾಗೂ ಸಾಹಿತಿ ಎನ್.ಎಸ್. ಶ್ರೀಧರಮೂರ್ತಿ, ಮೈಸೂರು ಕನ್ನಡ ವೇದಿಕೆಯ ಅಧ್ಯಕ್ಷ ಎಸ್. ಬಾಲಕೃಷ್ಣ, ಭಾರತ ಜ್ಞಾನಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಡಾ.ತಲಕಾಡು ಚಿಕ್ಕರಂಗೇಗೌಡ ಮುಂತಾದವರಿದ್ದರು.

ಪ್ರೊ.ಮಲೆಯೂರು ಗುರುಸ್ವಾಮಿ, ಧ್ರುವನಾರಾಯಣ ಸದಾ ಸ್ಮರಣೀಯರು

■ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ನುಡಿನಮನ ■ ನಟರಾಜ ಪ್ರತಿಷ್ಠಾನ, ಮೈಸೂರು ಶರಣ ಮಂಡಳಿಯಿಂದ ಶ್ರದ್ಧಾಂಜಲಿ



ಮೈಸೂರು, ಮಾ.13–ಶ್ರೇಷ್ಠ ಚಿಂತಕ ಪ್ರೊ.ಮಲೆಯೂರು ಗುರುಸ್ವಾಮಿ ಹಾಗೂ ಸಜ್ಜನ ರಾಜಕಾರಣಿ ಆರ್. ಧ್ರುವನಾರಾಯಣ ಅವರ ನೆನಪು ಶಾಶ್ವತವಾಗಿರುತ್ತದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅಭಿಪ್ರಾಯಪಟ್ಟರು.

ಶ್ರೀ ನಟರಾಜ ಪ್ರತಿಷ್ಠಾನ ಹಾಗೂ ಮೈಸೂರು ಶರಣ ಮಂಡಳಿಯು ನಟರಾಜ ಸಭಾಭವನದಲ್ಲಿ ಸೋಮವಾರ ಏರ್ಪಡಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಭಾವಚಿತ್ರಗಳಿಗೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಹುಟ್ಟಿದ ಎಲ್ಲರಿಗೂ ಸಾವು ಖಚಿತ. ಈ ಎರಡರ ಮಧ್ಯ ಬದುಕನ್ನು ಸಾಗಿಸಬೇಕೇ ವಿನಹ ನಾವು ಬಾಧಕರಾಗಬಾರದು. ಸುಖ, ದುಃಖ, ನೋವು – ನಲಿವುಗಳನ್ನು ಅನುಭವಿಸಿ ಜೀವನದಲ್ಲಿ ಸಾಧನೆ ಮಾಡಬೇಕು ಎಂದರು.

ಧ್ರುವನಾರಾಯಣ್ ಅವರು ನಗುಮುಖದ ಒಡೆಯ, ಸರಳ, ಸಜ್ಜನಿಕೆಯ ರಾಜಕಾರಣಿ ಹಾಗೂ ಸ್ನೇಹಜೀವಿ ಕೂಡ ಆಗಿದ್ದರು. ಮಲೆಯೂರು ಗುರುಸ್ವಾಮಿ ಅವರು ಶ್ರೇಷ್ಠ ಸಾಹಿತಿ. ಹಾಗಾಗಿ ಈ ಇಬ್ಬರು ನಮ್ಮನ್ನು ಅಗಲಿದರೂ ಕೂಡ ಅವರಿಬ್ಬರೂ ನಮ್ಮೆಲ್ಲರಲ್ಲಿಯೂ ಜೀವಂತವಾಗಿದ್ದಾರೆ. ಬದುಕಿರುವಾಗಲೇ ಎಲ್ಲರಿಗೂ ಒಳ್ಳೆಯದನ್ನೇ ಬಯಸೋಣ ಯಾರಿಗೂ ತೊಂದರೆ ಕೊಡುವುದು ಬೇಡ. ಇದ್ದಷ್ಟು ದಿನ ಎಲ್ಲರನ್ನು ಪ್ರೀತಿಸೋಣ, ನಮ್ಮ ಸಮಾಜವನ್ನು ಅಭಿವೃದ್ಧಿ ಮಾಡೋಣ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಧ್ರುವನಾರಾಯಣ್ ಮತ್ತು ಮಲೆಯೂರು ಗುರುಸ್ವಾಮಿ ಈ ಇಬ್ಬರು ದೊಡ್ಡ ವಿದ್ಯಾವಂತರಾಗಿದ್ದರು. ಸಂಗೀತ ವಿದುಷಿ ನಾಗರತ್ನಮ್ಮ ಕುರಿತು 'ಕಪಿಲೆ ಹರಿದಳು ಕಡಲಿಗೆ' ಕಾದಂಬರಿಯನ್ನು ಮಲೆಯೂರು ಗುರುಸ್ವಾಮಿ ರಚಿಸಿದ್ದಾರೆ. ಈ ಕಾದಂಬರಿಯನ್ನು ಪ್ರತಿಯೊಬ್ಬರು ಓದಲೇಬೇಕು ಏಕೆಂದರೆ ಚಾರಿತ್ರಿಕ ಕಾದಂಬರಿಗಳನ್ನು ಸೊಗಸಾಗಿ ಕಟ್ಟುವುದರಲ್ಲಿ ಮಲೆಯೂರು ಹೆಸರುವಾಸಿಯಾಗಿದ್ದರು.

ಧ್ರುವನಾರಾಯಣ್ ಅವರು 2004 ರಲ್ಲಿ ಒಂದೇ ಒಂದು ಮತದಿಂದ ಗೆದ್ದು ದಾಖಲೆ ನಿರ್ಮಿಸಿದರು. 2008ರಲ್ಲಿ ಎರಡನೇ ಬಾರಿ ವಿಧಾನಸಭೆಗೆ ಆಯ್ಕೆಯಾದರು. 2009 ಹಾಗೂ 2014ರ ಲೋಕಸಭೆಗೆ ಆಯ್ಕೆಯಾಗಿ ಸಮಾಜ ಸೇವೆಯಲ್ಲಿ ಹೆಸರುವಾಸಿಯಾದರು. ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿ, ಧ್ರುವನಾರಾಯಣ ಅವರನ್ನು ಎಲ್ಲಾ ಪಕ್ಷ, ಜಾತಿಯವರು ಪ್ರೀತಿಸುತ್ತಿದ್ದರು. ಅವರ ನಡವಳಿಕೆ ಆ ರೀತಿ ಇತ್ತು ಬಹುಶಃ ಈ ರೀತಿಯ ರಾಜಕಾರಣದ ಕೊನೆಯ ಕೊಂಡಿಯಾಗಿದ್ದಾರೆ ಎಂದರು.

ಗುಂಡ್ಲುಪೇಟೆ ಕಾಂಗ್ರೆಸ್ ಮುಖಂಡ ಎಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ, ಮಹದೇಶ್ವರ ಬೆಟ್ಟ ಪ್ರಾಧಿಕಾರ ಆಗಬೇಕಾದರೆ ಪ್ರೊ.ಮಲೆಯೂರು ಗುರುಸ್ವಾಮಿ ಅಮು ಕಾರಣ. ಅವರು ನಮ್ಮ ತಂದೆ ಎಚ್.ಎಸ್. ಮಹದೇವಪ್ರಸಾದ್ ಅವರು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಈ ಬಗ್ಗೆ ಸಾಕಷ್ಟು ಸಲಹೆ ನೀಡಿದ್ದರು ಎಂದು ಸ್ಮರಿಸಿದರು.

ಧ್ರುವನಾರಾಯಣ ಅವರು 24/7 ರಾಜಕಾರಣಿ. ಆಹ್ವಾನಿಸಿದ ಎಲ್ಲಾ ಕಾರ್ಯಕ್ರಮಗಳಿಗೆ ಹಾಜರಾಗುತ್ತಿದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ನಂತರ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಸುತ್ತುತ್ತಿದ್ದರು. ನಮ್ಮ ಕ್ಷೇತ್ರದಲ್ಲಿ ನಮಗೆ ಮಾರ್ಗದರ್ಶಕರಾಗಿದ್ದರು. ಅವರ ನಿಧನದಿಂದ ಸಮಾಜಕ್ಕೆ ಭಾರೀ ನಷ್ಟವಾಗಿದೆ ಎಂದರು.

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್. ಶಿವರಾಜಪ್ಪ ಮಾತನಾಡಿ, ಅಗಲಿದ ಇಬ್ಬರೂ ತಮ್ಮದೇ ಆದ ರೀತಿಯಲ್ಲಿ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಅವರ ಆದರ್ಶಗಳನ್ನು ನಾವು ಪಾಲಿಸೋಣ ಎಂದರು.

ಮೈಸೂರು ಶರಣ ಮಂಡಳಿಯ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಪ್ರಾಸ್ತಾವಿಕ ಭಾಷಣ ಮಾಡಿದರು. ವಾತ್ಸಲ್ಯ ಬಿ.ಇಡಿ ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್ ದಳಪತಿ ಇದ್ದರು.

ಕಿವಿ, ಮೂಗು, ಗಂಟಲು ಉಚಿತ ತಪಾಸಣಾ ಶಿಬಿರ

ಮೈಸೂರು, ಮಾ. 13– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಮಾ. 18ರವರೆಗೆ ಕಿವಿ, ಮೂಗು ಹಾಗೂ ಗಂಟಲು ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ನುರಿತ ತಜ್ಞವೈದ್ಯರಾದ ಡಾ.ಪ್ರದೀಪ್ ಶಂಕರ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಪದೇ ಪದೆ ನೆಗಡಿ ಸಮಸ್ಯೆ, ಮೂಗು ಕಟ್ಟಿಕೊಳ್ಳುವಿಕೆ, ಮೂಗಿನಲ್ಲಿ ದುರ್ಮಾಂಸ, ಮೈಗ್ರೇನ್, ತಲೆನೋವು, ಸೀನುವಿಕೆ, ಮೂಗು ಸೋರುವಿಕೆ, ಕಿವಿನೋವು, ಕಿವಿ ಸೋರುವಿಕೆ, ಗಂಟಲುನೋವು ಮುಂತಾದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ50 ರಿಯಾಯತಿ ಇದೆ. ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು.

ಮೈಸೂರು ಜಿಲ್ಲಾ ಕಸಾಪ ಉಪಾಧ್ಯಕ್ಷರಾಗಿ ಜಾಕೀರ್ ಹುಸೇನ್ ನೇಮಕ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮೈಸೂರು ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ 2022 ನೇ ಸಾಲಿನ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷರಾಗಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ನೇಮಕ ಮಾಡಿದರು. ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಹಾಗೂ ಪಂಪ ಪ್ರಶಸ್ತಿ ಪುರಸ್ಕೃತ ಸಿ.ಪಿ. ಕೃಷ್ಣಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ, ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರೊ. ವಸಂತ್ ಕುಮಾರ್, ಪ್ರಶಾಂತ್ ಆರ್ಯ, ಪವನ್ ಸಿದ್ದರಾಮ, ರಫಿವುಲ್ಲಾ ಖಾನ್ ಇತರರು ಉಪಸ್ಥಿತರಿದ್ದರು.


ಮಿಸ್ಟರ್ ಒಡೆಯರ್ ಕ್ಲಾಸಿಕ್ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆ

ಮೈಸೂರು, ಮಾ. 13–ಮೈಸೂರಿನ ಹೆಬ್ಬಾಳಿನಲ್ಲಿರುವ ಗಿಣೀಸ್ ಫಿಟ್ನೆಸ್ ವರ್ಲ್ಡ್ ವತಿಯಿಂದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮರಣಾರ್ಥ ಮಾ.26 ರಂದು ಸಂಜೆ 5.30 ಗಂಟೆಗೆ ವಿಜಯನಗರ ರೈಲ್ವೆ ಬಡಾವಣೆ ಮೈದಾನದಲ್ಲಿರುವ ರಂಗ ಮಂಟಪದಲ್ಲಿ ಮಿಸ್ಟರ್ ಒಡೆಯರ್ ಕ್ಲಾಸಿಕ್ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 8217255720, 8867411996 ಸಂಪರ್ಕಿಸಬಹುದು.

ಮೈಸೂರಿನಲ್ಲಿ ಆಲ್ಟಿಗ್ರೀನ್ ಮ್ಯಾಗ್ನಮ್ ವೆಂಚರ್ಸ್ ಉದ್ಘಾಟನೆ

ಮೈಸೂರು, ಮಾ.13–ಭಾರತದ ಮುಂಚೂಣಿ ವಾಣಿಜ್ಯ ಎಲೆಕ್ಟ್ರಿಕ್ ವಾಹನ ತಯಾರಕ ಸಂಸ್ಥೆ ಆಲ್ಟಿಗ್ರೀನ್ ಮೈಸೂರಿನಲ್ಲಿ ತನ್ನ ಹೊಚ್ಚ ಹೊಸ ರಿಟೇಲ್ ಎಕ್ಸ್‌ಪೀರಿಯೆನ್ಸ್ ಸೆಂಟರ್– ಮ್ಯಾಗ್ನಮ್ ವೆಂಚರ್ಸ್ ಅನ್ನು ಉದ್ಘಾಟಿಸಿದೆ. ಇದು ಭಾರತದಲ್ಲಿನ ಕಂಪನಿಯ 23ನೇ ರಿಟೇಲ್ ಡೀಲರ್‌ಶಿಪ್ ಆಗಿದೆ. ಈಗಾಗಲೇ ಇದು, ಮುಂಬೈ, ಚೆನ್ನೈ, ಹೈದರಾಬಾದ್ ಮತ್ತು ಬೆಂಗಳೂರಿನಂತಹ ಪ್ರಮುಖ ಮೆಟ್ರೋಗಳಲ್ಲಿ ಡೀಲರ್‌ಶಿಪ್ ತೆರೆದಿದೆ. ಆಲ್ಟಿಗ್ರೀನ್‌ನ ಇತರೆ ನಗರಗಳಲ್ಲಿರುವ ಎಕ್ಸ್‌ಪೀರಿಯೆನ್ಸ್ ಸೆಂಟರ್‌ಗಳಂತೆಯೇ ಮೈಸೂರಿನ ಹೊಸ ಡೀಲರ್‌ಶಿಪ್ ಕೂಡಾ ಇವಿ ಆಸಕ್ತರಿಗೆ ಆಲ್ಟಿಗ್ರೀನ್‌ನ ಎಲೆಕ್ಟ್ರಿಕ್ ಕಾರ್ಗೋ ವಾಹನಗಳ ಶ್ರೇಣಿಯನ್ನು ಹೊಂದಲು ಅವಕಾಶ ನೀಡುತ್ತದೆ. ಮೈಸೂರಿನಲ್ಲಿ ಮ್ಯಾಗ್ನಮ್ ವೆಂಚರ್ಸ್‌ನೊಂದಿಗೆ ಆಲ್ಟಿಗ್ರೀನ್ ಸಹಭಾಗಿತ್ವ ಸಾಧಿಸಿದೆ ಎಂದು ಡಾ.ಎಂ.ಪಿ. ಶ್ಯಾಮ್ ತಿಳಿಸಿದ್ದಾರೆ. ಮೈಸೂರಿನ ಆಲ್ಟಿಗ್ರೀನ್ ರಿಟೇಲ್ ಎಕ್ಸ್‌ಪೀರಿಯೆನ್ಸ್ ಸೆಂಟರ್ ಅನ್ನು ಆಲ್ಟಿಗ್ರೀನ್ ಪ್ರೊಪಲ್ಶನ್ ಲ್ಯಾಬ್ಸ್‌ನ ಸಂಸ್ಥಾಪಕರು ಮತ್ತು ಸಿಇಒ ಡಾ.ಅಮಿತಾಭ್ ಶರಣ್ ಉದ್ಘಾಟಿಸಿದರು.

ನಿಧನ



ಚನ್ನಕೇಶವ

ಮೈಸೂರು, ಮಾ. 13– ಶಾರದಾ ವಿಲಾಸ ಬಿ.ಎಡ್.ಕಾಲೇಜಿನ ನಿವೃತ್ತ ಉದ್ಯೋಗಿ ಚನ್ನಕೇಶವ ಅವರು ಶನಿವಾರ (ಮಾ.11) ಜೆ.ಪಿ ನಗರದ ತಮ್ಮ ನಿವಾಸದಲ್ಲಿ ನಿಧನ ಹೊಂದಿದರು.

ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 70 ವರ್ಷ ವಯಸ್ಸಾಗಿತ್ತು.ಮೃತರು ಪತ್ನಿ ಡಾ.ಸಂಧ್ಯಾಕೇಶವ್, ಒಬ್ಬ ಮಗ, ಒಬ್ಬ ಮಗಳು ಸೇರಿದಂತೆ ಅಪಾರ ಬಂಧುವರ್ಗ ಹಾಗೂ ಅಭಿಮಾನಿಗಳನ್ನು ಅಗಲಿದ್ದಾರೆ. ಮೃತರ ಅಂತ್ಯ ಕ್ರಿಯೆಯು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.3.2023 ಮಂಗಳವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೀವನ್ ಜೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ:** ಭೂಮಿಯ ಪರಿಸರದಲ್ಲಿ ಪ್ಲಾಸ್ಟಿಕ್ ಮಾಲಿನ್ಯದ ವಿರುದ್ಧ ಹೋರಾಡುವುದು ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷೆ ಡಾ.ಶಾಂತ ಎ.ತಿಮ್ಮಯ್ಯ, ಗೌರವ ಅತಿಥಿಗಳು : ನೆದರ್‌ಲ್ಯಾಂಡ್ಸ್ ಸ್ಕೋಪ್ ಅಧ್ಯಕ್ಷ ಪ್ರೊ. ಜಾನ್ ಸ್ಯಾಮ್‌ಸೆತ್, ನ್ಯಾಮ್ ಎಸ್ ಅಂಡ್ ಟಿ ಸೆಂಟರ್ ಡೈರೆಕ್ಟರ್ ಜನರಲ್ ಡಾ. ಅಮಿತವ ಬಂಡೋಪಾಧ್ಯಾಯ, ಜೆಎಸ್‌ಎಸ್ ಅಕಾಡೆಮಿ ಕುಲಪತಿ ಡಾ. ಸುರಿಂದ್ರ್ ಸಿಂಗ್, ಕುಲಸಚಿವ ಡಾ. ಬಿ. ಮಂಜುನಾಥ, ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಮೆಎಸ್‌ಎಸ್ ಮೆಡಿಕಲ್ ಕಾಲೇಜು, ಬೆಳಗ್ಗೆ 9ಕ್ಕೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್ :** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30 ರಿಂದ ರಾತ್ರಿ 9.30 ರವರೆಗೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಿಆರ್‌ಡಿಒ ನಿವೃತ್ತ ಮುಖ್ಯ ಪಿಆರ್‌ಒ ಜಯಪ್ರಕಾಶ್ ರಾವ್ ಅವರಿಂದ ಭಾರತೀಯ ರಕ್ಷಣಾ ವಲಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಇತ್ತೀಚಿನ ಬೆಳವಣಿಗೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿಎಸ್. ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಎಂ.ಆರ್. ಸುಧಾ, ಕೆ.ಪಿ. ರೇವತಿ, ಎ.ಎಸ್. ನಾಗಲಕ್ಷ್ಮೀ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್. ಎಸ್.ಎಸ್., 8.45 ಕರೆಗೊಂದು ಗೀತೆ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ– ಎಸ್. ಶಂಕರ್, ನಿರ್ಮಾಣ– ಗೀತಾ ರಮಾನಂದ್, 10.30 ನಮ್ಮ ಆರೋಗ್ಯ–ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಪ್ರಣವ ಹೆಲ್ತ್ ಕೇರ್, ಕುವೆಂಪುನಗರ, ಮೈಸೂರು, ಭಾಗವಹಿಸುವ ತಜ್ಞರು– ಎಂ.ಎಸ್. ಗಿರೀಶ್

ಮಧ್ಯಾಹ್ನ: 12.30 ದೇವರನಾಮ, 12.45 ಬದುಕಿನ ರುಚಿ ಹೆಚ್ಚಿಸುವ ಅಭಿರುಚಿಗಳು–ಸವಿತಾ ಎಂ.ಕೆ. ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ಮೈಸೂರು ರಂಗಸ್ವಾಮಿ, 3.00 ಎನ್.ಭಾರತಿ–ವೀಣಾವಾದನ, 4.00 ಕಥಾ ಕಾಲಕ್ಷೇಪ "ಭೀಮ ಜರಾಸಂಧ", ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ– ಇತ್ತೀಚೆಗೆ ನಾಗೇನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ನೈಸರ್ಗಿಕ ಹಾಗೂ ಸಾವಯವ ಕೃಷಿ ತರಬೇತಿ ಕಾರ್ಯಾಗಾರದಲ್ಲಿ ಡಾ. ದಯಾಮಣಿ ಕೆ.ಜೆ. ಅವರು ನೀಡಿದ ಉಪನ್ಯಾಸದ ಆಯ್ದ ಭಾಗಗಳ ಪ್ರಸಾರ, 9.15 ಯಕ್ಷಗಾನದ ಹಾಡುಗಳು–ಚೇವಾರು ಶಂಕರ ಕಾಮತ್ ಮತ್ತು ಬಳಗದವರಿಂದ ರತಿ ಕಲ್ಯಾಣ ಪ್ರಸಂಗದ ಹಾಡು, 9.30 ಹೆಚ್.ಕೆ. ನರಸಿಂಹಮೂರ್ತಿ ಮತ್ತು ಹೆಚ್.ಎನ್.ಭಾಸ್ಕರ್–ಯುಗಳ ವಯೋಲಿನ್ ವಾದನ, 10.00 ಗಮಕ ವಾಚನ, ವಾಚನ–ವಸಂತಾ ವೆಂಕಟೇಶ್, ವ್ಯಾಖ್ಯಾನ– ಡಾ.ಎನ್.ಕೆ.ರಾಮಶೇಷನ್

ಪ್ರಧಾನಮಂತ್ರಿ ಕ್ಷಯಮುಕ್ತ ಭಾರತ ಅಭಿಯಾನಕ್ಕೆ ಕೈಜೋಡಿಸಿದ ಮೈಸೂರಿನ ರಘುಲಾಲ್ ರಾಘವನ್ ಸೇರಿ ಹಲವರಿಗೆ ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿನಂದನೆ



ಬೆಂಗಳೂರಿನ ರಾಜಭವನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ 'ಕ್ಷಯ ರೋಗಿಗಳ ದತ್ತು ಪಡೆಯುವ ಮತ್ತು ನಿ-ಕ್ಷಯ ಮಿತ್ರ(ದಾನಿಗಳ) ಸನ್ಮಾನ' ಸಮಾರಂಭದಲ್ಲಿ ಮೈಸೂರಿನ ರಘುಲಾಲ್ ಮೆಡಿಕಲ್ಸ್‌ನ ಎನ್.ರಾಘವನ್(ಬಲದಿಂದ ಎರಡನೆಯವರು) ಸೇರಿದಂತೆ ಅನೇಕ ಮಹನೀಯರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅಭಿನಂದಿಸಿದರು.

ಬೆಂಗಳೂರು, ಮಾ.13-ಪ್ರಧಾನಮಂತ್ರಿ ಟಿಬಿ(ಕ್ಷಯ) ಮುಕ್ತ ಭಾರತ ಅಭಿಯಾನಕ್ಕೆ ಕೈ ಜೋಡಿಸಿರುವ ಸಹೃದಯಿಗಳನ್ನು ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಅಭಿನಂದಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಹೆಲ್ತ್ ಮಿಷನ್, ಕರ್ನಾಟಕ ಟಿಬಿ ಘಟಕ ಮತ್ತು ರಾಜ ಭವನದ ಸಹಯೋಗದಲ್ಲಿ ಇಲ್ಲಿನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ 'ಕ್ಷಯ ರೋಗಿಗಳ ದತ್ತು ಪಡೆಯುವ ಮತ್ತು ನಿ-ಕ್ಷಯ ಮಿತ್ರ(ದಾನಿಗಳ) ಸನ್ಮಾನ' ಸಮಾರಂಭದಲ್ಲಿ ಮೈಸೂರಿನ ರಘುಲಾಲ್ ಮೆಡಿಕಲ್ಸ್‌ನ ಎನ್.ರಾಘವನ್, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ, ಸಚಿವ ಗೋಪಾಲಯ್ಯ ಅವರ ಪತ್ನಿ ಎಸ್.ಪಿ.ಹೇಮಲತಾ ಗೋಪಾಲಯ್ಯ, ಮಂಡ್ಯ ಮಿಲ್ಕ್ ಯೂನಿಯನ್ ಲಿಮಿಟೆಡ್‌ನ ಎಂಡಿ ಡಾ.ಪಿ.ಆರ್.ಮಂಜೇಶ್, ಟಾಟಾ ಮೆಡಿಕಲ್ ಮತ್ತು ಡಯಾಗ್ನೋಸ್ಟಿಕ್‌ನ ಗಿರೀಶ್ ಕೃಷ್ಣಮೂರ್ತಿ, ಡಾ.ಫಾರೂಖ್ ಅಹಮದ್, ಜೀವಿತ್ ಎಂಟರ್‌ಪ್ರೈಸಸ್ ಸೇರಿದಂತೆ ಕ್ಷಯ ರೋಗಿಗಳ ದತ್ತು ಪಡೆದ ಅನೇಕ ಮಹನೀಯರನ್ನು ಗೌರವಿಸಿದರು.

> 'ನಿ-ಕ್ಷಯ ಮಿತ್ರ' ಮೂಲಕ ಟಿಬಿ ರೋಗಿಗಳ ದತ್ತು ಪಡೆದು ಅವರಿಗೆ ಪೌಷ್ಟಿಕ ಆಹಾರ, ಪೌಡರ್, ರೇಷನ್ ಕಿಟ್ ಒದಗಿಸಬಹುದು. ದಾನಿಗಳು ಕನಿಷ್ಠ 6 ತಿಂಗಳಿಂದ ಕೆಲ ವರ್ಷಗಳ ಅವಧಿಗೆ ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಅಧಿಕಾರಿ ಕಚೇರಿಯೊಂದಿಗೆ ಕರಾರು ಮಾಡಿಕೊಂಡು ಕಚೇರಿಗೆ ಅಥವಾ ರೋಗಿಗಳಿಗೆ ನೇರವಾಗಿ ಅಗತ್ಯ ವಸ್ತುಗಳನ್ನು ತಲುಪಿಸುತ್ತಾರೆ. ಜಿಲ್ಲೆಯಲ್ಲೂ ಅನೇಕ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಈ ಸತ್ಕಾರ್ಯಕ್ಕೆ ಕೈಜೋಡಿಸಿವೆ.
> -ಡಾ.ಮೊಹಮದ್ ಶಿರಾಜ್ ಅಹಮದ್
> ಮೈಸೂರು ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ

ಈ ವೇಳೆ ರಾಜ್ಯಪಾಲರು ಮಾತನಾಡಿ, ದೇಶದ ಪ್ರಧಾನಿ ನರೇಂದ್ರ ಮೋದಿ ಟಿಬಿ ಮುಕ್ತ ಭಾರತಕ್ಕಾಗಿ ಸಾರ್ವಜನಿಕ ಸಹಭಾಗಿತ್ವಕ್ಕೆ ಕರೆ ನೀಡಿದ್ದಾರೆ. ಪ್ರಧಾನ ಮಂತ್ರಿಯವರ ಟಿಬಿ ಮುಕ್ತ ಭಾರತ ಅಭಿಯಾನವನ್ನು ಜನಾಂದೋಲನವನ್ನಾಗಿ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಪ್ರಕಾರ, ಜಗತ್ತಿನ ಅನೇಕ ದೇಶಗಳು 2030ರ ವೇಳೆಗೆ ಟಿಬಿ ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿವೆ. ಆದರೆ ಪ್ರಧಾನಿ ಮೋದಿ ಅವರು 2025ರ ವೇಳೆಗೆ ಭಾರತ ಟಿಬಿ ಮುಕ್ತವಾಗಬೇಕೆಂಬ ಗುರಿ ಹೊಂದಿದ್ದಾರೆ. ಇದಕ್ಕೆ ಪೂರಕವಾಗಿ ರಾಜ್ಯದಲ್ಲಿ 'ಕ್ಷಯ ಮುಕ್ತ ಕರ್ನಾಟಕ-2025' ಗಾಗಿ ಯೋಜನೆಯನ್ನು ಅಳವಡಿಸಿಕೊಂಡಿದೆ ಎಂದರು.


'ನಿ-ಕ್ಷಯ 2.0' ಪೋರ್ಟಲ್ ಮೂಲಕ ಟಿಬಿ ರೋಗಿಗಳಿಗೆ ಸಮುದಾಯದ ಸಹಭಾಗಿತ್ವವನ್ನು ಒದಗಿಸುವ ಉಪಕ್ರಮ ನಿಜಕ್ಕೂ ಶ್ಲಾಘನೀಯವಾಗಿದೆ. ಈ ಪೋರ್ಟಲ್‌ನಲ್ಲಿ ಸುಮಾರು 13.5 ಲಕ್ಷ ಕ್ಷಯ ರೋಗಿಗಳು ನೋಂದಾಯಿಸಿಕೊಂಡಿದ್ದಾರೆ. ಅವರಲ್ಲಿ 89 ಲಕ್ಷ ಸಕ್ರಿಯ ಟಿಬಿ ರೋಗಿಗಳು ದತ್ತು ತೆಗೆದುಕೊಳ್ಳಲು ಒಪ್ಪಿಗೆ ನೀಡಿದ್ದಾರೆ. ನಿ-ಕ್ಷಯ ಡಿಜಿಟಲ್ ಪೋರ್ಟಲ್ ಟಿಬಿಯಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಸಮುದಾಯ ಬೆಂಬಲಕ್ಕಾಗಿ ವೇದಿಕೆಯನ್ನು ಒದಗಿಸುತ್ತಿದೆ. ನಾಗರಿಕರು, ಎನ್‌ಜಿಓಗಳು, ಕಾರ್ಪೊರೇಟ್ ಸಂಸ್ಥೆಗಳು, ಚುನಾಯಿತ ಪ್ರತಿನಿಧಿಗಳು ಮತ್ತಿತರರು ನಿ-ಕ್ಷಯ ಮಿತ್ರರಾಗುವ ಮೂಲಕ ಟಿಬಿ ಮುಕ್ತ ಭಾರತ ಅಭಿಯಾನವನ್ನು ಬೆಂಬಲಿಸಬೇಕು ಎಂದು ಹೇಳಿದರು.

ಒಬ್ಬರ ಜೀವ ಉಳಿಸುವ ಕಾರ್ಯ ಮಾನವೀಯ ಸೇವೆಯ ಅತ್ಯುತ್ತಮ ಕಾರ್ಯ. ವಿಶ್ವದ ಅತಿದೊಡ್ಡ ಆರೋಗ್ಯ ರಕ್ಷಣಾ ಯೋಜನೆಯಾದ 'ಆಯುಷ್ಮಾನ್ ಭಾರತ್' ಅಡಿಯಲ್ಲಿ, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲೂ ಟಿಬಿಗೆ ಸಂಬಂಧಿಸಿದ ಸೇವೆ ವಿಸ್ತಾರವಾಗಿದೆ. ರಾಜ್ಯ ಸರ್ಕಾರದ ಪ್ರಯತ್ನದ ಫಲವಾಗಿ ಟಿಬಿ ಬಾಧೆ ಕಡಿಮೆಯಾಗಿದೆ. ಇದಕ್ಕಾಗಿ ಸಚಿವರು ಹಾಗೂ ಅಧಿಕಾರಿಗಳು ಹಾಗೂ ನೌಕರರನ್ನು ಅಭಿನಂದಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಗುರುತಿಸಲಾದ 39,745 ಟಿಬಿ ರೋಗಿಗಳಲ್ಲಿ 25,895 ರೋಗಿಗಳು ಪೋಷಣೆ ಪಡೆಯಲು ಒಪ್ಪಿಗೆ ನೀಡಿದ್ದು ಅವರಲ್ಲಿ 25,110 ರೋಗಿಗಳನ್ನು ದತ್ತು ಪಡೆಯಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ಮೈಸೂರು ಸೇರಿ 10 ಜಿಲ್ಲೆಗಳ 100 ಟಿಬಿ ರೋಗಿಗಳನ್ನು ರಾಜಭವನದಿಂದ ದತ್ತು ತೆಗೆದುಕೊಳ್ಳಲಾಗಿದೆ ಎಂದು ಘೋಷಿಸಿದರು. ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ ಅವರು 500 ಟಿಬಿ ರೋಗಿಗಳನ್ನು ದತ್ತು ಪಡೆದು, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್, ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕ ಡಾ.ನವೀನ್ ಭಟ್ ಮತ್ತಿತರರು ಉಪಸ್ಥಿತರಿದ್ದರು.

ರಘುಲಾಲ್ 'ರಾಘವನ್' ಸಾರ್ಥಕ ಬಹುಮುಖ ಸೇವೆ

ಮೈಸೂರು: ಫಾರ್ಮಾ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ರಘುಲಾಲ್ ಅಂಡ್ ಕಂಪನಿ ಮುಖ್ಯಸ್ಥ ಎನ್.ರಾಘವನ್ ಅವರ ಸಾಮಾಜಿಕ ಸೇವೆ ಸ್ಮರಣೀಯ. ಹಸಿರೀಕರಣ, ಪರಿಸರ ಸಂರಕ್ಷಣೆ, ಬೀದಿಬದಿ ವ್ಯಾಪಾರಿಗಳಿಗೆ ನೆರವು ಹೀಗೆ ನಾನಾ ರೀತಿಯಲ್ಲಿ ಸೇವೆ ಸಲ್ಲಿಸಿಕೊಂಡು ಬಂದಿದ್ದಾರೆ. ಹಾಗೆಯೇ ಪ್ರಧಾನಮಂತ್ರಿ ಕ್ಷಯರೋಗ ಮುಕ್ತ ಭಾರತ ಅಭಿಯಾನಕ್ಕೂ ಕೈಜೋಡಿಸಿ ನೂರಾರು ಟಿಬಿ ರೋಗಿಗಳ ದತ್ತು ಪಡೆದು ಅವರಿಗೆ ಪೌಷ್ಟಿಕಾಂಶಯುಕ್ತ ಪೌಡರ್ ಕಲ್ಪಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ಜಗತ್ತಿನಲ್ಲಿ ಟಿಬಿಯಿಂದ ಸಾವನ್ನಪ್ಪುವವರಲ್ಲಿ ಶೇ.34ರಷ್ಟು ಭಾರತೀಯರಾಗಿದ್ದಾರೆ. ಅಂದರೆ ವಾರ್ಷಿಕ 4 ಲಕ್ಷಕ್ಕೂ ಹೆಚ್ಚು ಜನ ಮರಣ ಹೊಂದುತ್ತಾರೆ. ಸದ್ಯ ಸಾವಿನ ಪ್ರಮಾಣ ಕಡಿಮೆಯಾಗಿದ್ದು, 2025ರೊಳಗೆ ಭಾರತ ಟಿಬಿ ಮುಕ್ತ ದೇಶವಾಗಬೇಕೆಂಬ ಆಶಯದೊಂದಿಗೆ ಪ್ರಧಾನಿ ಮೋದಿ ಅವರು ಅಭಿಯಾನ ಆರಂಭಿಸಿದ್ದಾರೆ. ಅದರ ಭಾಗವಾಗಿ ಟಿಬಿ ರೋಗಿಗಳನ್ನು 9 ತಿಂಗಳ ಅವಧಿಗೆ ದತ್ತು ಪಡೆದು ಅವರಿಗೆ ಬೇಕಾದ ಪೌಷ್ಟಿಕ ಆಹಾರ, ಇತರೆ ಉತ್ಪನ್ನಗಳನ್ನು ಕಲ್ಪಿಸುವಂತೆ ಕರೆ ನೀಡಿದ್ದರು. ಇದಕ್ಕೆ ಕೋಟ್ಯಾಂತರ ಮಂದಿ ಕೈಜೋಡಿಸಿದ್ದಾರೆ. ಹಾಗೆಯೇ ನಾನು ಈವರೆಗೆ 300 ಟಿಬಿ ರೋಗಿಗಳಿಗೆ ಪೌಷ್ಟಿಕಾಂಶದ ಪೌಡರ್ ನೀಡುತ್ತಿದ್ದು, ಇನ್ನು ಮುಂದೆ 500 ಜನರಿಗೆ ನೀಡಲಿದ್ದೇವೆ ಎಂದರು. ಕ್ಷಯ ರೋಗಿಗಳು ವೈದ್ಯರ ಸಲಹೆಯಂತೆ 6-9 ತಿಂಗಳು ಕಡ್ಡಾಯವಾಗಿ ಔಷಧಿ ಪಡೆಯಬೇಕು. ಆದರೆ ಹಣ ಇನ್ನಿತರ ಕಾರಣದಿಂದ ಪೂರ್ಣವಾಗಿ ಔಷಧಿ ಪಡೆಯದೆ ಗಂಭೀರ ಸ್ಥಿತಿ ತಲುಪುತ್ತಾರೆ. ಹಾಗಾಗಿ ಸರ್ಕಾರ ರೋಗಿಗಳ ವಿವರವನ್ನು ಕಲೆಹಾಕಿ ಔಷಧಿ ಖರೀದಿಸಿ ಹಣವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವ ಯೋಜನೆ ರೂಪಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಔಷಧಿ ಕೊಳ್ಳುವ ಟಿಬಿ ರೋಗಿಗಳ ಆಧಾರ್ ಹಾಗೂ ಮೊಬೈಲ್ ಸಂಖ್ಯೆ, ವೈದ್ಯರ ವಿವರವನ್ನು ಮೆಡಿಕಲ್ ಶಾಪ್‌ನವರು ದಾಖಲಿಸಿಕೊಂಡು ಪ್ರತಿ ತಿಂಗಳು ಔಷಧ ನಿಯಂತ್ರಣಾಧಿಕಾರಿ, ಜಿಲ್ಲಾ ಆರೋಗ್ಯಾಧಿಕಾರಿ ಹಾಗೂ ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಅಧಿಕಾರಿಗಳಿಗೆ ವರದಿ ನೀಡಬೇಕು. ಈ ಕಷ್ಟಕರ ಕೆಲಸ ಬೇಡವೆಂದು ಹಲವರು ಟಿಬಿ ಔಷಧಿ ಮಾರಾಟವನ್ನೇ ಮಾಡುವುದಿಲ್ಲ. ಇದೆಲ್ಲವನ್ನೂ ಗಮನಿಸಿ ಅನೇಕ ಮಹನೀಯರೊಂದಿಗೆ ನನ್ನನ್ನೂ ಅಭಿನಂದಿಸಿದ್ದು ಸಂತಸ ತಂದಿದೆ ಎಂದು ಹೇಳಿದರು.



ರಾಜ್ಯಪಾಲರೊಂದಿಗೆ ರಾಘವನ್ ದಂಪತಿ

ರಾಜಮೌಳಿ RRR ಚಿತ್ರದ 'ನಾಟು ನಾಟು' ಹಾಡಿಗೆ ಆಸ್ಕರ್ ಪ್ರಶಸ್ತಿ

ಅಕಾಡೆಮಿ ಅವಾರ್ಡ್ಸ್‌ನಲ್ಲಿ ಇತಿಹಾಸ ಬರೆದ ಭಾರತ



ಲಾಸ್ ಏಂಜಲೀಸ್, ಮಾ.13- ಅಕಾಡೆಮಿ ಅವಾರ್ಡ್ಸ್ ಸಮಾರಂಭದಲ್ಲಿ ಭಾರತದ ಮುಕುಟಕ್ಕೆ ಮತ್ತೊಂದು ಗರಿ ಸಿಕ್ಕಿದೆ. ಎಸ್.ಎಸ್. ರಾಜಮೌಳಿ ಅವರ ಆರ್‌ಆರ್‌ಆರ್ ಚಿತ್ರದ ನಾಟು ನಾಟು ಹಾಡಿಗೆ ಆಸ್ಕರ್ ಪ್ರಶಸ್ತಿ ಲಭ್ಯವಾಗಿದೆ.

ಅತ್ಯುತ್ತಮ ಹಾಡು ವಿಭಾಗದಲ್ಲಿ ನಾಟು ನಾಟು ಹಾಡಿಗೆ ಆಸ್ಕರ್ ಅವಾರ್ಡ್ ಲಭ್ಯವಾಗಿದೆ. 'ನಾಟು ನಾಟು..', 'ಲಿಫ್ಟ್ ಮಿ ಅಪ್', 'ದಿಸ್ ಈಸ್ ಲೈಫ್', ಹೋಲ್ಡ್ ಮೈ ಹ್ಯಾಂಡ್, ಅಪ್ಲೌಸ್ ಮೊದಲಾದ ಹಾಡುಗಳು ರೇಸ್‌ನಲ್ಲಿದ್ದವು. ಈ ಪೈಕಿ 'ನಾಟು ನಾಟು..' ಹಾಡು ಆಸ್ಕರ್ ಗೆದ್ದಿದೆ.

ನಾಟು ನಾಟು ಹಾಡಿಗೆ ಪ್ರಶಸ್ತಿ ಘೋಷಣೆ ಆಗುತ್ತಿದ್ದಂತೆಯೇ ಸಭಾಂಗಣದ ತುಂಬಾ ಚಪ್ಪಾಳೆಯ ಸದ್ದು ಜೋರಾಗಿತ್ತು ಭಾರತದಲ್ಲೂ ರಾಮ್ ಚರಣ್ ಮತ್ತುಜೂನಿಯರ್ ಎನ್‌ಟಿಆರ್ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ ಭಾರತೀಯ ಸಿನಿಮಾ ರಂಗದ ಅನೇಕರು ಸಾಮಾಜಿಕ ಜಾಲತಾಣದಲ್ಲಿ ಶುಭಾಶಯಗಳನ್ನು ಕೋರುತ್ತಿದ್ದಾರೆ. ಅದರಲ್ಲೂ ತೆಲುಗು ಸಿನಿಮಾ ರಂಗದಲ್ಲಿ ಹಬ್ಬದ ವಾತಾವರಣವೇ ಕಂಡು ಬಂದಿತು.

ಅಮೆರಿಕಾದ ಲಾಸ್ ಏಂಜಲೀಸ್ ಡಾಲ್ಬಿ ಥಿಯೇಟರ್‌ನಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಜಗತ್ತಿನ ಹೆಸರಾಂತ ಕಲಾವಿದರು ಹಾಗೂ ತಂತ್ರಜ್ಞರು ಭಾಗಿಯಾಗಿದ್ದಾರೆ. ಅಲ್ಲದೇ ನಿರ್ದೇಶಕ ರಾಜಮೌಳಿ, ನಟರಾದ ರಾಮ್ ಚರಣ್, ಜ್ಯೂನಿಯರ್ ಎನ್.ಟಿ.ಆರ್ ಸೇರಿದಂತೆ ಆರ್.ಆರ್.ಆರ್ ಚಿತ್ರತಂಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗಿಯಾಗಿತ್ತು.

ಭಾರತದಿಂದ ಒಂದು ಸಿನಿಮಾ ಮತ್ತು ಎರಡು ಡಾಕ್ಯುಮೆಂಟರಿಗಳು ಪ್ರಶಸ್ತಿಯ ಕಣದಲ್ಲಿದ್ದವು. ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಈ ಕಾರ್ಯಕ್ರಮದ ನಿರೂಪಣೆ ಮಾಡಿದ್ದು ಹೆಮ್ಮೆ ತಂದಿದೆ.

ಆಸ್ಕರ್ ಪ್ರಶಸ್ತಿಯ ಟ್ರೋಫಿ ಜೊತೆ ನಗದು ಬಹುಮಾನ ಕೊಡದೇ ಇದ್ದರೂ, ಉಡುಗೊರೆಯ ರೂಪದಲ್ಲಿ ಅನೇಕ ವಸ್ತುಗಳು, ಪ್ರವಾಸ ಪ್ಯಾಕೇಜ್‌ಗಳು ವಿಜೇತರಿಗೆ ಸಿಗುತ್ತವೆ. ಕೇವಲ ಪ್ರಶಸ್ತಿ ಗೆದ್ದವರಿಗೆ ಮಾತ್ರವಲ್ಲ, ನಾಮ ನಿರ್ದೇಶನ ಗೊಂಡವರಿಗೆ ಉಡುಗೊರೆ ಇರಲಿದೆ.

ಈ ಬಾರಿ ಗಿಫ್ಟ್ ಬಾಕ್ಸ್‌ನಲ್ಲಿ 1 ಲಕ್ಷ ಡಾಲರ್ ಮೌಲ್ಯದ ಉಡುಗೊರೆಗಳು ಇವೆ ಎಂದು ಹೇಳಲಾಗುತ್ತಿದೆ. ಅಲ್ಲದೇ ಪೀಸೆಸ್ ಆಫ್ ಆಸ್ಟ್ರೇಲಿಯಾ ಕಂಪೆನಿಯೊಂದು ನಾಮ ನಿರ್ದೇಶನ ಗೊಂಡವರಿಗೆ ಆಸ್ಟ್ರೇಲಿಯಾದಲ್ಲಿ ಒಂದು ಚದುರ ಮೀಟರ್ ಭೂಮಿ ಕೊಡಲು ಮುಂದಾಗಿದೆಯಂತೆ





ಮಿಂಚಿದ ದೀಪಿಕಾ ಪಡುಕೋಣೆ


ಇಲ್ಲಿ ಸೋಮವಾರ ನಡೆದ 95ನೇ ಅಕಾಡೆಮಿ ಅವಾರ್ಡ್ಸ್ ಸಮಾರಂಭದಲ್ಲಿ (ಆಸ್ಕರ್ ಪ್ರಶಸ್ತಿ) ನಟಿ ದೀಪಿಕಾ ಪಡುಕೋಣೆ ಮಿಂಚಿದರು. ಬೆಸ್ಟ್ ಒರಿಜಿನಲ್ ಸಾಂಗ್ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿ ಪಡೆದ ಆರ್‌ಆರ್‌ಆರ್ ಚಿತ್ರದ ನಾಟು ನಾಟು ಹಾಡಿನ ಪರಿಚಯ ಮಾಡುವ ಹೊಣೆಯನ್ನು ಅವರಿಗೆ ವಹಿಸಲಾಗಿತ್ತು

ಆಕರ್ಷಕ ಕಪ್ಪು ಬಣ್ಣದ ಉಡುಗೆಯಲ್ಲಿ ವೇದಿಕೆಗೆ ಬಂದ ದೀಪಿಕಾ ಆರ್‌ಆರ್‌ಆರ್ ಸಿನಿಮಾದ ನಾಟು ನಾಟು ಬಗ್ಗೆ ಹೆಮ್ಮೆ ಮತ್ತು ಅಭಿಮಾನದಿಂದ ಪರಿಚಯ ಮಾಡಿಕೊಟ್ಟರು.

ನಾಟು ನಾಟು ಹಾಡು ಆಸ್ಕರ್ ಪ್ರಶಸ್ತಿ ಪಡೆಯುತ್ತಿರುವುದು ಭಾರತೀಯರ ಹೆಮ್ಮೆ ಎಂದು ಹೇಳಿದರು. ಬಳಿಕ ವೇದಿಕೆಯಲ್ಲಿಯೇ ಗಾಯಕರಾದ ಕಾಲಭೈರವ ಮತ್ತು ರಾಹುಲ್ ಸಿಪ್ಲಿಗುಂಜ್ ಅವರು ಹಾಡು ಹೇಳಿದರು. ಕಲಾವಿದರು ನಾಟು ನಾಟು ಹಾಡಿಗೆ ಹೆಜ್ಜೆ ಹಾಕಿದರು.







ಪ್ರಶಸ್ತಿ ಪುರಸ್ಕೃತರ ಪಟ್ಟಿ ಇಂತಿದೆ

ಅತ್ಯುತ್ತಮ ಚಿತ್ರ: ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್, **ಅತ್ಯುತ್ತಮ ನಿರ್ದೇಶಕ:** ಡೇನಿಯಲ್ ಕ್ವಾನ್ ಮತ್ತು ಡೇನಿಯಲ್ ಸ್ಕೀನೆರ್ಟ್ (ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್), **ಅತ್ಯುತ್ತಮ ನಟಿ:** ಮಿಶೆಲ್ ಯೋಹ್ (ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್), **ಅತ್ಯುತ್ತಮ ನಟ:** ಬ್ರೆಂಡನ್ ಫ್ರೇಸರ್- (ದಿ ವೇಲ್), **ಅತ್ಯುತ್ತಮ ಅಂತರಾಷ್ಟ್ರೀಯ ಚಲನಚಿತ್ರ** ಆಲ್ ಕ್ವೈಟ್ ಆನ್ ದಿ ವೆಸ್ಟರ್ನ್ ಫ್ರಂಟ್ (ಜರ್ಮನಿ), **ಅತ್ಯುತ್ತಮ ಪೋಷಕ ನಟ:** ಕೆ ಹುಯ್ ಕ್ವಾನ್ (ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್), **ಅತ್ಯುತ್ತಮ ಪೋಷಕ ನಟಿ:** ಜೇಮಿ ಲೀ ಕರ್ಟಿಸ್ (ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್), **ಅತ್ಯುತ್ತಮ ಹಾಡು:** ನಾಟು ನಾಟು (ಆರ್‌ಆರ್‌ಆರ್ -ತೆಲುಗು), **ಅತ್ಯುತ್ತಮ ವಿಶ್ಯುವಲ್ ಎಫೆಕ್ಟ್:** ಅವತಾರ್-ದಿ ವೇ ಆಫ್ ವಾಟರ್, **ಅತ್ಯುತ್ತಮ ಧ್ವನಿ ವಿನ್ಯಾಸ** ಟಾಪ್ ಗನ್ - ಮೇವರಿಕ್, **ಅತ್ಯುತ್ತಮ ಸಂಕಲನ:** ಪೌಲ್ ರಾಗರ್ಸ್ (ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್), **ಅತ್ಯುತ್ತಮ ಛಾಯಾಗ್ರಹಣ:** ಆಲ್ ಕ್ವೈಟ್ ಆನ್ ದಿ ವೆಸ್ಟರ್ನ್ ಫ್ರಂಟ್, **ಅತ್ಯುತ್ತಮ ಮೂಲ ಚಿತ್ರಕಥೆ:** ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್, **ಅತ್ಯುತ್ತಮ ಸಾಕ್ಷ್ಯಚಿತ್ರ:** ನವಲ್ನಿ, **ಅತ್ಯುತ್ತಮ ಅನಿಮೇಟೆಡ್ ಚಲನಚಿತ್ರ:** ಗಿಲ್ಲೆರ್ಮೊ ಡೆಲ್ ಟೊರೊ ಅವರ ಪಿನೋಚ್ಚಿಯೋ, **ಅತ್ಯುತ್ತಮ ಮೇಕಪ್ ಮತ್ತು ಕೇಶ ವಿನ್ಯಾಸ:** ದಿ ವೇಲ್, **ಅತ್ಯುತ್ತಮ ಸಾಕ್ಷ್ಯಚಿತ್ರ ಕಿರುಚಿತ್ರ** 'ದಿ ಎಲಿಫೆಂಟ್ ವಿಸ್ಪರರ್ಸ್ (ತಮಿಳು).

'ನಾಟು ನಾಟು' ಜನಪ್ರಿಯತೆ ಜಾಗತಿಕವಾಗಿದೆ

RRR ಚಿತ್ರತಂಡಕ್ಕೆ ಪ್ರಧಾನಿ ಮೋದಿ ಅಭಿನಂದನೆ



ನವದೆಹಲಿ, ಮಾ.13- ಈ ಬಾರಿ ಭಾರತದ ಎರಡು ಚಿತ್ರಗಳಿಗೆ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಸಂದಿದೆ. ಈ ಹಿನ್ನೆಲೆಯಲ್ಲಿ ಪ್ರಶಸ್ತಿ ವಿಜೇತರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಶುಭಾಶಯಗಳನ್ನು ತಿಳಿಸಿದ್ದಾರೆ.

ಈ ಬಾರಿಯ ಅಕಾಡೆಮಿ ಅವಾರ್ಡ್ಸ್‌ನಲ್ಲಿ ರಾಜಮೌಳಿ ನಿರ್ದೇಶನದ ಆರ್‌ಆರ್‌ಆರ್ ಸಿನಿಮಾದ ನಾಟು ನಾಟು ಹಾಡು ಅತ್ಯುತ್ತಮ ಓರಿಜನ್ ಸಾಂಗ್ ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದರೆ, ಡಾಕ್ಯುಮೆಂಟರಿ ವಿಭಾಗದಲ್ಲಿ ಕಾರ್ತಿಕಿ ನಿರ್ದೇಶನದ 'ದಿ ಎಲಿಫೆಂಟ್ ವಿಸ್ಪರರ್ಸ್' ಕಿರುಚಿತ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ಈ ಎರಡೂ ತಂಡಕ್ಕೂ ಪ್ರಧಾನಿ ಮೋದಿಯವರು ಶುಭಾಶಯಗಳನ್ನು ಕೋರಿದ್ದಾರೆ. ಇದೊಂದು ಐತಿಹಾಸಿಕ ಕ್ಷಣ ಎಂದು ಬಣ್ಣಿಸಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಮೋದಿಯವರು, ಅಸಾಧಾರಣ! 'ನಾಟು ನಾಟು' ಜನಪ್ರಿಯತೆ ಜಾಗತಿಕವಾಗಿದೆ. ಇದು ಮುಂದಿನ ವರ್ಷಗಳಲ್ಲಿ ನೆನಪಿನಲ್ಲಿ ಉಳಿಯುವ ಹಾಡಾಗಲಿದೆ. ಪ್ರತಿಷ್ಠಿತ ಗೌರವ ಪಡೆದ ಎಂ ಎಂ ಕೀರವಾಣಿ ಹಾಗೂ ಚಿತ್ರದ ಇಡೀ ತಂಡಕ್ಕೆ ಅಭಿನಂದನೆಗಳು. ಭಾರತ ಉತ್ಸುಕವಾಗಿದೆ ಮತ್ತು ಹೆಮ್ಮೆಪಡುತ್ತದೆ ಎಂದು ಹೇಳಿದ್ದಾರೆ. 'ದಿ ಎಲಿಫೆಂಟ್ ವಿಸ್ಪರರ್ಸ್' ತಂಡಕ್ಕೂ ಅಭಿನಂದನೆಗಳು. ತಂಡ ಸಾಕ್ಷ್ಯಚಿತ್ರವು ಸುಸ್ಥಿರ ಅಭಿವೃದ್ಧಿ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ ಪ್ರಾಮುಖ್ಯತೆಯನ್ನು ಅದ್ಭುತವಾಗಿ ಎತ್ತಿ ತೋರಿಸುತ್ತದೆ ಎಂದು ತಿಳಿಸಿದ್ದಾರೆ.





ಮೈಸೂರು ದಸರಾದಲ್ಲಿ ಕೀರವಾಣಿ ಸಂಗೀತ ಕಛೇರಿ

ಬಿ.ಪಿ.ಮಂಜುನಾಥ್

ಮೈಸೂರು, ಮಾ.13(ಎಂಕೆ)- ತೆಲುಗಿನ 'ಆರ್‌ಆರ್‌ಆರ್' ಚಿತ್ರದ 'ನಾಟು ನಾಟು' ಹಾಡಿಗೆ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಪಡೆದ ಸಂಗೀತ ದಿಗ್ಗಜ ಕೀರವಾಣಿ, ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ವೇದಿಕೆಯಲ್ಲಿ ಡಾ.ರಾಜ್‌ಕುಮಾರ್ ಅವರ ಹಾಡನ್ನು ಹಾಡಿದ್ದರು ಎಂದು ಗಾಯಕರೂ ಆದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಸ್ಮರಿಸಿದ್ದಾರೆ.



ಸಂಗೀತ ದಿಗ್ಗಜ ಕೀರವಾಣಿ ಅವರ ಸಂಗೀತ ನಿರ್ದೇಶನದಲ್ಲಿ ರೂಪುಗೊಂಡ ತೆಲುಗಿನ 'ಆರ್‌ಆರ್‌ಆರ್' ಚಿತ್ರದ 'ನಾಟು ನಾಟು' ಹಾಡಿಗೆ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಲಭಿಸಿರುವುದು ಕೀರವಾಣಿ ಹಾಗೂ ರಾಜ ಮೌಳಿಯವರ ಕಿರೀಟಕ್ಕೆ ಮತ್ತೊಂದು ಗರಿ ಸೇರಿದಂತಾಗಿದೆ. ಇವರಿಂದ ಭಾರತದ ಚಿತ್ರೋದ್ಯಮಕ್ಕೆ ಒಂದು ಹೊಸ ತಿರುವು ಬಂದಿದೆ. 2009ರ ದಸರಾ ಮಹೋತ್ಸವದ ಅರಮನೆ ಸಾಂಸ್ಕೃತಿಕ ವೇದಿಕೆಯಲ್ಲಿ ಸಂಗೀತ ಕಛೇರಿ ನಡೆಸಿಕೊಟ್ಟಿದ್ದ ಕೀರವಾಣಿ, ಡಾ.ರಾಜ್‌ಕುಮಾರ್ ಅವರ ಹಾಡನ್ನು ಹಾಡಿ ರಂಜಿಸಿದ್ದರು. ಅಂದು ನಾನು ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷನಾಗಿ ಅವರ ಪ್ರತಿಭೆಯನ್ನು ಮೈಸೂರಿನ ಜನತೆಗೆ ಪರಿಚಯಿಸಿ ಕೊಟ್ಟ ತೃಪ್ತಿಯಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಂದೆ : "ನಿಮ್ಮ ಮೇಷ್ಟ್ರು ಸಿಕ್ಕಿದ್ರು, ಅವರ ಪ್ರಶ್ನೆಗಳಿಗೆ ನೀನು ಉತ್ತರ ಕೊಡಲಿಲ್ಲವಂತೆ"
ಮಗ : "ಹೌದು ಡ್ಯಾಡಿ"
ತಂದೆ : "ಯಾಕೆ ಹಾಗೇ ಮಾಡಿದೆ?"
ಮಗ : "ನೀನೇ ಹೇಳಿದ್ಯಲ್ಲ ಡ್ಯಾಡಿ, ದೊಡ್ಡವರ ಎದುರಿಗೆ ಮಾತನಾಡಬಾರದು ಅಂತ"

ಮೈಸೂರು ಮಿತ್ರ

ಮಂಗಳವಾರ, 14 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸದ್ಗುಣವಂತನಾದವನು ಏತಕ್ಕೂ ಚಿಂತಿಸಬೇಕಿಲ್ಲ. ನಿತ್ಯಾನಿತ್ಯ ವಿವೇಕ ಪ್ರಜ್ಞೆ ಇದ್ದರೆ ಎಂತಹ ಎಡರು ಕವಿದಾಗಲೂ ಪರಿಹರಿಸಿಕೊಂಡು ಮುಂದಡಿ ಇಡಬಲ್ಲ.

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಣ್ಣು ಹಂಚಿ ತಿನ್ನು, ಹೂವು ಕೊಟ್ಟು ಮುಡಿ

ನಿಮ್ಮ ಪತ್ರಗಳು

ಪ್ರಿಪೇಯ್ಡ್ ಆಟೋ ಸರ್ವಿಸ್ ನ್ಯೂನತೆ ಸರಿಪಡಿಸಿ

ಮಾನ್ಯರೇ

'ಆಟೋ ಚಾಲಕರಿಗೆ ಡಿಸಿಪಿ ನೀತಿ ಪಾಠ' ಸುದ್ದಿ ಓದಿದ ಮೇಲೆ ಹೇಳಬೇಕೆನಿಸಿತು. ಮಾನ್ಯ ಡಿಸಿಪಿಯವರೇ ನೀವು ಯಾವುದೋ ಹವಾನಿಯಂತ್ರಿತ ಕೊಠಡಿಯಲ್ಲಿ ಸಭೆ ಮಾಡಿ ಏನೇ ಪಾಠ ಮಾಡಿದರೂ ಆಟೋ ಚಾಲಕರಿಂದ ಸಾರ್ವಜನಿಕರಿಗೆ ಏನೂ ಪ್ರಯೋಜನ ಇಲ್ಲ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಬ್ಯಾಕ್ ಗೇಟ್ (back gate) ನಲ್ಲಿ ಒಮ್ಮೆ ಮಫ್ತಿಯಲ್ಲಿ ಬಂದು ಆಟೋದವರ, ಹಾಗೆಯೇ ಅವರಿಗೆ support ಮಾಡುವ ನಿಮ್ಮ ಇಲಾಖೆಯ ಸಿಬ್ಬಂದಿಯನ್ನು ನೋಡಿ. ನಾನು 2.3.2023 ರಂದು ಆಟೋದವರ ಸಹವಾಸವೇ ಬೇಡವೆಂದು ಉಬರ್ ಆಟೋ book ಮಾಡಿದೆ. ಇಬ್ಬರು ಡ್ರೈವರ್‌ಗಳು ರೈಲ್ವೆ ಮ್ಯೂಸಿಯಂ ಹತ್ತಿರ ಬನ್ನಿ. ಅಲ್ಲಿಗೇ ಬಂದರೆ ಆಟೋದವರು ಪೊಲೀಸಿನವರು ಬಿಡೋದಿಲ್ಲ ನಮ್ಮನ್ನು ಗದರಿಸುತ್ತಾರೆ ಎಂದು cancel ಮಾಡಿ ನನಗೆ penalty ಆಯ್ತು. ಕೊನೆಗೆ gate ಹತ್ತಿರ ಪ್ರಯಾಣಿಕರೊಬ್ಬರನ್ನು ಬಿಡಲು ಬಂದು ಆಟೋ ಹತ್ತಲು ಹೋದಾಗ ಅವನೂ ಇದೇ ಅನುಮಾನ ವ್ಯಕ್ತಪಡಿಸಿದ. ನಾನು ಅದು ಯಾರು ಬರ್ತಾರೆ ಬಾರಪ್ಪ ನಾನಿದ್ದೇನೆ ಎಂದು ಅವನಿಗೆ ಧೈರ್ಯ ಹೇಳಿ ಮನೆಗೆ ಅದೇ ಆಟೋದಲ್ಲಿ ಬಂದೆ. ಇದಕ್ಕೆಲ್ಲಾ ಮುಖ್ಯ ಕಾರಣ front gate ನಲ್ಲಿದ್ದಂತೆ back gate ನಲ್ಲಿ ಪ್ರಿಪೇಯ್ಡ್ ಆಟೋ ಸೌಲಭ್ಯ ಇಲ್ಲ. ರೈಲ್ವೆ ಇಲಾಖೆಗೆ ವಿಚಾರಿಸಿದರೆ ಇದು ಪೊಲೀಸ್ ಕಮಿಷನರ್ ಆಫೀಸ್‌ನವರು ವ್ಯವಸ್ಥೆ ಮಾಡಬೇಕು ಎಂದರು.

ಮಾನ್ಯ ಡಿಸಿಪಿ ಜಾಹ್ನವಿ ಮೇಡಂ, ದಯಮಾಡಿ ಈ ಬಗ್ಗೆ ತಾವು ಪರಿಶೀಲಿಸಿ, ಕೊರೊನಾ ಮುಂಚೆ ಇಲ್ಲಿ ಪ್ರಿಪೇಯ್ಡ್ ಆಟೋ ಸರ್ವಿಸ್ ಇತ್ತು. ಹಾಗೆಯೇ ಅಲ್ಲಿ ಒಂದು ಕೌಂಟರ್ ಸಹ ಇದೆ. ನಿಮ್ಮ ಸಾರ್ವಜನಿಕರ ಬಗೆಗಿನ ಕಾಳಜಿ ಬಗ್ಗೆ ನಮಗೆ ಹೆಮ್ಮೆಯಾಯಿತು. ಆದರೆ ನೀವು ಮಾಡಿದ ಸಭೆಯ ಫಲಶ್ರುತಿ ಇಂತಹ ನ್ಯೂನತೆ ಸರಿಪಡಿಸಿದಾಗ ಹೆಚ್ಚು ಉಪಯೋಗಕಾರಿಯಾದೀತು ಅಲ್ಲವೇ?

–ಶಿವಮೊಗ್ಗ ನಾ. ದಿನೇಶ್ ಅಡಿಗ ಮೈಸೂರು

ನಾಯ್ಡುನಗರ ರಸ್ತೆ ಡಾಂಬರೀಕರಣಗೊಳಿಸಿ

ಮಾನ್ಯರೆ,

ನಾವು ವಾಸ ಮಾಡುತ್ತಿರುವ ಮನೆಯ ಮುಂಭಾಗದ ರಸ್ತೆಯು (100/10) 100 ಅಡಿ ಉದ್ದ ಮತ್ತು 10 ಅಗಲದಿಂದ ಕೂಡಿರುತ್ತದೆ. ಸುಮಾರು ವರ್ಷಗಳಿಂದಲೂ ಈ ರಸ್ತೆಗೆ ಡಾಂಬರನ್ನೆ ಹಾಕಿರುವುದಿಲ್ಲ. ರಸ್ತೆಯು ಬಹಳ ಹದಗೆಟ್ಟಿದೆ. ಕಲ್ಲು, ಹಳ್ಳ–ಕೊಳ್ಳಗಳಿಂದ ತುಂಬಿದೆ. ಈ ರಸ್ತೆಯಲ್ಲಿ ಆಟೋ, ಸ್ಕೂಟರ್ ಸವಾರರು ಓಡಾಡಲು ತುಂಬಾ ತೊಂದರೆಯಾಗುತ್ತಿದೆ. ಅಲ್ಲದೆ ರಾತ್ರಿ ವೇಳೆಯಲ್ಲಿ ಮಕ್ಕಳು ಮತ್ತು ವೃದ್ಧರು ಓಡಾಡಲು ಕಷ್ಟವಾಗಿದೆ. ಆದ್ದರಿಂದ ನಾಯ್ಡುನಗರದ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಸಪ್ತಗಿರಿ ಕಾಂಪ್ಲೆಕ್ಸ್ ಕಟ್ಟಡದ ಪಕ್ಕದ ಈ ತುಂಡು ರಸ್ತೆಗೆ ಡಾಂಬರೀಕರಣ ಮಾಡಿಕೊಡಬೇಕಾಗಿ ಮನವಿ.

– ಎಂ.ಎಸ್.ರಾಮಮೂರ್ತಿ, ಮೈಸೂರು.

ಗಜದ ನಾಟು ನಾಟ್ಯಕ್ಕೆ ಒಲಿದ ಆಸ್ಕರ್

ಮಾನ್ಯರೆ,

ಭಾರತೀಯ ಚಲನಚಿತ್ರೋದ್ಯಮವು ಆಸ್ಕರ್ ಪ್ರಶಸ್ತಿಗಾಗಿ ಅನ್ವೇಷಣೆಯಲ್ಲಿದೆ. 2009 ರಲ್ಲಿ ಸ್ಲಮ್‌ಡಾಗ್ ಮಿಲಿಯನೇರ್‌ಗಾಗಿ ರೆಹಮಾನ್ ಅವರ ಐತಿಹಾಸಿಕ ಗೆಲುವು. ನಂತರ ಮಾರ್ಚ್13,2023 ಐತಿಹಾಸಿಕ ದಿನ, ಈ ಬಾರಿ ಎರಡು ಆಸ್ಕರ್ ಪ್ರಶಸ್ತಿಗಳು ಮುಡಿಗೇರಿಸಿಕೊಂಡಿದ್ದು, 140 ಕೋಟಿ ಭಾರತೀಯರು ಸಂಭ್ರಮಿಸುವ ಕ್ಷಣ.

2023ರ ಆಸ್ಕರ್ ಅವಾರ್ಡ್ ಕಾರ್ಯಕ್ರಮ ಅಮೆರಿಕದ ಲಾಸ್ ಏಂಜಲೀಸ್‌ನ ಡಾಲ್ಬಿ ಥಿಯೇಟರ್‌ನಲ್ಲಿ ನಡೆಯಿತು. ಅದ್ದೂರಿಯಾಗಿ ನಡೆದ ಈ ಕಾರ್ಯಕ್ರಮದಲ್ಲಿ ಅನೇಕ ಸಿನಿ, ಕಲಾವಿದರು ಈ ಪ್ರತಿಷ್ಠಿತ ಪ್ರಶಸ್ತಿ ಬಾಚಿಕೊಂಡಿದ್ದು. ಭಾರತಕ್ಕೆ ಈ ಬಾರಿ ಎರಡು ಆಸ್ಕರ್ ಅವಾರ್ಡ್ ಬಂದಿದೆ ಅನ್ನೋದು ಹೆಮ್ಮೆಯ ವಿಚಾರ.

ತಮಿಳಿನ 'ದಿ ಎಲಿಫೆಂಟ್ ವಿಸ್ಪರರ್ಸ್'ಗೆ ಸಾಕ್ಷ್ಯ ಚಿತ್ರ ವಿಭಾಗದಲ್ಲಿ ಹಾಗೂ ಆರ್‌ಆರ್‌ಆರ್ ಸಿನಿಮಾದ 'ನಾಟು ನಾಟು' ಹಾಡಿಗೆ ಅತ್ಯುತ್ತಮ ಮೂಲ ಹಾಡು ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿ ಗೆದ್ದಿವೆ.

ಇನ್ನೂ ಇಬ್ಬರು ಮಹಿಳೆಯರು ಕಾರ್ತಿಕಿ ಗೊನ್ಸಾಲ್ವೆಸ್ ನಿರ್ದೇಶನ ಮತ್ತು ಗುನೀತ್ ಮೊಂಗಾ ನಿರ್ಮಿಸಿದ ದಿ ಎಲಿಫೆಂಟ್ ವಿಸ್ಪರರ್ಸ್ ಕಿರುಚಿತ್ರ, ಅವರ ಸಾಧನೆ ಮುಂಬರುವ ಯುವ ಜನಾಂಗ, ಮಹಿಳೆಯರಿಗೆ ಪ್ರೇರಣೆಯಾಗಲಿದೆ...

–ಆನಂದ ಜೇವೂರ್, ಕಲಬುರಗಿ

ಲಂಚ ಕೇಳಿದ ಅಧಿಕಾರಿಗೆ 'ಎತ್ತು' ಕೊಡಲು ಮುಂದಾದ ರೈತ

ಮಾನ್ಯರೆ,

ಲಂಚ ಕೇಳಿದ ಅಧಿಕಾರಿಗೆ ನೀವು ಕೇಳುವಷ್ಟು ಲಂಚ ಕೊಡಲು ನನ್ನಲ್ಲಿ ಹಣ ಇಲ್ಲ. ಆದ್ದರಿಂದ ನನ್ನ ಬಳಿ ಇರುವ 25 ಸಾವಿರ ರೂ. ಬೆಲೆ ಬಾಳುವ 'ಎತ್ತ'ನ್ನೇ ಲಂಚದ ರೂಪದಲ್ಲಿ ಪಡೆದುಕೊಂಡು ನನ್ನ ಕೆಲಸ ಮಾಡಿಕೊಡು' ಇದೊಂದು ರೀತಿ ಗೋವಿನ ಹಾಡಿನಂತಿದೆ... ಅಲ್ಲಿ ಅರ್ಭುತನೇ ಕಾಮಧೇನುವಿನ ತ್ಯಾಗಕ್ಕೆ ಮನನೊಂದು ಪ್ರಾಣಬಿಟ್ಟರೆ, ಈಗಿನ ರಕ್ಕಸ ರೂಪದ ಕೆಲ ಅಧಿಕಾರಿಗಳಿಗೆ ಯಾವ ಕನಿಕರವೂ ಇಲ್ಲ. ಇದು ಹಾವೇರಿ ಜಿಲ್ಲೆಯ ಸವಣೂರು ಪುರಸಭೆ ವ್ಯಾಪ್ತಿಯಲ್ಲಿ ರೈತರೊಬ್ಬರು ತನ್ನ ಮನೆ ಖಾತೆ ವರ್ಗಾವಣೆ ಮಾಡಲು ಲಂಚ ಕೇಳಿದ ಅಧಿಕಾರಿಗೆ ತನ್ನ ಬಳಿ ಹಣ ಇಲ್ಲದ್ದರಿಂದ, ತನ್ನ ಬಳಿ ಇದ್ದ ಎತ್ತನ್ನೇ ಲಂಚದ ರೂಪದಲ್ಲಿ ಕೊಡಲು ಪುರಸಭೆಗೆ ಹೋಗಿದ್ದಾರೆ.

ರಾಜ್ಯದಲ್ಲಿ ಲಂಚದ ಹಾವಳಿ ಇನ್ನೂ ಯಾವ– ಯಾವ ರೂಪದಲ್ಲಿ ನಡೆಯುತ್ತಿರಬಹುದು. ಈಗಾಗಲೇ ಖಾತೆ ವರ್ಗಾವಣೆ ಮಾಡಲು ಹಣ ಕೊಟ್ಟು ಅಧಿಕಾರಿ ಬೇರೆ ಸ್ಥಳಕ್ಕೆ ವರ್ಗಾವಣೆಯಾಗಿದ್ದರೆ, ಕೊಟ್ಟ ಹಣವೂ ಆ ಅಧಿಕಾರಿಯ ಜೊತೆಗೆ ಹೋಗಿದೆ.

ಈಗಿರುವ ಅಧಿಕಾರಿಗೆ ರೈತ ಎತ್ತು ಕೊಡುತ್ತಿರುವುದು, ನೀವು ಸರ್ಕಾರಿ ಕೆಲಸ ಮಾಡಲು ನಾಲಾಯಕ್ಕು, ದನ ಕಾಯಕಷ್ಟೇ ಲಾಯಕ್ಕು ಎಂದಿರಬಹುದು.

ಎತ್ತಿನ ಜೊತೆಗೆ ಬಾರ್ ಕೋಲನ್ನೂ ತಂದಿರುವುದು, ಅಂದಿನ ರಾಜ್ಯ ರೈತ ಸಂಘದ ಅಧ್ಯಕ್ಷರಾಗಿದ್ದ ದಿವಂಗತ ಪ್ರೊ.ನಂಜುಂಡಸ್ವಾಮಿ ಬಹಿರಂಗವಾಗಿ ಕರೆ ಕೊಡುತ್ತಿದ್ದರು. ಲಂಚ ಕೇಳುವ ಸರ್ಕಾರಿ ಅಧಿಕಾರಿಗಳಿಗೆ ಬಾರ್ ಕೋಲಿನಿಂದ ಬಾರಿಸಿ ಎಂದು, ಈಗ ಇದು ರೈತರಿಗೆ ನೆನಪಾಗಿರಬಹುದು. ಸರ್ಕಾರದಲ್ಲಿ ಲಂಚ ಯಾವ ಮಟ್ಟಕ್ಕೆ ಹೋಗಿದೆ. ರೈತರು ಎಷ್ಟರಮಟ್ಟಿಗೆ ಬೇಸತ್ತು ಹೋಗಿದ್ದಾರೆ ಎಂಬುದಕ್ಕೆ ಇದಕ್ಕಿಂತಲೂ ಜೀವಂತ ಉದಾಹರಣೆ ಬೇಕೆ. ಲೋಕಾಯುಕ್ತ ಪುನರ್ ಸ್ಥಾಪನೆ ಮಾಡಿದರೂ ಏನು ಪ್ರಯೋಜನ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಮಂಡ್ಯ ಭೇಟಿ

ಭದ್ರತೆಯಲ್ಲಿ ಮಂಡ್ಯ ಎಸ್ಪಿ ಯತೀಶ್ ಯಶಸ್ವಿ ಸುರಕ್ಷಾ ಮಂತ್ರ



● ಎಂ.ಕೆ.ಮೋಹನ್‌ರಾಜ್

ಸಕ್ಕರೆ ನಾಡು ಮಂಡ್ಯದಲ್ಲಿ ಭಾನುವಾರ ನಡೆದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ. ಇದರ ಹೆಗ್ಗಳಿಕೆ ಬಹುಪಾಲು ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತಕ್ಕೆ ಸಲ್ಲಬೇಕು. ಅದರಲ್ಲೂ ಪೊಲೀಸ್ ಇಲಾಖೆ ಶ್ರಮ ಶ್ಲಾಘನೀಯ. ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಅವರ ನೇತೃತ್ವದಲ್ಲಿ 2 ಸಾವಿರ ಪೊಲೀಸರು ಹಗಲಿರುಳು ಶ್ರಮಿಸಿದ ಫಲವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ರೋಡ್ ಶೋ ಹಾಗೂ ವೇದಿಕೆ ಕಾರ್ಯಕ್ರಮ ಯಶಸ್ವಿಯಾಯಿತು. ಎಸ್ಪಿ ಎನ್. ಯತೀಶ್ ಕಾರ್ಯ ವೈಖರಿಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗ ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಸಂತಸ ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ಪ್ರಧಾನಿ ಮೋದಿ ಕಾರ್ಯಕ್ರಮದ ಭದ್ರತಾ ಸಿದ್ಧತೆ ಹೇಗೆ ನಡೆಯಿತು?

ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಂಡ್ಯ ಜಿಲ್ಲೆಯ ಪ್ರವಾಸ ಕೈಗೊಳ್ಳುವ ಬಗ್ಗೆ ನಮಗೆ ಮಾಹಿತಿ ಬಂದ ಕೂಡಲೇ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲು ಆರಂಭಿಸಿದೆವು. ಮೋದಿ ಅವರು ಬರುವುದು ಇನ್ನೊಂದು ವಾರ ಇರುವಾಗಲೇ ಎಸ್‌ಪಿಜಿ ಅಧಿಕಾರಿಗಳು, ರಾಜ್ಯದ ಉನ್ನತ ಮಟ್ಟದ ಅಧಿಕಾರಿಗಳ ತಂಡದೊಂದಿಗೆ ಮಂಡ್ಯಕ್ಕೆ ಆಗಮಿಸಿ, ಸರಣಿ ಸಭೆಗಳನ್ನು ನಡೆಸಿದರು. ಸೂಕ್ಷ್ಮ ಪ್ರದೇಶಗಳ ಪಟ್ಟಿ ಮಾಡಿದರು. ಅವುಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡರು. ಅಲ್ಲದೇ ನಾವು ಕೈಗೊಂಡಿದ್ದಂತಹ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲನೆ ಮಾಡಿದರು. ಮೋದಿ ಅವರ ಕಾರ್ಯಕ್ರಮದಲ್ಲಿ ಭದ್ರತೆ ಹೀಗೇ ಇರಬೇಕೆಂದು ನಮಗೆ ಸಲಹೆ–ಸೂಚನೆಗಳನ್ನು ಕೊಟ್ಟರು. ಅವುಗಳನ್ನು ಚಾಚು ತಪ್ಪದೇ ಪಾಲಿಸಿದೆವು.

ಮಿತ್ರ: ಏನೆಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದು ಕೊಳ್ಳಲಾಗಿತ್ತು?

ಎಸ್ಪಿ: ಎಸ್‌ಪಿಜಿ ಭದ್ರತೆಯುಳ್ಳ ಪ್ರಧಾನಿ ಅವರು ರೋಡ್ ಶೋನಲ್ಲಿ ಸಾಗುತ್ತಾರೆ ಎಂಬುದು ಖಾತ್ರಿಯಾದಾಗ ಆಯಕಟ್ಟಿನ ಜಾಗದಲ್ಲಿ ಸಿಸಿ ಕ್ಯಾಮರಾ ಅಳವಡಿಕೆ, ಟ್ರಾಫಿಕ್ ಸಮಸ್ಯೆ ಬಗೆಹರಿಸುವುದು, ಸೂಕ್ತ ಭದ್ರತೆ ಒದಗಿಸುವುದು, ಅಗತ್ಯ ಮೂಲ ಸೌಲಭ್ಯಗಳನ್ನು ಮಾಡಿಕೊಳ್ಳುವುದು ಇನ್ನಿತರೆ ಕ್ರಮಗಳಿಗೆ ಮುಂದಾದೆವು. ಈ ವೇಳೆ ನಮ್ಮೊಂದಿಗೆ ಜಿಲ್ಲಾಧಿಕಾರಿ ಎನ್.ಗೋಪಾಲ ಕೃಷ್ಣ ಸಹ ಕೈ ಜೋಡಿಸಿದ್ದರಿಂದ ಎಲ್ಲಾ ಕೆಲಸಗಳು ಯಾವುದೇ ಅಡೆತಡೆ ಇಲ್ಲದೆ ನೆರವೇರಿತು. ಜೊತೆಗೆ ಒಂದು ವಾರದ ಮುಂಚೆಯೇ ಜನರ ನಿಯಂತ್ರಣಕ್ಕೆ ಬ್ಯಾರಿಕೇಡ್ ಹೇಗೆ ಅಳವಡಿಸಬೇಕು. ಬರುವ ಜನರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಎಲ್ಲಿ ಕಲ್ಪಿಸಬೇಕು. ಅಲ್ಲಿಂದ ಜನ ಹೇಗೆ ಸಮಾವೇಶ ಸ್ಥಳಕ್ಕೆ ಬರಬೇಕು ಎಂಬುದನ್ನೆಲ್ಲಾ ನಿರ್ಧರಿಸಿದ್ದೇವು. ಹಾಗೆಯೇ ಸಿಬ್ಬಂದಿಗಳನ್ನು ಹೇಗೆ ನಿಯೋಜಿಸಬೇಕೆಂಬುದರ ಬಗ್ಗೆ ನಾನು, ಜಿಲ್ಲಾಧಿಕಾರಿಗಳು ಸರಣಿ ಸಭೆಗಳನ್ನು ನಡೆಸಿ, ಎಲ್ಲಾ ರೂಪು–ರೇಷೆಗಳನ್ನು ಸಿದ್ಧಪಡಿಸಿದ್ದೇವು.

ಮಿತ್ರ: ಭದ್ರತೆಗೆ ಎಷ್ಟು ಮಂದಿ ಪೊಲೀಸ್ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗಿತ್ತು?

ಎಸ್ಪಿ: ಪ್ರಧಾನಿ ಮೋದಿ ಬರುತ್ತಾರೆ ಎಂದರೆ ಭದ್ರತೆ ವಿಷಯವೇ ಬಹಳ ಮುಖ್ಯವಾಗಿರುತ್ತದೆ. ಇದಕ್ಕೆ ಕೇವಲ ಮಂಡ್ಯ ಜಿಲ್ಲೆ ಮಾತ್ರವಲ್ಲದೇ ಅಕ್ಕಪಕ್ಕ ಜಿಲ್ಲೆಗಳಿಂದ ಸುಮಾರು ಎರಡು ಸಾವಿರ ಪೊಲೀಸ್ ಸಿಬ್ಬಂದಿಗಳನ್ನು ಕರೆಸಿಕೊಂಡಿದ್ದೆವು. ಈ ಪೈಕಿ ಐದು ಮಂದಿ ಎಸ್ಪಿ ದರ್ಜೆಯ ಅಧಿಕಾರಿಗಳು, ಮೂರು ಮಂದಿ ಅಡಿಷನಲ್ ಎಸ್ಪಿಗಳು, 20 ಮಂದಿ ಡಿವೈಎಸ್ಪಿಗಳು, 50 ಮಂದಿ ಸಿಪಿಐ ಸೇರಿದಂತೆ ಆಗಮಿಸಿದ್ದ ಎಲ್ಲಾ ಪೊಲೀಸರು ವಹಿಸಿದ ತಮ್ಮ ಕೆಲಸವನ್ನು ಸಮರ್ಪಕವಾಗಿ ನೆರವೇರಿಸಿದರು. ರೋಡ್ ಶೋ ಹಾಗೂ ಮೋದಿ ಕಾನ್ವೆ ಸಾಗುವ ಮಾರ್ಗದ ಪೊಲೀಸರು ಹಾಗೂ ವೇದಿಕೆ ಬಳಿ ಇದ್ದ ನಮ್ಮ ಸಿಬ್ಬಂದಿ ಅಚ್ಚು ಕಟ್ಟಾಗಿ ತಮ್ಮ ತಮ್ಮ ಕಾರ್ಯನಿರ್ವಹಿಸಿದರು. ಪ್ರಧಾನಿ ಮಂಡ್ಯದಲ್ಲಿ ಇದ್ದ ಅವಧಿಯಲ್ಲಿ ಒಂದು ಸಣ್ಣ ಲೋಪವೂ ಆಗದಂತೆ ಕಟ್ಟೆಚ್ಚರ ವಹಿಸಿದ್ದೇವು.



ಪ್ರಧಾನಿ ಮೋದಿ ಅವರಿಗೆ ಎಸ್ಪಿ ಯತೀಶ್ ಸ್ವಾಗತ.

ಮಿತ್ರ: ಉನ್ನತ ಅಧಿಕಾರಿಗಳು ಈ ಬಗ್ಗೆ ಯಾವ ರೀತಿಯ ಸಲಹೆ ಸೂಚನೆ ನೀಡಿದ್ದರು?

ಎಸ್ಪಿ: ಇಂತಹ ದೊಡ್ಡ ಕಾರ್ಯಕ್ರಮದ ವೇಳೆ ಉನ್ನತ ಅಧಿಕಾರಿಗಳ ಸಲಹೆ, ಸೂಚನೆ ಬಹಳ ಮುಖ್ಯವಾಗಿರುತ್ತವೆ. ದಕ್ಷಿಣ ವಲಯ ಐಜಿಪಿ ಮಧುಕರ್ ಪವಾರ್ ಹಲವು ಬಾರಿ ಮೋದಿ ಕಾರ್ಯಕ್ರಮದ ನಿಮಿತ್ತ ಮಂಡ್ಯ ಜಿಲ್ಲೆಗೆ ಆಗಮಿಸಿ, ಪರಿಶೀಲನೆ ನಡೆಸಿದರು. ಜೊತೆಗೆ ನನಗೆ ಹಲವು ಸಲಹೆಗಳನ್ನು ನೀಡಿದ್ದರು. ರಾಜ್ಯ ಕಾನೂನು ಸುವ್ಯವಸ್ಥೆಯ ಎಡಿಜಿಪಿ ಅಲೋಕ್ ಕುಮಾರ್ ಸಹ 2 ಬಾರಿ ಮಂಡ್ಯಕ್ಕೆ ಭೇಟಿ ನೀಡಿ, ಈ ಬಗ್ಗೆ ಪರಿಶೀಲಿಸಿ, ಸಲಹೆ ಸೂಚನೆಗಳನ್ನು ನೀಡಿದರು. ನಮ್ಮ ಮೇಲಿನ ಅಧಿಕಾರಿಗಳು ನೀಡಿದ ಸಲಹೆಯೂ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ. ಎಸ್‌ಪಿಜಿ ತಂಡದ ಸಲಹೆ–ಸೂಚನೆಯಂತೆಯೇ ಭದ್ರತಾ ವ್ಯವಸ್ಥೆ ಮಾಡಬೇಕಿರುವುದರಿಂದ ನಾವು ಅತ್ಯಂತ ಹೆಚ್ಚು ಜಾಗರೂಕರಾಗಿರಬೇಕಾಗಿತ್ತು.

ಮಿತ್ರ: ದೇಶದ ಪ್ರಧಾನಮಂತ್ರಿಗಳು ಪಾಲ್ಗೊಳ್ಳುವಂತಹ ಕಾರ್ಯಕ್ರಮ ನಿರ್ವಹಣೆ ಮಾಡಿದ ಅನುಭವ ಇತ್ತಾ?

ಎಸ್ಪಿ: ಪ್ರಧಾನಿ ಕಾರ್ಯಕ್ರಮಗಳ ಭದ್ರತಾ ವ್ಯವಸ್ಥೆ ಮಾಡಿದ್ದು ಇದೇ ಮೊದಲು. ಆದರೆ ಇತ್ತೀಚೆಗೆ ಅಂದರೆ ಡಿಸೆಂಬರ್ ತಿಂಗಳಲ್ಲಿ ಝಡ್ ಪ್ಲಸ್ ಭದ್ರತೆಯ ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರು ಮಂಡ್ಯಕ್ಕೆ ಆಗಮಿಸಿದ್ದರು. ಶಾ ಅವರು ಒಂದೇ ದಿನ ಎರಡು ಕಾರ್ಯಕ್ರಮಗಳನ್ನು ಮಂಡ್ಯದಲ್ಲಿ ಹಮ್ಮಿಕೊಂಡಿದ್ದರು. ಈ ಎರಡೂ ಕಾರ್ಯಕ್ರಮಕ್ಕೂ ಸೂಕ್ತ ಭದ್ರತೆ ನೀಡಿ ಕಾರ್ಯಕ್ರಮದ ಯಶಸ್ಸಿಗಾಗಿ ನಾನು ಮತ್ತು ನಮ್ಮ ಪೊಲೀಸರು ಶ್ರಮ ವಹಿಸಿದ್ದೆವು. ಇದಲ್ಲದೇ ಕಳೆದ ನವೆಂಬರ್ ತಿಂಗಳಲ್ಲಿ ಝಡ್ ಪ್ಲಸ್ ಭದ್ರತೆಯ ರಾಹುಲ್‌ಗಾಂಧಿ ಹಾಗೂ ಸೋನಿಯಾ ಗಾಂಧಿ ಮಂಡ್ಯ ಮೂಲಕ ಭಾರತ್ ಜೋಡೋ ಯಾತ್ರೆ ಸಾಗಿದಾಗಲೂ ಯಾವುದೇ ಸಮಸ್ಯೆಯಾಗದಂತೆ, ಭದ್ರತಾ ಲೋಪವಾಗದಂತೆ ಕ್ರಮ ವಹಿಸಿದ್ದೆವು. ಅದರಲ್ಲೂ ರಾಹುಲ್ ಗಾಂಧಿ ಮೂರು ದಿನಗಳ ಕಾಲ ಪಾದಯಾತ್ರೆ ನಡೆಸಿ, ವಾಸ್ತವ್ಯ ಸಹ ಹೂಡಿದ್ದರು. ಇಂತಹ ಸವಾಲಿನ ಭದ್ರತಾ ಕಾರ್ಯವನ್ನು ಅಚ್ಚುಕಟ್ಟಾಗಿ ನಡೆಸಿದ ಅನುಭವ ನನಗಿತ್ತು.

ಮಿತ್ರ ಇಂತಹ ಸವಾಲಿನ ಕಾರ್ಯಕ್ರಮದ ಬಗ್ಗೆ ಏನು ಹೇಳುತ್ತೀರಾ?

ಎಸ್ಪಿ: ಇವುಗಳನ್ನೆಲ್ಲಾ ಸವಾಲಿನ ಕಾರ್ಯಕ್ರಮ ಎನ್ನುವುದಕ್ಕಿಂತ ಇಂತಹ ಕಾರ್ಯಕ್ರಮ ಮಾಡಿದಾಗ ನಮಗೂ ಹೊಸ ಹೊಸ ಅನುಭವ ಸಿಗುತ್ತದೆ. ಜಿಲ್ಲಾಡಳಿತ ಸೇರಿದಂತೆ ಇನ್ನಿತರೆ ಅಧಿಕಾರಿಗಳು ನಮ್ಮ ಜತೆಗೆ ಕೈ ಜೋಡಿಸಿದರು. ನಮ್ಮ ಸಿಬ್ಬಂದಿ ವರ್ಗ ನಾವು ನೀಡಿದ ಜವಾಬ್ದಾರಿಗಳನ್ನು ಸಮರ್ಪಕವಾಗಿ ಮಾಡಿದರು. ಇಂತಹ ಇನ್ನಷ್ಟು ಕಾರ್ಯಕ್ರಮ ನಡೆದರೂ ಅವುಗಳನ್ನು ಯಶಸ್ವಿಗೊಳಿಸಲು ನಾವು ಸಿದ್ಧರಿದ್ದೇವೆ. ಇನ್ನೇನು ವಿಧಾನಸಭಾ ಚುನಾವಣೆ ಬರುತ್ತಿದೆ. ಇದು ನಮಗೆ ಒಂದು ರೀತಿಯ ಅಗ್ನಿಪರೀಕ್ಷೆಯ ಕಾಲ. ರಾಜಕೀಯ ಪಕ್ಷಗಳ ಪ್ರಚಾರ, ರ‍್ಯಾಲಿ, ರೋಡ್ ಶೋ, ಸಮಾವೇಶ ಹೀಗೆ ನಾನಾ ಕಾರ್ಯಕ್ರಮಗಳಿಗೆ ಭದ್ರತಾ ವ್ಯವಸ್ಥೆ ಮಾಡಬೇಕಾಗುತ್ತದೆ. ಅದಕ್ಕೆ ನಮ್ಮ ಸಿಬ್ಬಂದಿ ಸಜ್ಜಾಗಿದ್ದಾರೆ.

ಮಿತ್ರ: ಪ್ರಧಾನಿ ಮೋದಿ ಅವರ ಕಾರ್ಯಕ್ರಮದ ಯಶಸ್ಸಿನ ಕ್ರೆಡಿಟ್ ಮತ್ಯಾರಿಗೆಲ್ಲಾ ಸಿಗಬೇಕು ಅಂತೀರಾ?

ಎಸ್ಪಿ: ನಮ್ಮ ಪೊಲೀಸ್ ಇಲಾಖೆ ಭದ್ರತೆ ಬಗ್ಗೆ ಗಮನಹರಿಸಿದರೆ, ನಗರಸಭೆ ಹಾಗೂ ಅದರ ಸಿಬ್ಬಂದಿ ಸ್ವಚ್ಛತೆ, ಮೂಲ ಸೌಕರ್ಯವನ್ನು ಸಮರ್ಪಕವಾಗಿ ಒದಗಿಸಿಕೊಟ್ಟರು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಬ್ಯಾರಿಕೇಡ್ ವ್ಯವಸ್ಥೆ ಮಾಡಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವೇದಿಕೆ ನಿರ್ಮಾಣಕ್ಕೆ ಸಹಾಯಹಸ್ತ ಚಾಚಿದರು. ಎಸ್‌ಪಿಜಿ ಅಧಿಕಾರಿಗಳು ಮೋದಿ ಅವರಿಗೆ ಸಮರ್ಪಕ ಭದ್ರತೆ ನೀಡಿ, ಅದಕ್ಕೆ ಪೂರಕವಾಗಿ ನಮ್ಮಿಂದ ಸಹಕಾರ ಪಡೆದರು. ಹೀಗೆ ವಿವಿಧ ಇಲಾಖೆಗಳು ಸಮಯಕ್ಕೆ ಸರಿಯಾಗಿ ಅವರವರ ಜವಾಬ್ದಾರಿ ಅರಿತು ಕಾರ್ಯೋನ್ಮುಖರಾಗಿದ್ದರಿಂದ ಸೂಕ್ತ ಸಮಯಕ್ಕೆ ಸಿದ್ಧತೆಗಳು ಪೂರ್ಣಗೊಂಡವು. ಕಾರ್ಯಕ್ರಮವೂ ಅಚ್ಚುಕಟ್ಟಾಗಿ ನೆರವೇರಿತು. ಹೀಗಾಗಿ ಈ ಕ್ರೆಡಿಟ್ ಎಲ್ಲರಿಗೂ ಸಲ್ಲಬೇಕಲ್ಲವೇ?





ಶ್ರೀ ಸುತ್ತೂರು ಶ್ರೀ ಕ್ಷೇತ್ರದಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳಿಗಾಗಿ 'ತನುಜಾ' ಚಲನಚಿತ್ರ ಪ್ರದರ್ಶನವನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿತ್ತು. ನಾಲ್ಕು ಸಾವಿರಕ್ಕೂ ಹೆಚ್ಚು ಮಕ್ಕಳು, ವಿವಿಧ ಮಠಗಳ ಮಠಾಧಿಪತಿಗಳು, ಜೆಎಸ್‌ಎಸ್ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ, ಚಿತ್ರತಂಡ ಹಾಗೂ ಸಾರ್ವಜನಿಕರು ಚಿತ್ರ ವೀಕ್ಷಿಸಿದರು.

ಕರ್ನಾಟಕಕ್ಕೆ ಹೆಚ್ಚುವರಿ 941 ಕೋಟಿ ರೂ. ಹಣಕಾಸು ನೆರವು ಘೋಷಿಸಿದ ಕೇಂದ್ರ

ನವದೆಹಲಿ, ಮಾ.13– ರಾಷ್ಟ್ರೀಯ ವಿಪತ್ತು ನಿರ್ವಹಣೆ ನಿಧಿ (NDRF) ಅಡಿಯಲ್ಲಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ 941.04 ಕೋಟಿ ರೂ. ಹೆಚ್ಚುಚವರಿ ಅನುದಾನ ಘೋಷಿಸಿದೆ. ಅಸ್ಸಾಂ, ಹಿಮಾಚಲ ಪ್ರದೇಶ, ಮೇಘಾಲಯ, ನಾಗಾಲ್ಯಾಂಡ್‌ಗಳಿಗೂ ಹೆಚ್ಚುವರಿ ಅನುದಾನ ಘೋಷಿಸಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಐದು ರಾಜ್ಯಗಳಿಗೆ ಒಟ್ಟು 1,816.162 ಕೋಟಿ ರೂ. ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. 2022ರಲ್ಲಿ ಸಂಭವಿಸಿದ ಪ್ರವಾಹ, ಭೂಕುಸಿತ, ಮೇಘ ಸ್ಫೋಟ ಮತ್ತಿತರ ಪ್ರಾಕೃತಿಕ ವಿಪತ್ತುಗಳನ್ನು ಗಮನದಲ್ಲಿಟ್ಟುಕೊಂಡು ಈ ಅನುದಾನ ಘೋಷಿಸಲಾಗಿದೆ. ಪ್ರಾಕೃತಿಕ ವಿಕೋಪಗಳನ್ನು ಎದುರಿಸಿದ ಐದು ರಾಜ್ಯಗಳ ಜನರಿಗೆ ಸಹಾಯ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಹೊಂದಿರುವ ಒಲವನ್ನು ಇದು ತೋರಿಸಿಕೊಟ್ಟಿದೆ ಎಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿದೆ.

ಕರ್ನಾಟಕಕ್ಕೇ ಹೆಚ್ಚು ಅನುದಾನ: ಕರ್ನಾಟಕಕ್ಕೆ 941.04 ಕೋಟಿ ರೂ, ಅಸ್ಸಾಂಗೆ 520.466 ಕೋಟಿ ರೂ, ಹಿಮಾಚಲ ಪ್ರದೇಶಕ್ಕೆ 239.3 ಕೋಟಿ ರೂ, ಮೇಘಾಲಯಕ್ಕೆ 47.326 ಕೋಟಿ ರೂ, ನಾಗಾಲ್ಯಾಂಡ್‌ಗೆ 68.02 ಕೋಟಿ ರೂ. ದೊರೆಯಲಿದೆ.

ಈ ಹೆಚ್ಚುವರಿ ನೆರವು ಈಗಾಗಲೇ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯಲ್ಲಿ (SDRF) ಮೀಸಲಿಟ್ಟಿರುವುದನ್ನು ಹೊರತುಪಡಿಸಿದ್ದಾಗಿದೆ. 2022–23ನೇ ಸಾಲಿನಲ್ಲಿ 25 ರಾಜ್ಯಗಳಿಗೆ ಎಸ್‌ಡಿಆರ್‌ಎಫ್ ಅಡಿ 15,770.40 ಕೋಟಿ ರೂ ಹಾಗೂ ಎನ್‌ಡಿಆರ್‌ಎಫ್ ಅಡಿ ನಾಲ್ಕು ರಾಜ್ಯಗಳಿಗೆ 502.744 ಕೋಟಿ ರೂ. ಅನುದಾನ ನೀಡಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ. ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲೇ ಹೆಚ್ಚುವರಿ ಅನುದಾನ ಘೋಷಿಸಿರುವುದು ಗಮನಾರ್ಹ.

ಕುಲ ಪಂಚಾಯ್ತಿ ಯಜಮಾನರುಗಳ ಆಯ್ಕೆ

ಮೈಸೂರು, ಮಾ.13– ಮೈಸೂರಿನ ಹೆಬ್ಬಾಳು ಕಾಲೋನಿಯ ಕುಲ ಪಂಚಾಯ್ತಿಗೆ ನೂತನ ಯಜಮಾನರುಗಳನ್ನು ಕೆಳಕಂಡಂತೆ ಆಯ್ಕೆ ಮಾಡಲಾಗಿದೆ.

ದೊಡ್ಡ ಯಜಮಾನರಾಗಿ ಎಂ. ಗಣೇಶ್, ಚಿಕ್ಕ ಯಜಮಾನರಾಗಿ ಆರ್. ನಾಗರಾಜ್ (ಬ್ಯಾಂಕ್), ಕುಮಾರ್ (ವಡಿವೇಲ್), ಸುಬ್ರಮಣಿ, ಸಭಾಧ್ಯಕ್ಷರಾಗಿ ಸಿ.ಎಂ. ರಾಮಯ್ಯ, ಶಾಸ್ತ್ರದ ಯಜಮಾನರಾಗಿ ಮಂಜುನಾಥ್, ರವಿ (ಪೆಗಡೆ), ಖಜಾಂಚಿಗಳಾಗಿ ಪಟ್ಟನ್, ಆರ್. ಮಹದೇವಸ್ವಾಮಿ, ಕೋಲ್‌ಕಾರ್‌ಗಳಾಗಿ ಶಿವರಾಜ, ಚಲುವ, ಕಾರ್ತಿಕ್, ಪಂಚಾಯ್ತಿ ಕಾರ್ಯದರ್ಶಿಯಾಗಿ ಆರ್. ರಾಜಣ್ಣ, ಛೇರ್ಮನ್‌ಗಳಾಗಿ ಆರ್. ಮಾರ, ಚಾಮುಂಡಿ, ಆರುಗ್ಗಂ, ಬಿ. ರಂಗಸ್ವಾಮಿ, ತಮಟೆ ಯಜಮಾನರಾಗಿ ಕೆ. ಜಗದೀಶ್, ಟಿ. ಮುರುಗೇಶ, ರಂಗಸ್ವಾಮಿ (ಸಿಕ್ಕರಸಿ), ತಂಡೇ ಯಜಮಾನರಾಗಿ ರಂಗಸ್ವಾಮಿ/ಬನ್ನೇರಿ, ಎಂ. ಗಣೇಶ್/ಮಾದ, ನಾಗ (ಒಕೆಎಸ್), ರಂಗಸ್ವಾಮಿ (ವಿದ್ಯಾವರ್ಧಕ), ಶಂಕರ್ (ಮಾಂಡವಿ), ಮಹದೇವ/ಕೃಷ್ಣಯ್ಯ, ನಾಗ (ಎಂಸಿಸಿ), ಮುರಳಿ ಮತ್ತು ಎಸ್.ಕೆ. ಪಳನಿಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರು – ಬೆಂಗಳೂರು ಹೆದ್ದಾರಿ ಲೋಕಾರ್ಪಣೆ ಮಾಡಲು ಮಂಡ್ಯಗೆ ತೆರಳುವ ಮುನ್ನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಚಾಮರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪುನೀತ್ ಸ್ವಾಗತಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮಂಗಳವಾರ 14 ಮಾರ್ಚ್ 2023

ಲಾಭದ ಆಸೆ ತೋರಿಸಿ ಹಣ ಹೂಡಿಕೆ: ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳಿಗೆ ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಮಾ. 13– ಹೆಚ್ಚಿನ ಲಾಭದ ಆಸೆಗಾಗಿ ಸೇವಿಂಗ್ಸ್ ಆ್ಯಪ್‌ನಲ್ಲಿ ಹಣ ಹೂಡಿಕೆ ಮಾಡಿ ಇಬ್ಬರು ವಿದ್ಯಾರ್ಥಿಗಳು ವಂಚನೆಗೊಳಗಾಗಿರುವ ಬಗ್ಗೆ ವರದಿಯಾಗಿದೆ.

ವಿಜಯನಗರ 3ನೇ ಹಂತದ ಪಿ. ಗಣೇಶ್(23) ಮತ್ತು ಮಂಚೇಗೌಡನಕೊಪ್ಪಲಿನ ಎನ್.ಎಸ್. ಶಶಾಂಕ್(22) ಹಣ ಕಳೆದುಕೊಂಡವರಾಗಿದ್ದು, ಸಾಮಾಜಿಕ ಜಾಲತಾಣದ ಮೂಲಕ ಕೋಸ್ಟಾ ಸೇವಿಂಗ್ಸ್ ಆ್ಯಪ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ಗಣೇಶ್ ಅವರು 35 ಸಾವಿರ ರೂ. ಹಾಗೂ ಶಶಾಂಕ್ 19,439 ರೂ. ಹೂಡಿಕೆ ಮಾಡಿದ್ದು, ಆ್ಯಪ್‌ನಲ್ಲಿನ ಅವರ ಖಾತೆಯಲ್ಲಿ ಲಾಭಾಂಶ ಬಂದಿದೆ ಎಂದು ತೋರಿಸಲಾಗುತ್ತಿತ್ತು. ಆ ಹಣವನ್ನು ಡ್ರಾ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಆ್ಯಪ್‌ನವರು ಪೇಮೆಂಟ್ ಗೇಟ್‌ವೇಯನ್ನು ಇನ್ನಿಗ್ರೇಟ್ ಮಾಡುವ ಮೂಲಕ ಹಣ ಡ್ರಾ ಮಾಡಲಾಗದಂತೆ ಮಾಡಿ ವಂಚನೆ ಎಸಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಕುವೆಂಪುನಗರ ನಿವಾಸಿ ಅನಿಲ್‌ಕುಮಾರ್(39) ಎಂಬುವರ ಮೊಬೈಲ್‌ಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಸಂದೇಶ ಹಾಗೂ ಲಿಂಕ್ ರವಾನಿಸಲಾಗಿದೆ. ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿ ಮಾಹಿತಿಗಳನ್ನು ನಮೂದಿಸುತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆಯಿಂದ 42,398 ರೂ. ಅಕ್ರಮವಾಗಿ ವರ್ಗಾವಣೆ ಆಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ದ್ವಿಚಕ್ರ ವಾಹನಗಳ ನಡುವೆ ಡಿಕ್ಕಿ: ಓರ್ವ ಸಾವು

ಮೈಸೂರು, ಮಾ. 13– ದ್ವಿಚಕ್ರ ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ನಡೆದಿದೆ.

ಹುಣಸೂರು ನಿವಾಸಿಯಾಗಿರುವ ವಿದ್ಯಾರ್ಥಿ ಮಂಜುನಾಥ್(21) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಹಿಂಬದಿ ಸವಾರನಾಗಿದ್ದ ಈತನ ಸಹಪಾಠಿ ಚಾಮರಾಜನಗರದ ಗಣೇಶ್(21) ಹಾಗೂ ಮತ್ತೊಂದು ದ್ವಿಚಕ್ರ ವಾಹನದ ಸವಾರ ವಿಜಯ್ ಕುಶಾಲಪ್ಪ ಗಾಯಗೊಂಡಿದ್ದಾರೆ. ವಿದ್ಯಾರ್ಥಿ ಮಂಜುನಾಥ್ ಮಾರ್ಚ್ 10ರಂದು ರಾತ್ರಿ 10.40ರ ಸುಮಾರಿನಲ್ಲಿ ತನ್ನ ಡಿಯೋ ಸ್ಕೂಟರ್‌ನಲ್ಲಿ (ಕೆಎ 54–ಕ್ಯೂ 2690) ಸ್ನೇಹಿತ ಗಣೇಶ್‌ನನ್ನು ಹಿಂಬದಿ ಕೂರಿಸಿಕೊಂಡು ಸೂರ್ಯ ಬೇಕರಿಯಿಂದ ವಿಜಯನಗರ ವಾಟರ್ ಟ್ಯಾಂಕ್ ಕಡೆಗೆ ತೆರಳುತ್ತಿದ್ದಾಗ ಇಂದಿರಾ ನರ್ಸಿಂಗ್ ಹೋಂ ಬಳಿ ವಿಜಯ್ ಕುಶಾಲಪ್ಪ ಎಂಬಾತ ಸ್ಕೂಟರ್‌ನಲ್ಲಿ (ಕೆಎ 09–ಹೆಚ್‌ವೈ 2718) ವೇಗವಾಗಿ ಬಂದು ಕಾರೊಂದನ್ನು ಓವರ್‌ಟೇಕ್ ಮಾಡುವಾಗ ಮಂಜುನಾಥ್ ಚಾಲನೆ ಮಾಡಿಕೊಂಡು ಬಂದ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದಾನೆ. ಈ ಅಪಘಾತದಲ್ಲಿ ಮೂವರೂ ಗಾಯಗೊಂಡಿದ್ದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮಂಜುನಾಥ್ ಸಾವನ್ನಪ್ಪಿದ್ದಾನೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.


ಕಾರಿನಲ್ಲಿದ್ದ ಚಿನ್ನಾಭರಣ, ಹೊಸ ಬಟ್ಟೆ ಕಳವು

ತಿ.ನರಸೀಪುರ, ಮಾ. 13– ಪಾರ್ಕ್ ಮಾಡಲಾಗಿದ್ದ ಕಾರಿನಲ್ಲಿ ಚಿನ್ನಾಭರಣ ಹಾಗೂ ಬಟ್ಟೆ ಕಳವು ಮಾಡಿರುವ ಘಟನೆ ತಿ.ನರಸೀಪುರದ ಕೊಳ್ಳೇಗಾಲ ಮುಖ್ಯ ರಸ್ತೆಯಲ್ಲಿ ನಡೆದಿದೆ.

ತಿ.ನರಸೀಪುರ ತಾಲೂಕು ಮಾವಿನಹಳ್ಳಿ ಗ್ರಾಮದ ಹೆಚ್. ರಮೇಶ್(41) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಚಿಕ್ಕಮ್ಮ ತಾಯಿ ಯಾತ್ರಿ ಭವನದಲ್ಲಿ ನಡೆದ ಸಂಬಂಧಿಕರ ಮದುವೆ ಆರತಕ್ಷತೆಗಾಗಿ ಮಾರ್ಚ್ 9ರಂದು ರಾತ್ರಿ 8 ಗಂಟೆಗೆ ಆಲ್ಟೋ ಕಾರ್ (ಕೆಎ 55–ಎಂ 3455)ನಲ್ಲಿ ಕುಟುಂಬ ಸಮೇತರಾಗಿ ತೆರಳಿದ್ದು, ಅಲ್ಲಿನ ಪಂಕ್ಚರ್ ಶಾಪ್ ಬಳಿ ಕಾರನ್ನು ಪಾರ್ಕ್ ಮಾಡಿ ಆರತಕ್ಷತೆ ಮುಗಿಸಿಕೊಂಡು ರಾತ್ರಿ 10.20ಕ್ಕೆ ಹಿಂತಿರುಗಿದಾಗ ಕಾರಿನ ಹಿಂಬದಿಯ ಕಿಟಕಿ ಗಾಜು ಇಳಿಸಿರುವುದು ಕಂಡುಬಂದಿದೆ. ಖದೀಮರು ಕಾರಿನಲ್ಲಿ 17 ಗ್ರಾಂ ತೂಕದ ಚಿನ್ನಾಭರಣ ಹಾಗೂ ಮಕ್ಕಳಿಗೆ ತೆಗೆದುಕೊಂಡಿದ್ದ 2 ಜೊತೆ ಬಟ್ಟೆ ಇಟ್ಟಿದ್ದ ಬ್ಯಾಗ್ ಅನ್ನು ಕಳವು ಮಾಡಿದ್ದಾರೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಪತ್ರಿಕಾ ಛಾಯಾಗ್ರಾಹಕನ ಅಪೂರ್ವ ಛಾಯಾಚಿತ್ರಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿ





ಮೈಸೂರು, ಮಾ.13 – ಮೈಸೂರಿನ ಹಿರಿಯ ಪತ್ರಿಕಾ ಛಾಯಾಗ್ರಾಹಕ ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಂ.ಎಸ್. ಬಸವಣ್ಣ (ಅನುರಾಗ್ ಬಸವರಾಜ್) ಅವರು ತೆಗೆದಿರುವ ಚಿರತೆಯೊಂದು ಜನರನ್ನು ಅಟ್ಟಾಡಿಸುತ್ತಿರುವ ಚಿತ್ರಕ್ಕೆ ಪಶ್ಚಿಮಬಂಗಾಳದ ಹೆಲೀಸ್ ಸರ್ಕ್ಯೂಟ್ ಮತ್ತು ಫೋಟೋಗ್ರಫಿ ಸೊಸೈಟಿ ಆಫ್ ಅಮೇರಿಕ ಸಂಯುಕ್ತಾಶ್ರಯದಲ್ಲಿ ಪಶ್ಚಿಮಬಂಗಾಳದಲ್ಲಿ ನಡೆದ ಅಂತರರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ ಹಾಗೂ ಒಂದು ಬೆಳ್ಳಿ ಪದಕ ಲಭಿಸಿದೆ.

ಈ ಸ್ಪರ್ಧೆಯಲ್ಲಿ ಅಮೇರಿಕಾ, ಜರ್ಮನ್, ಉಕ್ರೇನ್, ಹಾಂಕಾಂಗ್, ಕೆನಡಾ, ಕೊರಿಯಾ, ಜಪಾನ್, ಇಟಲಿ ಸೇರಿದಂತೆ 30 ರಾಷ್ಟ್ರಗಳ ಛಾಯಾಗ್ರಾಹಕರು 5 ವಿಭಾಗದಿಂದ 3500 ಹೆಚ್ಚು ಛಾಯಾಚಿತ್ರ ಪ್ರದರ್ಶಿಸಿದ್ದರು. ವನ್ಯಜೀವಿ ವಿಭಾಗದಲ್ಲಿ ನಾಗರಹೊಳೆ ಅರಣ್ಯದಲ್ಲಿ ತೆಗೆದಿರುವ ಹುಲಿಯೊಂದು ಕಾಡಹಂದಿಯನ್ನು ಬೇಟೆಯಾಡಲು ಅಟ್ಟಾಡಿಸುತ್ತಿರುವ ಚಿತ್ರಕ್ಕೆ ಕಂಚಿನ ಪದಕ ಲಭಿಸಿದ್ದು ಈ ಸಂದರ್ಭದಲ್ಲಿ ಪ್ರಶಸ್ತಿ ವಿಜೇತ ಎಂ.ಎಸ್.ಬಸವಣ್ಣ ಅವರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಅಭಿನಂದಿಸಿದೆ.

ಬೇಡಿಕೆ ಈಡೇರಿಕೆಗೆ ಮೀನಾಮೇಷ: ಮಾ.21ರಿಂದ ಅನಿರ್ದಿಷ್ಟಾವಧಿ ಮುಷ್ಕರ

ಕರಾರ ಸಾರಿಗೆ ನಿಗಮದ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧಾರ

ಮೈಸೂರು, ಮಾ.13(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ 4 ನಿಗಮದ ನೌಕರರ ವೇತನ ಪರಿಷ್ಕರಣೆ ಸೇರಿದಂತೆ ಇತರೆ 8 ಬೇಡಿಕೆಗಳ ಈಡೇರಿಕೆ ಸಂಬಂಧ ವಿಳಂಬ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಖಂಡಿಸಿ ಮಾ.21 ಬೆಳಗ್ಗೆ 6 ಗಂಟೆಯಿಂದ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಕರಾರ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧಾರ ಕೈಗೊಂಡಿದೆ.

ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ, ಕರಾರ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್, ಕೆಎಸ್‌ಆರ್‌ಟಿಸಿ ಪ.ಜಾ ಮತ್ತು ಪ.ಪಂ. ನೌಕರರ ಸಂಘ, ಕರಾರಸಾ ಸಂಸ್ಥೆ ಪಜಾ/ ಪ.ಪಂಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಸೇರಿದಂತೆ ಒಟ್ಟು 6 ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಈ ತೀರ್ಮಾನಕ್ಕೆ ಬಂದಿದೆ.

21.02.2023 ರಂದು ಅಂಬಾರಿ ಉತ್ಸವ ಬಸ್‌ಗಳ ಲೋಕಾರ್ಪಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಜಂಟಿ ಕ್ರಿಯಾ ಸಮಿತಿ ನೀಡಿದ ಮನವಿಯನ್ನು ಸ್ವೀಕರಿಸಿ, ಕೆಎಸ್‌ಆರ್‌ಟಿಸಿ ನೌಕರರ ಬಗ್ಗೆ ಸಹಾನುಭೂತಿ ಇದೆ. ನೌಕರರ ಬೇಡಿಕೆಯನ್ನು ಬಜೆಟ್ ನಂತರ ಮಾತುಕತೆ ನಡೆಸಿ, ನೌಕರರ ವೇತನ ಹೆಚ್ಚಳ ಮಾಡಲಾಗುವುದು ಎಂದು ಜಂಟಿ ಕ್ರಿಯಾ ಸಮಿತಿ ಸದಸ್ಯರಿಗೆ ಭರವಸೆ ನೀಡಿದ್ದರು.

ಅದರಂತೆ ಅಧಿಕಾರಿಗಳ ನೇತೃತ್ವ ಹಾಗೂ ಸಾರಿಗೆ ಸಚಿವ ಬಿ.ಶ್ರೀರಾಮುಲು ನೇತೃತ್ವದ ಮಾ.8ರ ಸಭೆಯಲ್ಲಿ ನೌಕರರ ಬೇಡಿಕೆಯನ್ನು ಈಡೇರಿಸುವ ಸಂಬಂಧ ಸಭೆ ನಡೆಸಿ ಆಶ್ವಾಸನೆ ನೀಡಲಾಗಿತ್ತು. ಚುನಾವಣೆ ಘೋಷಣೆಗೆ ಕೆಲವೇ ದಿನ ಉಳಿದಿದ್ದರೂ ಕೆಎಸ್‌ಆರ್‌ಟಿಸಿ ನೌಕರರ ಸಮಸ್ಯೆ ಕುರಿತು ಸರ್ಕಾರದಿಂದ ಯಾವುದೇ ಭರವಸೆ ಸಿಗದ ಹಿನ್ನೆಲೆಯಲ್ಲಿ 8 ಬೇಡಿಕೆಗಳನ್ನು ಮುಂದಿಟ್ಟು ಮಾ.21 ಬೆಳಗ್ಗೆ 6 ಗಂಟೆಯಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಿರುವ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೃಷಿಯಲ್ಲಿ ಸ್ಥಳೀಯ ಮತ್ತು ಉತ್ಕೃಷ್ಟ ಬೀಜಗಳ ಕುರಿತು ಕಾರ್ಯಾಗಾರ

ಮೈಸೂರು, ಮಾ.13– ಮೈಸೂರು ವಿವಿಯ ಸಸ್ಯಾರೋಗ್ಯ ಕೇಂದ್ರದ ವತಿಯಿಂದ 'ಕೃಷಿಯಲ್ಲಿ ಸ್ಥಳೀಯ ಮತ್ತು ಉತ್ಕೃಷ್ಟ ಬೀಜಗಳ ಮಹತ್ವ' ಕುರಿತು ಬುಧವಾರ (ಮಾ.14) ಬೆಳಗ್ಗೆ 10.30ಕ್ಕೆ ಲಿನ್ನಿಯಸ್ ಸಭಾಂಗಣದಲ್ಲಿ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಗಾರವನ್ನು ಕೇರಳದ ಕೇರಳ ಅರಣ್ಯ ಸಂಶೋಧನಾ ಸಂಸ್ಥೆಯ ನಿವೃತ್ತ ವಿಜ್ಞಾನಿ ಡಾ.ಯು.ಎಂ.ಚಂದ್ರಶೇಖರ್ ಉದ್ಘಾಟಿಸಲಿದ್ದಾರೆ. 4 ಗೋಷ್ಠಿಗಳು ನಡೆಯಲಿವೆ ಎಂದು ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಎನ್.ಅಮೃತೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

30 ವರ್ಷದಿಂದ ಅತಂತ್ರರಾಗಿದ್ದ ಬಡಕುಟುಂಬಗಳಿಗೆ ಶಾಸಕ ನಾಗೇಂದ್ರ ಭದ್ರತೆ

ಮಂಜುನಾಥಪುರದ 272 ಕುಟುಂಬಗಳಿಗೆ ಮನೆ ಹಕ್ಕುಪತ್ರ ವಿತರಣೆ



ಮೈಸೂರು, ಮಾ.13(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.18ರ ವ್ಯಾಪ್ತಿಯ ಮಂಜುನಾಥಪುರದ 272 ಕುಟುಂಬಗಳಿಗೆ ಸೋಮವಾರ ಮನೆ ಹಕ್ಕುಪತ್ರ ವಿತರಿಸಲಾಯಿತು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಆಯೋಜಿಸಿದ್ದ ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ ಶಾಸಕ ಎಲ್.ನಾಗೇಂದ್ರ ಮನೆ ಯಜಮಾನಿಯರಿಗೆ ಹಕ್ಕುಪತ್ರ ವಿತರಣೆ ಮಾಡಿ, ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ಬಡವರಿಗೆ ಅವರ ಹಕ್ಕುಗಳನ್ನು ನೀಡುವ ಕಾರ್ಯಕ್ರಮ ಇದಾಗಿದೆ. ಕಳೆದ 30 ವರ್ಷಗಳಿಂದ ಮಂಜುನಾಥಪುರದಲ್ಲಿ ನೆಲೆಸಿದ್ದರೂ ಮನೆಯ ಹಕ್ಕುಪತ್ರ ನೀಡಿರಲಿಲ್ಲ. ಸತತ ಪ್ರಯತ್ನದಿಂದ ಪಾಲಿಕೆ ವ್ಯಾಪ್ತಿಯಲ್ಲಿದ್ದ ಜಾಗವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವರ್ಗಾಯಿಸಿ ಹಕ್ಕುಪತ್ರ ವಿತರಣೆ ಮಾಡಲಾಗಿದೆ. ಇನ್ನು ಮುಂದೆ ಜಾಗವೂ ನಿಮ್ಮದೆ ಮನೆಯೂ ನಿಮ್ಮದೆ ಎಂದರು.

ಅಭಿವೃದ್ಧಿ ಕಾಣದೆ ಅಕ್ಷರಶಃ ಕೊಳಗೇರಿಯೇ ಆಗಿದ್ದ ಮಂಜುನಾಥಪುರ ಇಂದು ಯಾದವಗಿರಿ–ಗೋಕುಲಂ ಬಡಾವಣೆಗಳಿಗೆ ಸಮನಾಗಿ ಅಭಿವೃದ್ಧಿಯಾಗಿದೆ. ರಸ್ತೆ–ಚರಂಡಿ ಅಭಿವೃದ್ಧಿ, ಸಮುದಾಯ ಭವನ, ದೇವಸ್ಥಾನದ ಅಭಿವೃದ್ಧಿ, ಅನೇಕರಿಗೆ ದ್ವಿಚಕ್ರ ವಾಹನ, ಸಾಲ–ಸೌಲಭ್ಯ ನೀಡುವ ಮೂಲಕ ಬಡಾವಣೆ ನಿವಾಸಿಗಳನ್ನು ಒಳಗೊಂಡಂತೆ ಅಭಿವೃದ್ಧಿ ಮಾಡಲಾಗಿದೆ ಎಂದರು.

ಫುಲ್ ಮಾರ್ಕ್ಸ್ ಕೊಡಿ: ಮಂಜುನಾಥಪುರ ಅಸ್ತಿತ್ವಕ್ಕೆ ಬಂದು ಸುಮಾರು 50 ವರ್ಷಗಳೇ ಕಳೆದಿವೆ. ಇಷ್ಟೂ ವರ್ಷಗಳಲ್ಲಿ ಎಷ್ಟು ಸರ್ಕಾರಗಳು ಬಂದಿವೆ ಯಾರಾದರೂ ನಿಮಗೆ ಮನೆ ಹಕ್ಕುಪತ್ರ ಕೊಟ್ಟಿದ್ದಾರಾ.. ಬಡಾವಣೆ ಅಭಿವೃದ್ಧಿ ಮಾಡಿದ್ದಾರಾ.. ಇಲ್ಲ. ಚಾಮರಾಜ ಕ್ಷೇತ್ರದ ಶಾಸಕನಾಗಿ ಆಯ್ಕೆಯಾದಾಗಿನಿಂದ ಮಂಜುನಾಥಪುರದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇನೆ. ಚೆನ್ನಾಗಿ ಓದಿ ಫುಲ್ ಮಾರ್ಕ್ಸ್ ಪಡೆಯುವ ವಿದ್ಯಾರ್ಥಿಗಳಂತೆ ಹಕ್ಕುಪತ್ರ ನೀಡುವುದಕ್ಕಾಗಿ ಶ್ರಮಿಸಿದ್ದೇನೆ. ಇದೆಲ್ಲವನ್ನು ಪರಿಗಣಿಸಿ ಮುಂಬರುವ ಚುನಾವಣೆಯಲ್ಲಿ ನೀವೇ ನನಗೆ ಫುಲ್ ಮಾರ್ಕ್ಸ್ ಕೊಡಬೇಕು ಎನ್ನುವ ಮೂಲಕ ಪರೋಕ್ಷವಾಗಿ ಮತ ಯಾಚಿಸಿದರು.

ಮಕ್ಕಳನ್ನು ವಿದ್ಯಾವಂತರನ್ನಾಗಿಸಿ: ಭವಿಷ್ಯದಲ್ಲಿ ಇಂದಿನ ಮಕ್ಕಳೇ ಆಸ್ತಿ. ಆದ್ದರಿಂದ ನಿಮ್ಮ ಮಕ್ಕಳನ್ನು ತಪ್ಪದೆ ಶಾಲೆಗೆ ಕಳುಹಿಸಿ, ವಿದ್ಯಾವಂತರನ್ನಾಗಿ ಮಾಡಿ. ನಿಮ್ಮಿಂದ ಸಾಧ್ಯವಾಗದಿದ್ದರೆ ತಿಳಿಸಿ, ನಾನೇ ಅವರನ್ನು ಓದಿಸುವ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದ ಶಾಸಕರು, ನಿವಾಸಿಗಳ ಬಳಿಗೆ ತೆರಳಿ ಮನೆ ಹಕ್ಕುಪತ್ರ ವಿತರಣೆ ಮಾಡಿದರಲ್ಲದೆ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ನಿವಾಸಿಗಳ ಮೊಗದಲ್ಲಿ ಹರ್ಷ: ಮನೆ ಹಕ್ಕುಪತ್ರ ಪಡೆದ ನಿವಾಸಿಗಳ ಮೊಗದಲ್ಲಿ ಸಂತಸ ಎದ್ದು ಕಾಣುತ್ತಿತ್ತು ಹಲವು ವರ್ಷಗಳ ಬಳಿಕ ವಾಸವಿದ್ದ ತಮ್ಮ ಮನೆಯ ಹಕ್ಕುಪತ್ರ ದೊರೆತಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ ನಿವಾಸಿಗಳು ಶಾಸಕ ಎಲ್.ನಾಗೇಂದ್ರ ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ನಗರ ಪಾಲಿಕೆ ಸದಸ್ಯರಾದ ಬಿ.ವಿ. ರವೀಂದ್ರ ಚಿಕ್ಕವೆಂಕಟ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಾರ್ಯನಿರ್ವಾಹಕ ಇಂಜಿನಿಯರ್ ಹರೀಶ್, ಸಹಾಯಕ ಇಂಜಿನಿಯರ್ ಝಾನ್ಸಿ ರಾಯ್, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸೋಮಶೇಖರ ರಾಜು, ಆಶ್ರಯ ಸಮಿತಿ ಸದಸ್ಯರಾದ ಮಹೇಶ್, ಅನೂಜ್ ಸಾರಸ್ವತ, ಬಿಜೆಪಿ ಮುಖಂಡರಾದ ನಂಜಪ್ಪ ಶ್ರೀನಿವಾಸ್ ಗೌಡ, ಎಸ್.ಸಿ. ಮೋರ್ಚಾದ ಹರೀಶ್, ಗೋವಿಂದ, ಗುರು, ರಮೇಶ್, ಕವಿತಾ, ನಾಗರತ್ನ, ಗಿರೀಶ್, ಮಂಜು, ರಾಮಸ್ವಾಮಿ, ಸುಬ್ರಮಣ್ಯ ಮತ್ತಿತರರಿದ್ದರು.

ರಿಜಿಸ್ಟರ್ ಮಾಡಿಸಿಕೊಳ್ಳಿ...

ಮನೆ ಹಕ್ಕುಪತ್ರ ಪಡೆದವರು, ತಿಂಗಳೊಳಗೆ ತಮ್ಮ ಹೆಸರಿಗೆ ಮನೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ರಿಜಿಸ್ಟರ್ ಶುಲ್ಕವೂ ಕಡಿಮೆಯಿದೆ. ಗೊಂದಲಗಳಿದ್ದರೆ ನೇರವಾಗಿ ಕಚೇರಿಗೆ ಬಂದು ಮಾಹಿತಿ ಪಡೆಯಬಹುದು. ಸರ್ಕಾರ ನಿಗದಿ ಮಾಡಿರುವ 2 ಸಾವಿರ(ಎಸ್‌ಸಿ–ಎಸ್‌ಟಿ)ರೂ. ಶುಲ್ಕ ಪಾವತಿಸಿ ಮನೆ ಹಕ್ಕುಪತ್ರಗಳನ್ನು ಪಡೆದುಕೊಳ್ಳದೆ ಇರುವವರು ಕೂಡಲೇ ಪಡೆದುಕೊಳ್ಳಿ.

- **ಹರೀಶ್**, ಕಾರ್ಯನಿರ್ವಾಹಕ ಇಂಜಿನಿಯರ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಮಕ್ಕಳಿಗೆ ಇಂದಿನಿಂದ ಜಂತುಹುಳು ಮಾತ್ರೆ ವಿತರಣೆ



ಮೈಸೂರು, ಮಾ.13(ಎಸ್‌ಬಿಡಿ)– ಮಕ್ಕಳನ್ನು ಜಂತುಹುಳು ಮುಕ್ತರನ್ನಾಗಿಸಲು ಮಾ.14ರಿಂದ 25ರವರೆಗೆ ಆಲ್ಬೆಂಡಜೋಲ್ ಮಾತ್ರೆಗಳನ್ನು ನೀಡಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ಕುವೆಂಪುನಗರ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಂತುಹುಳು ನಿವಾರಣಾ ದಿನದ ಅಂಗವಾಗಿ ಜಿಲ್ಲೆಯ ಎಲ್ಲಾ ಅಂಗನವಾಡಿ ಹಾಗೂ ಶಾಲಾ–ಕಾಲೇಜುಗಳಲ್ಲಿ ಉಚಿತವಾಗಿ ಆಲ್ಬೆಂಡಜೋಲ್ ಮಾತ್ರೆಗಳನ್ನು ನೀಡಲಾಗಿದ್ದು, ಕಾರಣಾಂತರಗಳಿಂದ ಇಂದು ಮಾತ್ರೆ ಪಡೆಯಲು ಸಾಧ್ಯವಾಗದವರಿಗೆ ಮಾ.14ರಿಂದ 25ರವರೆಗೆ ವಿತರಿಸಲಾಗುವುದು. ಪೋಷಕರು ತಮ್ಮ 1–19 ವರ್ಷದ ಮಕ್ಕಳಿಗೆ ಈ ಮಾತ್ರೆ ನೀಡಬೇಕೆಂದು ಹೇಳಿದರು.

ಜಿಲ್ಲಾ ಆರ್‌ಸಿಹೆಚ್ ಡಾ.ಎಂ.ಎಸ್.ಜಯಂತ್ ಮಾತನಾಡಿ, ಜಂತುಹುಳುವಿನಿಂದ ಹಲವು ಆರೋಗ್ಯ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಹಾಗಾಗಿ ಪೋಷಕರು, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ–ಕಾಲೇಜು ಶಿಕ್ಷಕರು ನಿರ್ಲಕ್ಷ್ಯ ಮಾಡದೆ 1ರಿಂದ 19 ವರ್ಷದ ಮಕ್ಕಳಿಗೆ ಜಂತುಹುಳು ನಿವಾರಕ ಆಲ್ಬೆಂಡಜೋಲ್ ಮಾತ್ರೆಯನ್ನು ಸೇವಿಸಲು ನೆರವಾಗಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಮಲಮ್ಮ, ಪ್ರಾಂಶುಪಾಲೆ ಭಾಗ್ಯ, ಹಿರಿಯ ಪ್ರಾಥಮಿಕ ಶಾಲೆಯ ಹೇಮಾವತಿ, ಶಿಕ್ಷಕರು, ಆರೋಗ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಜಂತುಹುಳುವಿನಿಂದ ರಕ್ತಹೀನತೆ, ಪೌಷ್ಟಿಕಾಂಶ ಕೊರತೆ, ಹಸಿವಾಗದಿರುವುದು, ನಿಶಕ್ತಿ, ಆತಂಕ, ಹೊಟ್ಟೆನೋವು, ವಾಕರಿಕೆ, ವಾಂತಿ, ಅತಿಸಾರ, ತೂಕ ಕಡಿಮೆಯಾಗುವುದು ಹೀಗೆ ಹಲವು ಸಮಸ್ಯೆಗಳು ಉಂಟಾಗುವುದರಿಂದ ಜಂತುಹುಳು ನಿವಾರಿಸುವ ಆಲ್ಬೆಂಡಜೋಲ್ ಮಾತ್ರೆಯನ್ನು ಮಕ್ಕಳಿಗೆ ನಿಯಮಿತವಾಗಿ ನೀಡುವುದು ಅಗತ್ಯವಾಗಿದೆ.

ಮಾ. 17ರಂದು ಕಾಂಗ್ರೆಸ್ ಮೊದಲ ಪಟ್ಟಿ ಬಿಡುಗಡೆ ನಿರೀಕ್ಷೆ



ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿ ಮಾರ್ಚ್ 17ರಂದು ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ದಾವಣಗೆರೆಯಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಗೆಲುವಿನ ಸಾಧ್ಯತೆಯೇ ಅಭ್ಯರ್ಥಿಗಳ ಆಯ್ಕೆಗೆ ಪರಿಗಣಿಸಿದ ಮೊದಲ ಮಾನದಂಡವಾಗಿದೆ. ಮಾರ್ಚ್ 17ರಂದು ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸಭೆ ನಡೆಯಲಿದ್ದು, ಅಂದೇ ಪಟ್ಟಿ ಪ್ರಕಟವಾಗಬಹುದು ಎಂದು ತಿಳಿಸಿದ್ದಾರೆ. ಟಿಕೆಟ್ ಆಕಾಂಕ್ಷಿಗಳ ಅರ್ಜಿಯನ್ನು ಸ್ಕ್ರೀನಿಂಗ್ ಸಮಿತಿ ಪರಾಮರ್ಶಿಸಿದೆ. ಸ್ಕ್ರೀನಿಂಗ್ ಸಮಿತಿಯ ಅಭಿಪ್ರಾಯವನ್ನು ಶೀಘ್ರದಲ್ಲೇ ಎಐಸಿಸಿಯ ಕೇಂದ್ರ ಚುನಾವಣಾ ಸಮಿತಿಗೆ ಶೀಘ್ರದಲ್ಲೇ ಕಳುಹಿಸಲಾಗುವುದು ಎಂದು ಕೆಲವು ದಿನಗಳ ಹಿಂದಷ್ಟೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದರು.

224 ಸದಸ್ಯ ಬಲದ ಕರ್ನಾಟಕ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಕನಿಷ್ಠ 150 ಸ್ಥಾನ ಗಳಿಸಬೇಕು ಎಂಬುದು ಕಾಂಗ್ರೆಸ್ ಗುರಿಯಾಗಿದೆ. 2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 104 ಸ್ಥಾನ ಗಳಿಸಿತ್ತು. ಕಾಂಗ್ರೆಸ್ 78 ಹಾಗೂ ಜೆಡಿಎಸ್ 37 ಸ್ಥಾನ ಗೆದ್ದಿದ್ದವು.

ಜೆಡಿಎಸ್ ಈಗಾಗಲೇ ಅಭ್ಯರ್ಥಿಗಳ ಮೊದಲ ಪಟ್ಟಿ ಘೋಷಣೆ ಮಾಡಿದ್ದು, 90 ಮಂದಿ ಅಭ್ಯರ್ಥಿಗಳನ್ನು ಹೆಸರಿಸಿದೆ. ಬಿಜೆಪಿ ಹಾಗೂ ಕಾಂಗ್ರೆಸ್ ಇನ್ನಷ್ಟೇ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಬೇಕಿದೆ ಈ ಮಧ್ಯೆ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರದ ಭರಾಟೆ ತೀವ್ರಗೊಂಡಿದೆ. ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆ, ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ, ಜೆಡಿಎಸ್ ಪಂಚರತ್ನ ಯಾತ್ರೆ ಹಾಗೂ ಸಮಾವೇಶಗಳ ಮೂಲಕ ಮತದಾರರನ್ನು ಸೆಳೆಯಲು ಯತ್ನಿಸುತ್ತಿವೆ.

ಚುನಾವಣೆ ಸಿದ್ಧತೆ ಬಗ್ಗೆ ಪರಿಶೀಲನೆ ನಡೆಸಲು ಕಳೆದ ವಾರ ಮೂರು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದ ಕೇಂದ್ರ ಚುನಾವಣಾ ಆಯೋಗದ ನಿಯೋಗ ಶನಿವಾರವಷ್ಟೇ ಸಿದ್ಧತೆ ಬಗ್ಗೆ ಮಾಹಿತಿ ನೀಡಿ ತೆರಳಿದೆ. ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ವಿಕಾಸಸೌಧದಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಸಿದ್ಧತೆಗಳ ಮಾಹಿತಿ ನೀಡಿದ್ದರು. ಅಂಗವಿಕಲರು, 80 ವರ್ಷ ಮೇಲ್ಪಟ್ಟವರಿಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ ನೀಡುವುದೂ ಸೇರಿದಂತೆ ಆಯೋಗ ಕೈಗೊಂಡಿರುವ ಕ್ರಮಗಳ ಬಗ್ಗೆ ಅವರು ಮಾಹಿತಿ ನೀಡಿದ್ದರು. ಇದೇ ವೇಳೆ, ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಎಲ್ಲಿಯೂ, ಯಾರಿಂದಲೂ ದುರುಪಯೋಗ ಮಾಡಲು ಸಾಧ್ಯವಿಲ್ಲ. ಅವುಗಳನ್ನು ಬದಲಾವಣೆ ಮಾಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು. ಗುಜರಾತ್‌ನಲ್ಲಿ ಬಳಸಿದ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಬಳಸಬಾರದು ಎಂದು ಕಾಂಗ್ರೆಸ್ ಮಾಡಿತ್ತು.

ಬಿಜೆಪಿ ಬೆಂಬಲಿಸಿದರೆ ಭರಪೂರ ಯೋಜನೆ

ಶಾಸಕ ರಾಮದಾಸ್ ಮನವಿ



ಮೈಸೂರು, ಮಾ.13(ಎಂಕೆ)– ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಜನಪರ ಕಾರ್ಯಕ್ರಮಗಳಿಗೆ ಸಾರ್ವಜನಿಕವಾಗಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಮಗದಷ್ಟು ಯೋಜನೆಗಳಿಗಾಗಿ ಮತ್ತೊಮ್ಮೆ ಬಿಜೆಪಿಗೆ ಪೂರ್ಣ ಬೆಂಬಲ ನೀಡುವಂತೆ ಶಾಸಕ ಎಸ್.ಎ.ರಾಮದಾಸ್ ಮನವಿ ಮಾಡಿದರು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ.55ರ ಯೋಗಕ್ಷೇಮ ಯಾತ್ರೆಗೆ ನಂಜುಮಳಿಗೆಯ ಜೋಡಿ ಅರಳಿಕಟ್ಟೆ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಹಲವು ಹತ್ತು ಜನಪರ ಕಾರ್ಯಕ್ರಮಗಳನ್ನು ರೂಪಿಸಿವೆ. ಒಂದಲ್ಲಾ ಒಂದು ಯೋಜನೆಗಳ ಪ್ರಯೋಜನ ಪ್ರತಿ ಕುಟುಂಬಕ್ಕೂ ಲಭಿಸಿದೆ. ಹಾಗೆಯೇ ಮತ್ತಷ್ಟು, ಮಗದಷ್ಟು ಯೋಜನೆಗಳು ದೊರೆಯಬೇಕಾದರೆ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರ ಒಂದಾದರಷ್ಟೇ ಜನರಿಗೆ ಉಪಯುಕ್ತ ಆಡಳಿತ ನೀಡಲು ಸಾಧ್ಯ. ಹಾಗಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಅಂದರೆ ಕನಿಷ್ಠ 150 ಸ್ಥಾನಗಳನ್ನು ಗೆಲ್ಲಿಸುವ ಕೆಲಸ ಆಗಬೇಕು. ಇದಕ್ಕೆ ನಿಮ್ಮ ಸಹಕಾರ ಬೇಕು ಎಂದ ಅವರು, ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಮಗೆ ತಿಳಿದಿದ್ದು, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಬೇಕೆನ್ನುವ ಆಶಯ ನನ್ನದಾಗಿದೆ ಎಂದು ಹೇಳಿದರು.

ಈ ಯೋಗಕ್ಷೇಮ ಯಾತ್ರೆಯ ಮೂಲಕ ದೇಶ ಹಾಗೂ ರಾಜ್ಯದ ಎಲ್ಲಾ ವಿಚಾರವನ್ನು ಜನಸಾಮಾನ್ಯರ ಮುಂದೆ ಇಡುವ ಕೆಲಸ ನಡೆಯುತ್ತಿದೆ. ಜನರ ಪ್ರೀತಿ ವಿಶ್ವಾಸ ನಿರೀಕ್ಷೆಗೂ ಮೀರಿ ಲಭಿಸಿದೆ. ಅಭಿವೃದ್ಧಿ ಆಧಾರದ ಮೇಲೆ ಕೃಷ್ಣರಾಜ ಕ್ಷೇತ್ರದ ಜನ ನನ್ನನ್ನು ನೋಡುತ್ತಿರುವುದು ಹೆಚ್ಚಿನ ಸಂತೋಷ ತಂದಿದೆ ಎಂದು ತಿಳಿಸಿದರು. ಬಳಿಕ ನಡೆದ ಯೋಗಕ್ಷೇಮ ಯಾತ್ರೆಯಲ್ಲಿ 55ನೇ ವಾರ್ಡ್‌ನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ನಿವಾಸಿಗಳ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದರು. ಯೋಗಕ್ಷೇಮ ಯಾತ್ರೆಯಲ್ಲಿ ಕ್ಷೇತ್ರದ ಬಿಜೆಪಿ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.13– ಕಾಮಗಾರಿ ನಿಮಿತ್ತ ಮಾ.15 ರ ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ ಅಂಬೇಡ್ಕರ್ ಭವನ ರಸ್ತೆ ಕ್ಯೂಬಾ ಮಸ್ಜಿದ್ ವೃತ್ತ ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ, RTO–55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರಹುಂಡಿ, ನೆಹರುನಗರ, ಸಾತಗಳ್ಳಿ ಗ್ರಾಮ, ಡಿ.ಟಿ.ಎಸ್.ರಾವ್‌ನಗರ, ವಿಟಿಯೂ ಕಾಲೇಜು ಎದುರು, ಸನ್‌ಪ್ಯೂರ್ ಬಡಾವಣೆ, ಸಾತಗಳ್ಳಿ ಬಿ ಜೋನ್, ವಿಟಿಯೂ ಕಾಲೇಜು, ಭಾರತ್‌ನಗರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಭಾರತ–ಆಸ್ಟ್ರೇಲಿಯಾ 4ನೇ ಪಂದ್ಯ ಡ್ರಾನಲ್ಲಿ ಅಂತ್ಯ; ಟೀಂ ಇಂಡಿಯಾ ಸರಣಿ ಕೈ ವಶ



ಅಹ್ಮದಾಬಾದ್, ಮಾ.13– ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾರ್ಡರ್–ಗವಾಸ್ಕರ್ ಟ್ರೋಫಿಯ 4ನೇ ಹಾಗೂ ಅಂತಿಮ ಟೆಸ್ಟ್ ಪಂದ್ಯ ನೀರಸ ಡ್ರಾದಲ್ಲಿ ಅಂತ್ಯವಾಗಿದ್ದು, 4 ಪಂದ್ಯಗಳ ಟೆಸ್ಟ್ ಸರಣಿಯನ್ನು ಟೀಂ ಇಂಡಿಯಾ 2–1 ಅಂತರದಲ್ಲಿ ಕೈವಶ ಮಾಡಿಕೊಂಡಿದೆ.

ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ 4ನೇ ಟೆಸ್ಟ್ ಪಂದ್ಯ ನಿರೀಕ್ಷೆಯಂತೆಯೇ ಡ್ರಾದಲ್ಲಿ ಅಂತ್ಯವಾಗಿದೆ. ಉಭಯ ತಂಡಗಳಿಂದ ತೀವ್ರ ಪೈಪೋಟಿ ಕಂಡಿದ್ದ ಪಂದ್ಯ ಕೊನೆಗೂ ಡ್ರಾದಲ್ಲಿ ಅಂತ್ಯವಾಗಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ್ದ ಆಸ್ಟ್ರೇಲಿಯಾ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ ಖವಾಜಾ (188 ರನ್) ಮತ್ತು ಗ್ರೀನ್ (114 ರನ್) ಶತಕಗಳ ನೆರವಿನಿಂದ 480 ರನ್ ಗಳ ಬೃಹತ್ ಮೊತ್ತ ಪೇರಿಸಿತ್ತು.

ಆಸಿಸ್‌ಗೆ ತಿರುಗೇಟು ನೀಡಿದ್ದ ಭಾರತ ಕೂಡ ಮೊದಲ ಇನ್ನಿಂಗ್ಸ್‌ನಲ್ಲಿ ಶುಭ್‌ಮನ್ ಗಿಲ್ (128ರನ್) ಮತ್ತು ವಿರಾಟ್ ಕೊಹ್ಲಿ (186) ಶತಕ ಮತ್ತು ಅಕ್ಷರ್ ಪಟೇಲ್‌ರ ಅರ್ಧಶತಕದ ನೆರವಿನಿಂದ 571 ರನ್‌ಗಳ ಬೃಹತ್ ಮೊತ್ತ ಕಲೆಹಾಕಿ 91 ರನ್‌ಗಳ ಮುನ್ನಡೆ ಪಡೆದಿತ್ತು. ಬಳಿಕ ಎರಡನೇ ಇನ್ನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ತಂಡ 2 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತ್ತು ಈ ವೇಳೆ ಉಭಯ ತಂಡದ ನಾಯಕರು ಪಂದ್ಯವನ್ನು ಡ್ರಾ ಮಾಡಿಕೊಳ್ಳುವ ಕುರಿತು ಘೋಷಣೆ ಮಾಡಿದರು.

ಈ ಹಂತದಲ್ಲಿ ಆಸಿಸ್ ಪರ ಟ್ರಾವಿಸ್ ಹೆಡ್ 90 ರನ್ ಗಳಿಸಿ ಔಟಾಗಿದ್ದರು. ಕ್ರೀಸ್‌ನಲ್ಲಿದ್ದ ಮಾರ್ನಸ್ ಲ್ಯಾಬುಶೇನ್ ಅಜೇಯ 63ರನ್ ಗಳಿಸಿದ್ದರು. ಇನ್ನು ಭಾರತದ ಪರ ಅಶ್ವಿನ್ ಮತ್ತು ಅಕ್ಷರ್ ಪಟೇಲ್ ತಲಾ ಒಂದು ವಿಕೆಟ್ ಪಡೆದಿದ್ದರು.

ಈ ಮೂಲಕ ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯನ್ನು ಭಾರತ 2–1 ಅಂತರದಲ್ಲಿ ಜಯಿಸಿದ್ದು, ಅಂತೆಯೇ ವಿಶ್ವಟೆಸ್ಟ್ ಚಾಂಪಿಯನ್ ಶಿಪ್‌ಗೆ ಸತತ 2ನೇ ಬಾರಿಗೆ ಅರ್ಹತೆ ಗಿಟ್ಟಿಸಿದೆ.

ಶ್ರೀಲಂಕಾ ವಿರುದ್ಧ ನ್ಯೂಜಿಲೆಂಡ್‌ಗೆ ಜಯ

WTC ಫೈನಲ್‌ಗೆ ಭಾರತ ಲಗ್ಗೆ

ಕ್ರೈಸ್ಟ್ ಚರ್ಚ್, ಮಾ.13– ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ರೇಸ್‌ನಲ್ಲಿ ಭಾರತಕ್ಕೆ ತೀವ್ರ ಪೈಪೋಟಿ ನೀಡಿದ್ದ ಶ್ರೀಲಂಕಾ ತಂಡ ನ್ಯೂಜಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಸೋಲುವ ಮೂಲಕ ರೇಸ್‌ನಿಂದ ಹೊರ ಬಿದ್ದಿದ್ದು, ಭಾರತ WTC ಫೈನಲ್‌ಗೆ ಲಗ್ಗೆ ಇಟ್ಟಿದೆ.

ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿಯ ಮೊದಲನೇ ಪಂದ್ಯದಲ್ಲಿ ನ್ಯೂಜಿಲೆಂಡ್ 2 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ ಈ ಸೋಲಿನೊಂದಿಗೆ ಶ್ರೀಲಂಕಾದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಕನಸು ಭಗ್ನಗೊಂಡಿದ್ದು, ಭಾರತ ನೇರವಾಗಿ ಪ್ರವೇಶ ಪಡೆದುಕೊಂಡಿದೆ.

ನ್ಯೂಜಿಲೆಂಡ್ ವಿರುದ್ಧ ಮೊದಲ ಟೆಸ್ಟ್ ಪಂದ್ಯದಲ್ಲಿ ವಿರೋಚಿತ ಆಟ ಪ್ರದರ್ಶಿಸಿದ ಶ್ರೀಲಂಕಾ ತಂಡ 2ನೇ ಇನ್ನಿಂಗ್ಸ್‌ನಲ್ಲಿ ನ್ಯೂಜಿಲೆಂಡ್‌ಗೆ ಗೆಲ್ಲಲು 285 ರನ್‌ಗಳ ಸವಾಲಿನ ಗುರಿ ನೀಡಿತು. ಈ ಮೊತ್ತವನ್ನು ಬೆನ್ನು ಹತ್ತಿದ ನ್ಯೂಜಿಲೆಂಡ್ ತಂಡ ಡರಿಲ್ ಮಿಚೆಲ್ ಶತಕ (102 ರನ್), ಟಾಮ್ ಲಾಥಮ್ ಅರ್ಧಶತಕ (67 ರನ್) ಮತ್ತು ಮ್ಯಾಟ್ ಹೆನ್ರಿ (72 ರನ್) ಅರ್ಧಶತಕದ ನೆರವಿನಿಂದ ಕೇವಲ 2 ವಿಕೆಟ್ ಅಂತರದ ರೋಚಕ ಗೆಲುವು ಸಾಧಿಸಿತು. ಅಂತಿಮ ಓವರ್‌ವರೆಗೂ ಶ್ರೀಲಂಕಾ ಕೂಡ ಪಟ್ಟುಬಿಡದೆ ಹೋರಾಡಿ ಕೊನೆಗೆ ಸೋಲೊಪ್ಪಿಕೊಂಡಿದೆ. ಭಾರತ ಆಸ್ಟ್ರೇಲಿಯಾ ನಡುವಿನ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡರು ಭಾರತ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದುಕೊಂಡಿದೆ.

ಇನ್ನು ಈಗಾಗಲೇ ಫೈನಲ್ ಗೆ ಲಗ್ಗೆ ಇಟ್ಟಿರುವ ಆಸ್ಟ್ರೇಲಿಯಾ ತಂಡ 68.52 ಶೇಕಡಾ ಅಂಕಗಳೊಂದಿಗೆ (PCT) WTC ಟೇಬಲ್‌ನಲ್ಲಿ ಅಗ್ರ ಸ್ಥಾನದಲ್ಲಿ ಮುಂದುವರೆದಿದೆ. ಇಂದಿನ ಟೆಸ್ಟ್ ಪಂದ್ಯ ಗೆದ್ದಿದ್ದರೆ ಅದರ ಅಂಕ ಗಳಿಕೆ ಶೇ.53.33 ರಿಂದ 61.11ಕ್ಕೆ ಏರಿಕೆಯಾಗಿರುತ್ತಿತ್ತು. ಆಗ ಶೇ. 60.29 ಅಂಕಗಳಿಸಿರುವ ಭಾರತ ತಂಡ ಮೂರನೇ ಸ್ಥಾನಕ್ಕೆ ತಳ್ಳಲ್ಪಡುತ್ತಿತ್ತು. ಒಂದು ವೇಳೆ ಹೀಗಾಗಿದ್ದರೆ ಭಾರತ ಹಾಲಿ ಆಸ್ಟ್ರೇಲಿಯಾ ವಿರುದ್ಧ ಅಹ್ಮದಾಬಾದ್‌ನಲ್ಲಿ ನಡೆಯುತ್ತಿರುವ 4ನೇ ಟೆಸ್ಟ್ ಪಂದ್ಯವನ್ನು ಗೆಲ್ಲಲೇಬೇಕಾಗಿತ್ತು.

ಕುಮಾರಸ್ವಾಮಿಗೆ ಒಮ್ಮೆ ಚೆಲುವರಾಯಸ್ವಾಮಿ, ನಂತರ ನಾನೊಮ್ಮೆ ಸಹಾಯ ಮಾಡಿದೆ ಆದರೆ ಅವರಿಗೆ ಕೃತಜ್ಞತೆ ಇಲ್ಲ

● ನಾಗಮಂಗಲದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ ● ಈ ಭಾಗದಲ್ಲಿ ಬಿಜೆಪಿಗೆ ಕಾಂಗ್ರೆಸ್ಸೇ ಎದುರಾಳಿ: ಅದಕ್ಕೆ ಪ್ರಧಾನಿ ಮೋದಿ ಕಾಂಗ್ರೆಸ್ ಟೀಕಿಸುತ್ತಾರೆ



ನುಡಿದಂತೆ ನಡೆದ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ

ನಾಗಮಂಗಲ: ಈ ಹಿಂದಿನ ಸಿದ್ದರಾಮಯ್ಯ ಸರ್ಕಾರ ಜನರಿಗೆ ನೀಡಿದ ಎಲ್ಲಾ ಭರವಸೆ ಈಡೇರಿಸಿದೆ. ರೈತರ ಸಾಲಮನ್ನಾ, ನರೇಗಾ ಯೋಜನೆ, ಆಶ್ರಯ, ಅನ್ನಭಾಗ್ಯ ಹೀಗೆ ನುಡಿದಂತೆ ನಡೆದಿರುವ ಸರ್ಕಾರವನ್ನು ಮತ್ತೊಮ್ಮೆ ರಾಜ್ಯದ ಜನ ಅಧಿಕಾರಕ್ಕೆ ತರಬೇಕು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮತ್ತಷ್ಟು ಅಭಿವೃದ್ಧಿ ಕಾರ್ಯಗಳು ನಾಗಮಂಗಲ, ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಆಗಲಿದೆ ಎಂದು ಮಾಜಿ ಶಾಸಕ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸಿದ್ದರಾಮಯ್ಯ ಸರ್ಕಾರದಲ್ಲಿ ನಾಗಮಂಗಲ ತಾಲೂಕಿನಲ್ಲಿ 247 ಕೋಟಿ ವೆಚ್ಚದಲ್ಲಿ ಕೆರೆಗಳ ಅಭಿವೃದ್ಧಿ ಕೆಲಸವಾಗಿದೆ. ನಾಲೆಗಳ ಆಧುನೀಕರಣವಾಗಿದೆ. ಬರ ಪೀಡಿತ ಪ್ರದೇಶಕ್ಕೆ ಹೇಮಾವತಿ ನೀರು ದೊರಕಿಸಿಕೊಟ್ಟಿದ್ದು ಸಿದ್ದರಾಮಯ್ಯ ಸರ್ಕಾರ ಎಂದರು. ನನಗೆ ಶಾಸಕನಾಗಿ ಮೆರೆಯಲು ಅಧಿಕಾರ ಬೇಡ. ನಿಮ್ಮ ಸೇವೆ ಮಾಡಲು ಅಧಿಕಾರ ಬೇಕಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವ ಮೂಲಕ ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಕೈ ಬಲಪಡಿಸಿ ಎಂದ ಅವರು, ಈ ಬಾರಿ ಜಿಲ್ಲೆಯಲ್ಲಿ ಬದಲಾವಣೆ ಗಾಳಿ ಬೀಸುತ್ತಿದ್ದು, ಕಾಂಗ್ರೆಸ್ ಶಾಸಕರು 7 ಕ್ಷೇತ್ರದಲ್ಲೂ ಗೆಲ್ಲಲಿದ್ದು, ಮಂಡ್ಯ ಜಿಲ್ಲೆ ಸಮಗ್ರ ಅಭಿವೃದ್ಧಿ ಕಾಣಲಿದೆ ಎಂದು ಭವಿಷ್ಯ ನುಡಿದರು.

ನಾಗಮಂಗಲ, ಮಾ.13– ಮಂಡ್ಯ ಜನತೆ ಕೃತಜ್ಞತೆ ಇಲ್ಲದ ಜೆಡಿಎಸ್ ಪಕ್ಷ ತಿರಸ್ಕರಿಸಬೇಕು. ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗಲು ಚಲುವರಾಯಸ್ವಾಮಿ ಒಮ್ಮೆ ಸಹಾಯ ಮಾಡಿದ್ದರೆ, ನಾನೊಮ್ಮೆ ಸಹಾಯ ಮಾಡಿದ್ದೇನೆ. ಆದರೂ ಅವರಿಗೆ ಕೃತಜ್ಞತಾ ಮನೋಭಾವವಿಲ್ಲ ಜೆಡಿಎಸ್‌ಗೆ ಮಂಡ್ಯ ಜಿಲ್ಲೆ ಜನರ ಮತ ಬೇಕು. ಜಿಲ್ಲೆ ಅಭಿವೃದ್ಧಿ ಬೇಡವಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಪಟ್ಟಣದಲ್ಲಿ ಸೋಮವಾರ ನಡೆದ ಪ್ರಜಾಧ್ವನಿ ಯಾತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಮರಕ್ಕೆ ಬೇರು ಎಷ್ಟು ಮುಖ್ಯವೋ, ಮನುಷ್ಯನಿಗೆ ಮಾನವೀಯತೆ ಅಷ್ಟೇ ಮುಖ್ಯ. ಮನುಷ್ಯತ್ವ ಇದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯಲು ಸಾಧ್ಯ. ಸುರೇಶ್‌ಗೌಡ ನಂತರದವರು ಜೆಡಿಎಸ್ ಪಕ್ಷಕ್ಕೆ ಸಿಗಬಹುದು. ಆದರೆ ಒಬ್ಬ ಚಲುವರಾಯಸ್ವಾಮಿ ಜೆಡಿಎಸ್‌ಗೆ ಸಿಗುವುದು ಕಷ್ಟ ಅದನ್ನು ಜೆಡಿಎಸ್ ಅರ್ಥ ಮಾಡಿಕೊಂಡಿಲ್ಲ ಎಂದು ಟೀಕಿಸಿದರು.

ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಜೆಡಿಎಸ್‌ನಿಂದ 10 ಮಂದಿ ಶಾಸಕರು ಗೆದ್ದಿದ್ದರು. ಆಗ ನಾಗಮಂಗಲದಲ್ಲಿ ಗೆದ್ದಿದ್ದ ಚಲುವರಾಯಸ್ವಾಮಿ ಸಹ ಒಬ್ಬರು. ಈ ಪೈಕಿ 6 ಮಂದಿ ಶಾಸಕರು ಕಾಂಗ್ರೆಸ್ ಸೇರಿದರೆ ಚಲುವರಾಯಸ್ವಾಮಿ ಮಾತ್ರ ದೇವೇಗೌಡರು ಹಾಗೂ ಕುಮಾರಸ್ವಾಮಿಗೆ ಮೋಸ ಮಾಡಲ್ಲ ಎಂದು ಜೆಡಿಎಸ್‌ನಲ್ಲೇ ಉಳಿದರು. ಮುಂದೆ ಧರಂಸಿಂಗ್ ಸರ್ಕಾರ ಬಿದ್ದಾಗ ಕುಮಾರಸ್ವಾಮಿ ಅವರನ್ನು ಸಿಎಂ ಮಾಡಲು ಚಲುವರಾಯಸ್ವಾಮಿ ಪಟ್ಟ ಶ್ರಮ ನನಗೆ ಮಾತ್ರ ಗೊತ್ತು. ಅದನ್ನು ಸ್ವತಃ ಕುಮಾರಸ್ವಾಮಿ ಅವರೇ ಒಪ್ಪಿಕೊಂಡಿದ್ದಾರೆ.

ಆದರೆ ಅಂತಹ ಚಲುವರಾಯಸ್ವಾಮಿಗೆ ಜೆಡಿಎಸ್ ಪಕ್ಷ ವಂಚನೆ ಮಾಡಿತು. ಹೋರಾಟಗಾರನಿಗೆ ಸೋಲಿಲ್ಲ. ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು ಎನ್ನುವ ಮೂಲಕ ಕುಮಾರಸ್ವಾಮಿ ಹಳೆಯದನ್ನು ನೆನಪಿಸಿಕೊಳ್ಳಲಿ ಎಂದು ವ್ಯಂಗ್ಯವಾಡಿದರು.

ಬಹುಮತ ಇಲ್ಲದ ದೇವೇಗೌಡರ ಪಕ್ಷಕ್ಕೆ ನಾವು ಬೆಂಬಲ ಕೊಟ್ಟು ಅವರನ್ನು ಪ್ರಧಾನಿ ಮಾಡಿದೆವು. ಇತ್ತ ಕುಮಾರಸ್ವಾಮಿ ಮಾತೆತ್ತಿದರೆ ಕಣ್ಣೀರು ಸುರಿಸುತ್ತಾರೆ. ಮೈತ್ರಿ ಸರ್ಕಾರ ಬೀಳಿಸಿದ್ದೇ ಕಾಂಗ್ರೆಸ್ ಅಂತಾರೆ. ಒಂದು ದಿನವಾದರೂ ಕುಮಾರಸ್ವಾಮಿ ಸರ್ಕಾರವನ್ನು ಬೀಳಿಸಲು ನಾವು ಯತ್ನಿಸಿದ್ದರೆ ನಮ್ಮನ್ನು ಆ ದೇವರೇ ನೋಡಿಕೊಳ್ಳಲಿ ಎಂದರು.

ಜಿಲ್ಲೆಯ 7 ಕ್ಷೇತ್ರಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದೀರಿ. ಜಿಲ್ಲೆಗೆ ಆಗಿರುವ ಅಭಿವೃದ್ಧಿ ಕಾರ್ಯವಾದರೂ ಏನು ಎಂದು ಪ್ರಶ್ನಿಸಿದ ಅವರು, ನಿಮ್ಮ ಬಳಿ ಮತ ಕೇಳಲು ಅವರಿಗೆ ಯಾವ ಮುಖ ಇದೆ. ಈ ನಿಟ್ಟಿನಲ್ಲಿ ಈ ಬಾರಿ ಮಂಡ್ಯ ಜನ ಜೆಡಿಎಸ್ ತಿರಸ್ಕರಿಸಿ, ರೈತ, ನಿಮ್ಮ ಮನೆ ಮಗನಾದ ನನಗೆ ಒಂದು ಅವಕಾಶ ನೀಡಿ. ನಮಗೆ ಅಧಿಕಾರ ಕೊಟ್ಟರೆ ನಾವು ನಿಮ್ಮ ಪರ ಇರುತ್ತೇವೆ. ಈ ಕ್ಷೇತ್ರದಲ್ಲಿ ಚಲುವರಾಯಸ್ವಾಮಿ ಅವರನ್ನು ಗೆಲ್ಲಿಸಿ ಎಂದು ಕೇಳಿಕೊಂಡರು.

ಪ್ರಧಾನಿ ಮೋದಿ ಮಂಡ್ಯಕ್ಕೆ ಆಗಮಿಸಿ ಮಂಡ್ಯ, ರಾಮನಗರ, ಮೈಸೂರಿನಲ್ಲಿ ಹತ್ತಕ್ಕೂ ಹೆಚ್ಚು ಶಾಸಕರನ್ನು ಹೊಂದಿರುವ ಜೆಡಿಎಸ್ ಟೀಕೆ ಮಾಡದೇ ಕೇವಲ ಕಾಂಗ್ರೆಸ್ ಟೀಕೆ ಮಾಡಿದ್ದಾರೆ. ಅವರಿಗೂ ಗೊತ್ತಿದೆ ರಾಜ್ಯದಲ್ಲಿ ಬಿಜೆಪಿಗೆ ಕಾಂಗ್ರೆಸ್ ಪಕ್ಷವೇ ಎದುರಾಳಿ ಹೊರತು ಜೆಡಿಎಸ್ ಅಲ್ಲ ಎಂಬುದು. ಪಂಚರತ್ನ ಯೋಜನೆ ಮಾಡುವ ಎಂದರೂ ಜೆಡಿಎಸ್‌ಗೆ ಜನ ಮತ್ತೆ ಮತ ಹಾಕಲ್ಲ. ಈ ನಿಟ್ಟಿನಲ್ಲಿ ನಾಗಮಂಗಲ ಜನ ಚಲುವರಾಯಸ್ವಾಮಿ ಬೆಂಬಲಿಸಿ ಎಂದು ಮನವಿ ಮಾಡಿದರು.

ನಾನು ನೋವಿನಿಂದ, ಭಾರವಾದ ಮನಸ್ಸಿನಿಂದ ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಈ ಭಾಗದಲ್ಲಿ ನನ್ನ ಬೆನ್ನೆಲುಬಾಗಿದ್ದ ಧ್ರುವನಾರಾಯಣ ಅವರ ಸಾವನ್ನು ನನಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ಪಕ್ಷಕ್ಕಾಗಿ ಹಗಲು–ರಾತ್ರಿ ದುಡಿಯುತ್ತಿದ್ದ ಅವರ ನಿಧನ ನನ್ನ ಬುದ್ಧಿ ಶಕ್ತಿ ಕುಂದುವಂತೆ ಮಾಡಿದೆ. ಅವರ ಸಂಘಟನೆ ಬಹಳ ಶಕ್ತಿಶಾಲಿಯಾಗಿತ್ತು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದ ಅವರು, ಧ್ರುವನಾರಾಯಣ ಅವರು ನಾಗಮಂಗಲ ತಾಲೂಕಿನ ಅಳಿಯನಾಗಿದ್ದರು. ಇದು ನಿಮ್ಮ ನಾಡಿಗೂ ಹೆಮ್ಮೆಯ ವಿಚಾರ ಎಂದರು.

ಇದೇ ವೇಳೆ ಜೆಡಿಎಸ್ ತೊರೆದ ಮನ್‌ಮುಲ್ ಮಾಜಿ ನಿರ್ದೇಶಕ ಜವರೇಗೌಡ ಹಾಗೂ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಬೆಟ್ಟೇಗೌಡ ಸೇರಿದಂತೆ ಹಲವಾರು ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು. ವೇದಿಕೆಯಲ್ಲಿ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಕೆ.ಬಿ.ಚಂದ್ರಶೇಖರ್, ಬಿ.ರಾಮಕೃಷ್ಣ, ಬಿ.ಪ್ರಕಾಶ್, ಹೆಚ್.ಬಿ.ರಾಮು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕುರುಬರ ಸಂಘದ ಅಧ್ಯಕ್ಷ ಸುರೇಶ್, ಮುಖಂಡರಾದ ಎಂ.ಎಸ್.ಚಿದಂಬರ್, ಕೀಲಾರ ರಾಧಾಕೃಷ್ಣ, ವಿಜಯ ರಾಮೇಗೌಡ, ಅಮರಾವತಿ ಚಂದ್ರಶೇಖರ್, ಡಾ.ಮೂರ್ತಿ, ಗುರುಚರಣ್, ಕೃಷ್ಣೇಗೌಡ, ಪ್ರಸನ್ನ ಸೇರಿದಂತೆ ಇತರರಿದ್ದರು.

ಚಾರ್ಜಿಂಗ್ ವೇಳೆ ಎಲೆಕ್ಟ್ರಿಕ್ ಸ್ಕೂಟರ್ ಸ್ಫೋಟ




ಮದ್ದೂರು, ಮಾ.13– ಚಾರ್ಜಿಂಗ್ ಹಾಕಿದ್ದ ವೇಳೆ ಎಲೆಕ್ಟ್ರಿಕ್ ಸ್ಕೂಟರ್ ಸ್ಫೋಟಗೊಂಡು ಮೂವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ವಳಗೆರೆಹಳ್ಳಿಯಲ್ಲಿ ನಡೆದಿದೆ.

ತಾಲೂಕಿನ ವಳಗೆರೆಹಳ್ಳಿ ಗ್ರಾಮದ ಮುತ್ತುರಾಜು ಎಂಬುವರು ತಮ್ಮ ನಿವಾಸದಲ್ಲಿ ಎಲೆಕ್ಟ್ರಿಕ್ ಸ್ಕೂಟರ್ ಅನ್ನು ಚಾರ್ಜ್‌ಗೆ ಹಾಕಿದ್ದ ವೇಳೆ ಏಕಾಏಕಿ ಸ್ಫೋಟಗೊಂಡು ಮನೆಯಲ್ಲಿದ್ದ ಟಿವಿ, ರೆಫ್ರಿಜರೇಟರ್, ಆಹಾರ ಸಾಮಾಗ್ರಿಗಳು, ದಿನಬಳಕೆ ವಸ್ತುಗಳು ಇನ್ನಿತರೆ ಉಪಕರಣಗಳು ಬೆಂಕಿಗೆ ಆಹುತಿಯಾಗಿ ಸುಮಾರು 5 ಲಕ್ಷಕ್ಕೂ ಹೆಚ್ಚು ನಷ್ಟ ಸಂಭವಿಸಿದೆ.

ಕಳೆದ 7 ತಿಂಗಳ ಹಿಂದೆ ಮುತ್ತುರಾಜು ಎಲೆಕ್ಟ್ರಿಕ್ ಸ್ಕೂಟರ್ ಖರೀದಿಸಿದ್ದು, ತಮ್ಮ ನಿವಾಸದಲ್ಲಿ ಎಂದಿನಂತೆ ವಾಹನವನ್ನು ಚಾರ್ಜಿಂಗ್ ಹಾಕಿದ ಕೆಲ ಹೊತ್ತಲ್ಲೇ ಸ್ಕೂಟರ್ ಸ್ಫೋಟಗೊಂಡು ಈ ದುರ್ಘಟನೆ ಸಂಭವಿಸಿದೆ.

ಈ ಸಂಬಂಧ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶ್ರೀರಂಗಪಟ್ಟಣ ಟೌನ್ ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ರಜಿನಿ ಅವರಿಗೆ ಆದೇಶ ಪತ್ರ ನೀಡಿ, ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅಭಿನಂದಿಸಿದರು.

ಕೆ.ಆರ್.ಪೇಟೆ: ಇಂದು 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ



ಕೆಆರ್.ಪೇಟೆ, ಮಾ.13– ತಾಲೂಕಿನ ಅಗ್ರಹಾರಬಾಚಹಳ್ಳಿ ಗೇಟ್ ಸಮೀಪದ ಜಯಮ್ಮ–ರಾಮಸ್ವಾಮಿ ಸಮುದಾಯ ಭವನದಲ್ಲಿ ಮಂಗಳವಾರ(ಮಾ.14) 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ.

ಬೆಳಗ್ಗೆ 10 ಗಂಟೆಗೆ ಪಟ್ಟಣದ ಪ್ರವಾಸಿ ಮಂದಿರ ವೃತ್ತದಿಂದ ತಾಲೂಕು ಕಚೇರಿ ವರೆಗೆ ತಾಯಿ ಭುವನೇಶ್ವರಿ ಭಾವಚಿತ್ರ ಹಾಗೂ ಸಮ್ಮೇಳನಾಧ್ಯಕ್ಷ ಸಾಹಿತಿ ಶಿ.ಕುಮಾರಸ್ವಾಮಿ ಅವರನ್ನು ಬೆಳ್ಳಿ ಸಾರೋಟಿನಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಗುವುದು. ತಹಸೀಲ್ದಾರ್ ನಿಸರ್ಗಪ್ರಿಯ ರಾಷ್ಟ್ರ ಧ್ವಜ, ಪುರಸಭಾಧ್ಯಕ್ಷೆ ಮಹಾದೇವಿ ನಂಜುಂಡ ನಾಡಧ್ವಜ ಹಾಗೂ ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರ್ ಪರಿಷತ್ತಿನ ಧ್ವಜಾರೋಹಣ ನೆರವೇರಿಸುವರು. ಜಯಮ್ಮ ರಾಮಸ್ವಾಮಿ ಸಮುದಾಯ ಭವನದಲ್ಲಿ ನಡೆಯುವ ತಾಲೂಕು ಸಾಹಿತ್ಯ ಸಮ್ಮೇಳನವನ್ನು ಕುವೆಂಪು ಅವರ ಅಳಿಯ ಕುವೆಂಪು ವಿವಿ ವಿಶ್ರಾಂತ ಉಪಕುಲಪತಿ ಪ್ರೊ.ಕೆ. ಚಿದಾನಂದಗೌಡ ಉದ್ಘಾಟಿಸುವರು. ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಸಚಿವ ಕೆ.ಸಿ.ನಾರಾಯಣಗೌಡ ಗಣ್ಯರನ್ನು ಸನ್ಮಾನಿಸಲಿದ್ದಾರೆ. ಸಮ್ಮೇಳನದಲ್ಲಿ ಗಣ್ಯರು, ವಿವಿಧ ಇಲಾಖೆಗಳ ಮುಖ್ಯಸ್ಥರು, ಸಾಹಿತಿಗಳು ಭಾಗವಹಿಸಲಿದ್ದು, ಬೆಳಗ್ಗೆಯಿಂದ ಸಂಜೆವರೆಗೂ ವಿಚಾರಗೋಷ್ಠಿ, ಕವಿಗೋಷ್ಠಿ, ಸರ್ವಾಧ್ಯಕ್ಷರೊಂದಿಗೆ ಸಂವಾದ ಕಾರ್ಯಕ್ರಮ, ಸಾಹಿತ್ಯ, ಕೃಷಿ ಸೇರಿದಂತೆ ವಿವಿಧ ಬಗೆಯ ವಿಚಾರ ಮಂಡನೆ ವಿದ್ವಾಂಸರು ಮಂಡಿಸಲಿದ್ದಾರೆ.

ಸಮ್ಮೇಳನಾಧ್ಯಕ್ಷರ ಪರಿಚಯ: 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸಾಹಿತಿ ಶಿ.ಕುಮಾರಸ್ವಾಮಿ ಅವರು ಕೆ.ಆರ್.ಪೇಟೆಯ ಎಸ್.ಬಿ.ರಸ್ತೆ ನಿವಾಸಿ ಶಿವಬಸಪ್ಪ, ಕಮಲಮ್ಮ ದಂಪತಿ ಪುತ್ರರಾಗಿ 1956ರ ಆ.3ರಂದು ಜನಿಸಿದರು. ಬಾಲ್ಯ ಶಿಕ್ಷಣವನ್ನು ಪಟ್ಟಣದಲ್ಲೇ ಮುಗಿಸಿದ ಇವರು ಕನ್ನಡ ಎಂ.ಎ. ಪದವಿ ಗಳಿಸಿದ್ದಾರೆ. ವಿವಿಧ ತಾಲೂಕಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ ಹಾಗೂ ಪ್ರಾಂಶುಪಾಲರಾಗಿ 33 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶಿ. ಕುಮಾರಸ್ವಾಮಿ ಅವರು ಬೆಳ್ಳಕ್ಕಿ ಸಾಲು ಸಾಲು, ಎಳೆಮಿಂಚು, ಬಲ್ಲೇಶ್ವರ ವಚನ ಗಳು, ಗ್ರಾಮದೇವತೆ ದೊಡ್ಡಕೇರಮ್ಮ ಇತಿಹಾಸ ಸಂಪದ, ನವೋದಯ ನಾಟಕಾವಲೋಕನ, ಮಹಾಕವಿ ಸುಜನಾ ಕುರಿತು ಕೃತಿ ಸೇರಿದಂತೆ 20ಕ್ಕೂ ಹೆಚ್ಚು ಪುಸ್ತಕ ಬರೆದಿದ್ದಾರೆ. 30 ಮಕ್ಕಳ ನಾಟಕಗಳನ್ನು ಬರೆದು ನಿರ್ದೇಶನ ಮಾಡಿದ್ದಾರೆ. ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಲಭಿಸಿದ್ದು, ಪ್ರಸ್ತುತ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಆಹ್ವಾನ: ಸಮ್ಮೇಳಾಧ್ಯಕ್ಷರಾಗಿ ಆಯ್ಕೆಯಾಗಿರುವ ಸಾಹಿತಿ ಹಾಗೂ ನಿವೃತ್ತ ಪ್ರಾಂಶುಪಾಲ ಶಿ.ಕುಮಾರಸ್ವಾಮಿ ಅವರನ್ನು ಮೈಸೂರಿನ ಅವರ ನಿವಾಸದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ರಮೇಶ್, ತಾಲೂಕು ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ ಫಲತಾಂಬೂಲ ನೀಡಿ ಸಮ್ಮೇಳನಕ್ಕೆ ಆಹ್ವಾನಿಸಿದರು.

ಈ ವೇಳೆ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ರಾಜ್ಯ ಉಗ್ರಾಣ ನಿಗಮದ ಮಾಜಿ ಪ್ರಾದೇಶಿಕ ಅಧಿಕಾರಿ ಲಕ್ಷ್ಮೀಗೌಡ, ತಾಲೂಕು ಶಿಕ್ಷಣ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎ.ಕೆ.ದೇವರಾಜು, ತಾಲೂಕು ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜು, ಮಾಜಿ ಸಿಆರ್‌ಪಿ ಆರ್.ಕೆ.ರಮೇಶ್ ಲೋಕೇಶ್, ಸೇರಿದಂತೆ ಹಲವರಿದ್ದರು.

ಇಂದಿನಿಂದ ನೀರು ವ್ಯತ್ಯಯ

ಮಂಡ್ಯ, ಮಾ.13– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ರಾಗಿಮುದ್ದನಹಳ್ಳಿ ಸಮೀಪವಿರುವ ಜಲ ಶುದ್ಧಿಕರಣಾಗಾರದಲ್ಲಿ ನೆಲಮಟ್ಟದ ಜಲಸಂಗ್ರಹಗಾರವನ್ನು ಸ್ವಚ್ಛಗೊಳಿಸುವ ಕಾಮಗಾರಿ ಮಾ.14ರಿಂದ 16ರವರೆಗೆ ನಡೆಯುವುದರಿಂದ ಮಂಡ್ಯ ನಗರದಲ್ಲಿ ನೀರು ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಬಹುತೇಕ ಸದಸ್ಯರ ಸಲಹೆ–ಸೂಚನೆ

ಮೈಸೂರು, ಮಾ.13(ಆರ್‌ಕೆ)–ಇಂದು ಮಂಡಿಸಲಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ 2023–24 ಸಾಲಿನ ಆಯ–ವ್ಯಯಕ್ಕೆ ಸಂಬಂಧಿಸಿದಂತೆ ಸದಸ್ಯರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.



ಅನುದಾನ ಕ್ರೋಢೀಕರಣದ ಕೊರತೆ ಇರುವುದರಿಂದ ನಿರ್ವಹಣೆ ಕಷ್ಟವಾಗುತ್ತಿದೆ. ಆರ್ಥಿಕ ಸಂಪನ್ಮೂಲವೇ ಇಲ್ಲದಿದ್ದರೆ ಅಭಿವೃದ್ಧಿ ಹೇಗಾಗುತ್ತದೆ. ಮುಡಾ ವ್ಯಾಪ್ತಿಯ ಬಡಾವಣೆಗಳಲ್ಲಿ ರಸ್ತೆ, ಒಳಚರಂಡಿ, ಕುಡಿಯುವ ನೀರು, ವಿದ್ಯುತ್, ಉದ್ಯಾನವನಗಳಂತಹ ಮೂಲ ಸೌಲಭ್ಯಗಳು ಸಮರ್ಪಕವಾಗಿಲ್ಲದ ಕಾರಣ ಅಲ್ಲಿನ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಅಂತಹ ಬಡಾವಣೆಗಳನ್ನು ನಗರಪಾಲಿಕೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಒಪ್ಪಿಸುವುದು ಒಳಿತು ಎಂದು ಶಾಸಕ ಜಿ.ಟಿ. ದೇವೇಗೌಡರು ಅಭಿಪ್ರಾಯಪಟ್ಟರು. ಒಟ್ಟಾರೆ ಅನುದಾನದ ಶೇ.21.4 ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿಗಾಗಿಯೇ ಮೀಸಲಿಡಲಿದ್ದು, ಅದೇ ಉದ್ದೇಶಕ್ಕೆ ಖರ್ಚು ಮಾಡಬೇಕು. ಮೈಸೂರು ನಗರಕ್ಕೆ ಹೊಂದಿಕೊಂಡಂತಿರುವ ಗ್ರಾಮಗಳಿಗೂ ಮೂಲ ಸೌಲಭ್ಯ ಕಲ್ಪಿಸಲು ಪ್ರಾಧಿಕಾರ ಅನುದಾನ ಮೀಸಲಿರಿಸಬೇಕೆಂದು ಸಲಹೆ ನೀಡಿದರು.

ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ: ಈ ಹಿಂದೆ ಮಾಡಿರುವ ನಿಧಿ–1, ನಿಧಿ–2, ನಿಧಿ–3 ಹಾಗೂ ನಿಧಿ–4 ವ್ಯವಸ್ಥೆಯಿಂದಾಗಿ ಅಗತ್ಯ ಬಿದ್ದಾಗ ಅನುದಾನ ಬಳಕೆ ಮಾಡಲು ಅವಕಾಶವಿಲ್ಲದಿರುವುದರಿಂದ ಅಭಿವೃದ್ಧಿಗೆ ತೊಂದರೆಯಾಗುವುದಷ್ಟೇ ಅಲ್ಲದೆ, ಮುಡಾ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಈ ಪದ್ಧತಿ ರದ್ದುಗೊಳಿಸಿ ಎಂದು ಶಾಸಕ ಎಲ್. ನಾಗೇಂದ್ರ ಒತ್ತಾಯಿಸಿದರು. ವಸತಿ ಬಡಾವಣೆಗಳಿಗೆ ಗಮನಹರಿಸಿ ಖಾಸಗಿಯವರಿಗೆ ಪ್ಲಾನ್ ಅನುಮೋದನೆ ಮಾಡಿ ಬಡಾವಣೆ ನಿರ್ಮಿಸಲು ಅನುಕೂಲ ಮಾಡುವುದಷ್ಟೇ ಪ್ರಾಧಿಕಾರದ ಕೆಲಸವಲ್ಲ. ರಿಂಗ್ ರೋಡ್ ರೈಲ್ವೆ ಕೆಳಸೇತುವೆ ಅಗಲೀಕರಣಗೊಳಿಸಬೇಕಿದೆ. ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನ, ಯುದ್ಧ ಸ್ಮಾರಕ ಸೌಂದರ್ಯೀಕರಣಕ್ಕೆ ಮತ್ತಷ್ಟು ಅನುದಾನ ಮೀಸಲಿರಿಸಿ ದೇವರಾಜ ಅರಸು ರಸ್ತೆ ಸೌಂದರ್ಯೀಕರಣ, ಸ್ಮಶಾನಗಳ ಅಭಿವೃದ್ಧಿ, ಕ್ರೀಡಾ ಮತ್ತು ವಾಣಿಜ್ಯ ಸಂಕೀರ್ಣಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ಮೀಸಲಿಡಿ ಎಂದು ಸಲಹೆ ನೀಡಿದರು.

ನಂಜನಗೂಡಿಗೂ ಆದ್ಯತೆ ನೀಡಿ: ಮೈಸೂರಿನಂತೆ ನಂಜನಗೂಡು ಸಹ ಪ್ರವಾಸಿ ಕೇಂದ್ರವಾಗಿರುವುದರಿಂದ ಅಲ್ಲಿನ ಬೀದಿ ದೀಪಗಳಿಗೂ ಎಲ್‌ಇಡಿ ಬಲ್ಬ್ ಅಳವಡಿಸಿ, ಪಟ್ಟಣದ ಸೌಂದರ್ಯಕ್ಕೆ ಆದ್ಯತೆ ನೀಡಿ ಎಂದು ಶಾಸಕ ಬಿ. ಹರ್ಷವರ್ಧನ್ ಒತ್ತಾಯಿಸಿದರು.

ಶಾಸಕರ ನಿಧಿಯಿಂದ ಹಣ: ಈ ಭಾಗದ ಎಲ್ಲಾ ಶಾಸಕರ ಅನುದಾನದಲ್ಲಿ ಒಂದಿಷ್ಟು ಹಣವನ್ನು ಮುಡಾ ಅಭಿವೃದ್ಧಿ ಯೋಜನೆಗಳಿಗೆ ಸಂಗ್ರಹಿಸುವುದು ಒಳ್ಳೆಯದು ಎಂದ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರು, ಮೈಸೂರು ನಗರದ ಅಭಿವೃದ್ಧಿ ಮತ್ತು ಸೌಂದರ್ಯಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು. ಎಂಜಿ ರಸ್ತೆ ತರಕಾರಿ ಮಾರುಕಟ್ಟೆಯನ್ನು ಬೇರೆಡೆಗೆ ಸ್ಥಳಾಂತರಿಸಿ ರೈತರು, ಗ್ರಾಹಕರು ಹಾಗೂ ವಾಹನ ಸವಾರರಿಗೆ ಅನುಕೂಲ ಕಲ್ಪಿಸಿ ಮುಡಾದಿಂದ ಹಲವೆಡೆ ನಿರ್ಮಿಸಿರುವ ತರಕಾರಿ ಮಾರುಕಟ್ಟೆ (ರೈತ ಸಂತೆ)ಗಳಲ್ಲಿ ವ್ಯಾಪಾರ ವಹಿವಾಟು ನಡೆಸಲು ವ್ಯವಸ್ಥೆ ಮಾಡಿ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ತಿಳಿಸಿದರು. ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಡಾ. ತಿಮ್ಮಯ್ಯ, ಮುಡಾ ಸದಸ್ಯರಾದ ಎಸ್‌ಬಿಎಂ ಮಂಜು, ಎಸ್. ಲಕ್ಷ್ಮೀದೇವಿ, ಕೆ. ಮಾದೇಶ, ಜೆ. ಲಿಂಗಯ್ಯ, ಎಂ.ಎನ್. ನವೀನ ಕುಮಾರ್ ಸಹ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಒಂದನೇ ಪುಟದಿಂದ

ಉಳಿತಾಯ ಬಜೆಟ್ ಮಂಡನೆ

ಖಾಸಗಿ ಬಡಾವಣೆಗಳಲ್ಲಿನ ನಾಗರಿಕ ಸೌಕರ್ಯ ನಿವೇಶನಗಳ ಹಂಚಿಕೆ ಹಾಗೂ ವಾಣಿಜ್ಯ ಸಂಕೀರ್ಣಗಳ ಬಾಡಿಗೆ ಮತ್ತು ಗುತ್ತಿಗೆಯಿಂದ ಸಂದಾಯವಾಗುವ ಸಂಪನ್ಮೂಲಗಳಿಂದ ಪ್ರಸಕ್ತ ಆರ್ಥಿಕ ವರ್ಷ ಒಟ್ಟು 676.88 ಲಕ್ಷ ರೂ. ಹಣ ಕ್ರೋಢೀಕರಣವಾಗಬಹುದೆಂದು ನಿರೀಕ್ಷಿಸಲಾಗಿದೆ.

ವೆಚ್ಚಗಳ ಬಾಬ್ತು: ಪ್ರಾಧಿಕಾರ ರಚಿಸಿರುವ ವಸತಿ ಬಡಾವಣೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು 45,315.05 ಲಕ್ಷ ರೂ., ಆಡಳಿತ ಸಾದಿಲ್ವಾರು, ಅಧಿಕಾರಿಗಳು, ಸಿಬ್ಬಂದಿ ಸಂಬಳ, ಕಾನೂನು ವೆಚ್ಚ, ಹೊಸ ವಾಹನ ಖರೀದಿ, ಲೆಕ್ಕ ಪರಿಶೋಧನಾ ಶುಲ್ಕ, ಮುಡಾ ಆಸ್ತಿ ಸಂರಕ್ಷಣೆಗಾಗಿ 10,403.35 ಲಕ್ಷ ರೂ., ಕೆರೆಗಳ ಅಭಿವೃದ್ಧಿಗೆ 2909.40 ಲಕ್ಷ ರೂ., ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ 50 ಲಕ್ಷ ರೂ. ಹೊಸ ಬಡಾವಣೆಗಳ ನಿರ್ಮಾಣ, ಭೂಸ್ವಾಧೀನ ವೆಚ್ಚ, ಉದ್ಯಾನವನಗಳ ಅಭಿವೃದ್ಧಿ, ಕುಡಿಯುವ ನೀರಿನ ಸರಬರಾಜು ಯೋಜನೆ, ಗುಂಪು ವಸತಿ ಮನೆಗಳ ನಿರ್ಮಾಣಗಳಿಗಾಗಿ 36,055.62 ಲಕ್ಷ ರೂ. ಹಾಗೂ ಅಭಿವೃದ್ಧಿ ನಿಧಿ–2 ಅಡಿಯಲ್ಲಿ 350 ಲಕ್ಷ ರೂ. ವೆಚ್ಚ ಮಾಡಲು ಅಂದಾಜಿಸಲಾಗಿದೆ.

ಒಟ್ಟಾರೆ 2023–24ನೇ ಸಾಲಿನಲ್ಲಿ 50,226.88 ಲಕ್ಷ ರೂ. ಸಂಪನ್ಮೂಲ ಕ್ರೋಢೀಕರಣವಾಗುತ್ತದೆ ಎಂದು ನಿರೀಕ್ಷಿಸಿ ಅಭಿವೃದ್ಧಿ ಯೋಜನೆಗಳಿಗೆ 49,768.37 ಲಕ್ಷ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿದ್ದು, ಈ ಭಾರಿ 458.51 ಲಕ್ಷ ರೂ. ಉಳಿತಾಯ ಬಜೆಟ್ ಅನ್ನು ಮುಡಾ ಮಂಡಿಸಿದೆ. ಪ್ರಾಧಿಕಾರದ ಸದಸ್ಯರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಬಿ.ಹರ್ಷವರ್ಧನ್, ಮರಿತಿಬ್ಬೇಗೌಡ, ಎ.ಹೆಚ್. ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಎಸ್.ಬಿ.ಎಂ. ಮಂಜು, ಜಿ.ಲಿಂಗಯ್ಯ, ಕೆ.ಮಾದೇಶ, ಎಸ್. ಲಕ್ಷ್ಮೀದೇವಿ, ಎಂ.ಎನ್. ನವೀನ್‌ಕುಮಾರ್ ಸಭೆಯಲ್ಲಿ ಹಾಜರಿದ್ದು, ಆಯವ್ಯಯಕ್ಕೆ ಅನುಮೋದನೆ ನೀಡಿದರು.

ಮುಡಾ ನಗರ ಯೋಜನಾ ಸದಸ್ಯ ಆರ್. ಶೇಷ, ಸೂಪರಿಂಟೆಂಡಿಂಗ್ ಇಂಜಿನಿಯರ್ ಎನ್.ಬಿ. ಚೆನ್ನಕೇಶವ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಸೀಫ್ ಇಕ್ಬಾಲ್ ಖಲೀಲ್ ಸೇರಿದಂತೆ ಇತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಅನುದಾನ

ಅದಕ್ಕಾಗಿ 200 ಲಕ್ಷ ರೂ.ಗಳನ್ನು ಮುಡಾ ಬಜೆಟ್‌ನಲ್ಲಿ ಮೀಸಲಿರಿಸಿದೆ. ಅದೇ ರೀತಿ ಜೆ.ಪಿ. ನಗರ 3ನೇ ಹಂತದಿಂದ ಅಕ್ಕಮಹಾದೇವಿ ರಸ್ತೆ ಮೂಲಕ ಜೆ.ಪಿ. ನಗರ 3ನೇ ಹಂತದ 'ಬಿ' ವಲಯಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಕೆಳಸೇತುವೆ ನಿರ್ಮಿಸಲುದ್ದೇಶಿಸಿ ಯೋಜನೆಗೆ ಡಿಪಿಆರ್ ತಯಾರಿಸಲಾಗಿದೆ.

ಯುದ್ಧ ಸ್ಮಾರಕ ಸೌಂದರೀಕರಣ: ಮೈಸೂರಿನ ಡಿಸಿ ಕಚೇರಿ ಬಳಿ ನಿರ್ಮಿಸುತ್ತಿರುವ ಯುದ್ಧ ಸ್ಮಾರಕದ ಸೌಂದರ್ಯ ವೃದ್ಧಿ ವೃದ್ಧಿಸುವ ಯೋಜನೆಗೆ ಮುಡಾದಿಂದ 150 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ವಾಣಿಜ್ಯ ಸಂಕೀರ್ಣ : ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಡಾವಣೆಗಳಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿ ಆದಾಯ ಕ್ರೋಢೀಕರಿಸಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ 1,000 ಲಕ್ಷ ರೂ.ಗಳನ್ನು ಮೀಸಲಿರಿಸಲಾಗಿದೆ. ಅದೇ ರೀತಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಅಭಿವೃದ್ಧಿ ಪಡಿಸಲು ಮುಂದಾಗಿದ್ದು, ಈ ಯೋಜನೆಗೆ 1,000 ಲಕ್ಷ ರೂ. ಒದಗಿಸಲಾಗಿದೆ. 500 ಲಕ್ಷ ರೂ.ಗಳನ್ನು ಉದ್ಯಾನವನಗಳ ಅಭಿವೃದ್ಧಿಗೆ ಉದ್ದೇಶಿಸಲಾಗಿದೆ. ಪ್ರಾಧಿಕಾರದ ವ್ಯಾಪ್ತಿಯ ಬಡಾವಣೆಗಳಲ್ಲಿ ಮೂಲಸೌಲಭ್ಯ ಒದಗಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಎಕ್ಸ್‌ಪ್ರೆಸ್‌ವೇನಲ್ಲಿ ಟೋಲ್ ಸಂಗ್ರಹ

ವಿವಿಧ ಬಗೆಯ ವಾಹನಗಳ ಟೋಲ್ ದರ

ಕ್ರಮ ಸಂಖ್ಯೆ	ವರ್ಗ	ಒಂದು ಬಾರಿಗೆ ಪ್ರಯಾಣಕ್ಕೆ ದರ (ರೂ.ಗಳಲ್ಲಿ)	ಹಿಂತಿರುಗುವ ಪ್ರಯಾಣಕ್ಕೆ ದರ ಒಂದು ದಿನಕ್ಕೆ (ರೂ.ಗಳಲ್ಲಿ)	ಟ್ರಾಫಿಕ್ ದರ (ಟೋಲ್ ಇರುವ ಜಿಲ್ಲೆಯಲ್ಲಿ ನೋಂದಣಿಯಾದ ಸ್ಥಳೀಯ ವಾಣಿಜ್ಯ ವಾಹನಗಳು)	50 ಬಾರಿ ಒಂದು ಕಡೆ ಪ್ರಯಾಣಕ್ಕೆ ದರ ವಾಹನಗಳ ತಿಂಗಳ ಪಾಸ್ ದರ
1	ಕಾರ್/ಜೀಪ್/ವ್ಯಾನ್	135	205	70	4,525
2	ಲಘು ವಾಣಿಜ್ಯ ವಾಹನಗಳು, ಲಘು ಗೂಡ್ಸ್ ವಾಹನಗಳು ಅಥವಾ ಮಿನಿ ಬಸ್	220	330	110	7,315
3	ಬಸ್ ಅಥವಾ ಟ್ರಕ್ (2 ಆಕ್ಸೆಲ್)	460	690	230	15,325
4	3 ಆಕ್ಸೆಲ್ ವಾಣಿಜ್ಯ ವಾಹನಗಳು	500	750	250	16,715
5	ಬೃಹತ್ ಕನ್‌ಸ್ಟ್ರಕ್ಷನ್ ಮೆಷಿನ್‌ಗಳು/ಅರ್ಥ್ ಮೂವಿಂಗ್ ಎಕ್ವಿಪ್‌ಮೆಂಟ್/ಎಂಎವಿ (4–6 ಆಕ್ಸೆಲ್)	720	1,080	360	24,030
6	ಓವರ್‌ಸೈಜ್ಡ್ ವೆಹಿಕಲ್ಸ್ (7 ಅಥವಾ ಅಧಿಕ ಆಕ್ಸೆಲ್)	880	1,315	440	29,255

ಮುಂದುವರೆಸಲಾಗುತ್ತದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ನಿಡಘಟ್ಟದವರೆಗೆ ಟೋಲ್ ಸಂಗ್ರಹ: ಕಳೆದ ಮಾರ್ಚ್ 1 ರಂದು ಟೋಲ್ ಸಂಗ್ರಹಕ್ಕೆ ಹೆದ್ದಾರಿ ಪ್ರಾಧಿಕಾರ ಮುಂದಾಗಿತ್ತು. ಆದರೆ, ಸಾರ್ವಜನಿಕರು ಹಾಗೂ ವಾಹನ ಸವಾರರಿಂದ ಸಾಕಷ್ಟು ವಿರೋಧ ಉಂಟಾಗಿದ್ದ ಹಿನ್ನೆಲೆಯಲ್ಲಿ ಟೋಲ್ ಸಂಗ್ರಹಕ್ಕೆ ಬ್ರೇಕ್ ಹಾಕಲಾಗಿತ್ತು. ಈಗ ಮಾರ್ಚ್ 14ರಿಂದ ಟೋಲ್ ಸಂಗ್ರಹಿಸಲಾಗುವುದು ಎಂದು ಪ್ರಕಟಣೆ ನೀಡಿದ್ದಾರೆ. ಬೆಂಗಳೂರಿನಿಂದ–ನಿಡಘಟ್ಟದವರೆಗೂ ಒಟ್ಟು 56 ಕಿಮೀ ರಸ್ತೆಗೆ ನಾಳೆಯಿಂದ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಸಾರ್ವಜನಿಕರ ವಿರೋಧದ ನಡುವೆಯೂ ನಾಳೆ ಟೋಲ್ ಸಂಗ್ರಹ ಮಾಡಲು ಹೆದ್ದಾರಿ ಪ್ರಾಧಿಕಾರ ಆರಂಭಿಸಿದೆ. ರಸ್ತೆಗಳ ಬದಿಯಲ್ಲಿ ಮೂಲಸೌಕರ್ಯಗಳ ವ್ಯವಸ್ಥೆ, ಸರ್ವಿಸ್ ರಸ್ತೆ ಸರಿಪಡಿಸಿ ಟೋಲ್ ಸಂಗ್ರಹ ಮಾಡುವಂತೆ ಕಾಂಗ್ರೆಸ್ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಆದರೆ, ಈ ಎಲ್ಲ ಗೊಂದಲಗಳ ನಡುವೆಯೂ ನಾಳೆ ಬೆಳಿಗ್ಗೆ 8 ಘಂಟೆಯಿಂದ ಟೋಲ್ ಸಂಗ್ರಹ ಮಾಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ.

ಎಕ್ಸ್‌ಪ್ರೆಸ್‌ವೇಯಿಂದ ಟ್ರಾಫಿಕ್ ಜಾಮ್ ಜಾಸ್ತಿ

ಇಲ್ಲಿ ದಟ್ಟಣೆಯ ಮೂಲ ಕಾರಣವಾಗಿದೆ. ಎಕ್ಸ್‌ಪ್ರೆಸ್ ವೇ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸುವ ಬದಲು, ಇನ್ನೂ ಪರಿಸ್ಥಿತಿಯನ್ನು ಹದಗೆಡಿಸುವ ಸಾಧ್ಯತೆ ಇದೆ. ಹೆದ್ದಾರಿಯಲ್ಲಿ ಉಳಿತಾಯವಾದ ಸಮಯವು ಈ ಜಾಗದಲ್ಲಿ ಟ್ರಾಫಿಕ್ ದಟ್ಟಣೆ ಉಂಟಾಗಿ ವ್ಯಯವಾಗುತ್ತಿದೆ. ಅಂತೆಯೇ ಕಾಲಾನಂತರದಲ್ಲಿ ಅದು ಇನ್ನೂ ಕೆಟ್ಟದಾಗುತ್ತದೆ ಎಂದು ಡಾ ವರ್ಮಾ ಎಚ್ಚರಿಸಿದ್ದಾರೆ.

ಇನ್ನು ಈ ಟ್ರಾಫಿಕ್ ಸಮಸ್ಯೆಗೆ ಎರಡೂ ಬದಿಯ ಅರ್ಧದಷ್ಟು ರಸ್ತೆಯಲ್ಲಿ 'ಬಸ್ ರಾಪಿಡ್ ಟ್ರಾನ್ಸಿಟ್ ಸಿಸ್ಟಮ್' (ಬಿಆರ್‌ಟಿಎಸ್) ಇರಬೇಕು ಎಂದು ವರ್ಮಾ ಸಲಹೆ ನೀಡಿದರು. ಮಣಿಪಾಲ ಆಸ್ಪತ್ರೆ ಜಂಕ್ಷನ್‌ನಲ್ಲಿ ಮೈಸೂರು ನಗರ ಪ್ರವೇಶಿಸುವಾಗ ವಾಹನಗಳ ದಟ್ಟಣೆ ಹೆಚ್ಚಿದ್ದು, ಮೇಲ್ಸೇತುವೆ ನಿರ್ಮಾಣಕ್ಕೆ ಬೇಡಿಕೆ ಬಂದಿದೆ ಎಂದು ಡಾ ವರ್ಮಾ ಹೇಳಿದರು. ಅದನ್ನು ಪರಿಹರಿಸಲು, ಮತ್ತೊಂದು ಮೇಲ್ಸೇತುವೆ ನಿರ್ಮಿಸಲಾಗುವುದು. ಫ್ಲೈಓವರ್‌ನಿಂದ ಬೇರೆ ಸ್ಥಳಕ್ಕೆ ಸಂಚಾರ ಸ್ಥಳಾಂತರಗೊಂಡ ನಂತರ ಮತ್ತೊಂದು ಮೇಲ್ಸೇತುವೆಯನ್ನು ಪ್ರಸ್ತಾಪಿಸಿ ನಿರ್ಮಿಸಲಾಗುವುದು ಎಂದು ಡಾ ವರ್ಮಾ ಹೇಳಿದರು ಮತ್ತು ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಎಷ್ಟು ಮೇಲ್ಸೇತುವೆಗಳನ್ನು ನಿರ್ಮಿಸಲು ಉದ್ದೇಶಿಸಿದೆ ಎಂದು ಪ್ರಶ್ನಿಸಿದರು.

ಎಕ್ಸ್‌ಪ್ರೆಸ್‌ವೇ ಪ್ರಯಾಣದ ಸಮಯವನ್ನು ಕಡಿಮೆ ಮಾಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಆದಾಗ್ಯೂ, ಇದು ದೀರ್ಘಕಾಲೀನ ಪರಿಹಾರವಾಗುವುದಿಲ್ಲ. ಉದಾಹರಣೆಗೆ, ವಿಮಾನ ನಿಲ್ದಾಣದ ಮೇಲ್ಸೇತುವೆ ನಿರ್ಮಾಣದ ಮೊದಲು ಹೆಬ್ಬಾಳದ ಮೇಲ್ಸೇತುವೆಯು ಚಾಕ್–ಎ–ಬ್ಲಾಕ್ ಆಗಿರಲಿಲ್ಲ. ಆದರೆ ಈಗ ವಾಹನಗಳ ಓಡಾಟದ ಪ್ರಮಾಣ ಒಂದಾಗಿ ಮಾರ್ಪಟ್ಟಿದೆ ಎಂದರು. ಭೂಮಿಯನ್ನು ಖರೀದಿಸುವಾಗ, ಸರ್ಕಾರವು ಸ್ವಲ್ಪ ಹೆಚ್ಚು ವಿಸ್ತರಿಸಬಹುದು ಮತ್ತು ಹೈ–ಸ್ಪೀಡ್ ರೈಲಿಗೆ (ಎಚ್‌ಎಸ್‌ಆರ್) ಹಂಚಿಕೆ ಮಾಡಬಹುದಿತ್ತು ಮತ್ತು ವಂದೇ ಭಾರತ್‌ನಂತಹ ಉನ್ನತ–ಮಟ್ಟದ ರೈಲುಗಳನ್ನು ಓಡಿಸಬಹುದಿತ್ತು ಎಂದು ಡಾ ವರ್ಮಾ ವಿವರಿಸಿದರು. ದೀರ್ಘಾವಧಿಯ ಪರಿಹಾರವಾಗಿ, ಆದರ್ಶಪ್ರಾಯವಾಗಿ, ರಸ್ತೆಯ ಪ್ರತಿ ಬದಿಯಲ್ಲಿ ಬಿಆರ್‌ಟಿಎಸ್ ಇರಬೇಕು ಎಂದು ಅವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಿಜಿಹೆಚ್‌ಎಸ್ ಘಟಕ ಉದ್ಘಾಟನೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಿಜಿಹೆಚ್‌ಎಸ್ ಘಟಕವನ್ನು ನಿವೃತ್ತ ಐಎಎಸ್ ಅಧಿಕಾರಿ ಎಸ್.ಪಿ. ಷಡಕ್ಷರಿಸ್ವಾಮಿ ಇತರ ಗಣ್ಯರು ಉದ್ಘಾಟಿಸಿದರು.

ಮೈಸೂರು, ಮಾ.13– ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಆರೋಗ್ಯ ಯೋಜನೆ(ಸಿಜಿಹೆಚ್‌ಎಸ್) ಅನುಷ್ಠಾನಗೊಂಡಿದ್ದು, ಈ ಸೇವೆಯನ್ನು ಸದ್ಬಳಕೆ ಮಾಡಿಕೊಳ್ಳುವಂತೆ ನಿವೃತ್ತ ಐಎಎಸ್ ಅಧಿಕಾರಿ ಎಸ್.ಪಿ. ಷಡಕ್ಷರಿಸ್ವಾಮಿ ಸಲಹೆ ನೀಡಿದರು. ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಿಜಿಹೆಚ್‌ಎಸ್ ಘಟಕವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ ಮೂಲಕ ಕೇಂದ್ರ ಸರ್ಕಾರದ ನೌಕರರು, ನಿವೃತ್ತ ನೌಕರರು ಹಾಗೂ ಅವರ ಅವಲಂಭಿತರು ವೈದ್ಯಕೀಯ ಸೇವೆ ಪಡೆಯಬಹುದಾಗಿದೆ. ನಗದು ರಹಿತ ಚಿಕಿತ್ಸೆಗಾಗಿ ಬೆಂಗಳೂರು ಆಸ್ಪತ್ರೆಗಳನ್ನು ಮಾತ್ರ ಗುರುತಿಸಲಾಗುತ್ತಿತ್ತು. ಸದ್ಯ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕ್ಲಿನಿಕ್ ಹಾಗೂ ರೆಫರಲ್ ಕೇಂದ್ರ ಆರಂಭಿಸಲಾಗಿದೆ ಎಂದರು. ಬೆಂಗಳೂರನ್ನು ಹೊರತುಪಡಿಸಿ ಈ ಭಾಗದ ಯಾವುದೇ ಆಸ್ಪತ್ರೆಗಳಲ್ಲಿ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ ಅನುಷ್ಠಾನಗೊಂಡಿರಲಿಲ್ಲ. ಪರಿಣಾಮ ಚಿಕಿತ್ಸೆಗೆ ಬೆಂಗಳೂರಿಗೆ ತೆರಳುವುದು ಅನಿವಾರ್ಯವಾಗಿತ್ತು. ಇದೀಗ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸೇವೆ ಆರಂಭವಾಗಿದ್ದು, ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಪಿಎಫ್ ಪ್ರಾದೇಶಿಕ ಆಯುಕ್ತ ವಿನಿತ್ ಕುಮಾರ್ ಮಾತನಾಡಿ, ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮಾದರಿಯಾಗಿದೆ. ಸಿಜಿಹೆಚ್‌ಎಸ್ ಆರೋಗ್ಯ ಯೋಜನೆ ಮುಖಾಂತರ ಕೇಂದ್ರ ಸರ್ಕಾರಿ ನೌಕರರು, ನಿವೃತ್ತ ನೌಕರರು ಮತ್ತು ಅವರ ಅವಲಂಭಿತರು ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಸಿ.ಪಿ.ಮಧು ಮಾತನಾಡಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯ ಫಲಾನುಭವಿಗಳಿಗೆ ಚಿಕಿತ್ಸೆ ನೀಡುವ ಮೈಸೂರಿನ ಏಕೈಕ ಆಸ್ಪತ್ರೆ ಇದಾಗಿದೆ. ಮೊದಲು ಸಿಜಿಎಚ್‌ಎಸ್‌ನ ಕ್ಷೇಮ ಕೇಂದ್ರವನ್ನು ಸಂಪರ್ಕಿಸಿ ರೆಫರೆನ್ಸ್ ಸ್ಲಿಪ್ ತಂದ ನಂತರ ರೆಫರಲ್ ಲೆಟರ್ ಮೂಲಕ ಉಲ್ಲೇಖಿಸಲಾದ ಪಿಂಚಣಿದಾರರಿಗೆ ಆಸ್ಪತ್ರೆಯ ನಗದು ರಹಿತ ಸೇವೆಯನ್ನು ಒದಗಿಸಲಾಗುತ್ತದೆ. ಮೈಸೂರು ವ್ಯಾಪ್ತಿಯಲ್ಲಿ ಸುಮಾರು 20 ಸಾವಿರ ಪಿಂಚಣಿದಾರರು ಮತ್ತು 12 ಸಾವಿರ ಸೇವಾನಿರತ ಉದ್ಯೋಗಿಗಳು ಈ ಯೋಜನೆ ವ್ಯಾಪ್ತಿಗೆ ಒಳಪಡುತ್ತಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರಿ ನಿವೃತ್ತ ನೌಕರರ ಸಂಘದ ಕಾರ್ಯದರ್ಶಿ ಪಿ.ಎಂ.ಪರಮೇಶ್ವರಯ್ಯ, ಜೆಎಸ್‌ಎಸ್ ಆಸ್ಪತ್ರೆಯ ಡಾ.ಎಚ್.ಬಸವನಗೌಡಪ್ಪ, ಆರ್.ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ, ನಾಡಿದ್ದು ಕೆಲವೆಡೆ ನೀರಿಲ್ಲ

ಮೈಸೂರು, ಮಾ.13(ಎಸ್‌ಪಿಎನ್)–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮತ್ತು ರಮ್ಮನಹಳ್ಳಿ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ದೇವನೂರು ಸಬ್‌ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್ ಇಲಾಖೆ ವತಿಯಿಂದ ತುರ್ತು ಕಾಮಗಾರಿಯನ್ನು ಹಮ್ಮಿಕೊಂಡಿದ್ದು, ಮಾ.15ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿಲ್ಲದ ಕಾರಣ ಮಾ.15 ಮತ್ತು ಮಾ.16ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಾರ್ಡ್ ನಂ.9ರಿಂದ 16, 28ರಿಂದ 39, 52, 53 ವಾರ್ಡ್‌ನ ಕೆಸರೆ, ರಾಜೇಂದ್ರ ನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಹೊಂದಿಕೊಂಡಿರುವ ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೈಸೂರು ನಗರ ಪಾಲಿಕೆಯ ನೀರು ಸರಬರಾಜು ಮತ್ತು ಒಳಚರಂಡಿ ಕೇಂದ್ರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಬಲ್ ಇಂಜಿನ್ ಸರ್ಕಾರದಿಂದ ರಾಜ್ಯದ ಅಭ್ಯುದಯಕ್ಕೆ ಸಂಕಲ್ಪ

ಯುವಮೋರ್ಚಾ ರಾಜ್ಯಾಧ್ಯಕ್ಷ ಡಾ. ಸಂದೀಪ್



ಮಡಿಕೇರಿ, ಮಾ.13– ಬಿಜೆಪಿಯ ಡಬಲ್ ಇಂಜಿನ್ ಸರ್ಕಾರ ಕೇಂದ್ರ ರಾಜ್ಯದಲ್ಲಿ ಜನರ ಅಭ್ಯುದಯಕ್ಕೆ ಸಂಕಲ್ಪ ತೊಟ್ಟಿದೆ ಎಂದು ರಾಜ್ಯ ಯುವಮೋರ್ಚಾ ಅಧ್ಯಕ್ಷ ಡಾ.ಸಂದೀಪ್ ಹೇಳಿದರು.

ಸೋಮವಾರಪೇಟೆಯಲ್ಲಿ ಬಿಜೆಪಿ ಯುವಮೋರ್ಚಾ ವತಿಯಿಂದ ನಡೆದ 'ಯುವ ಶಕ್ತಿ ಸಂಗಮ' ಸಮಾವೇಶ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೋವಿಡ್ ಸಂಕಷ್ಟದ ದಿನಗಳಲ್ಲಿ ದೇಶದಲ್ಲಿಯೇ ಅತ್ಯಂತ ಸಕ್ರಿಯವಾಗಿ ಜನರ ನೆರವಿಗೆ ಧಾವಿಸಿದ ಕೀರ್ತಿ ಬಿಜೆಪಿ ಯುವ ಮೋರ್ಚಾದ್ದಾಗಿದೆ ಯುವಕರಲ್ಲಿ ರಾಷ್ಟ್ರನಿರ್ಮಾಣ, ದೇಶ ಭಕ್ತಿಯ ಚಿಂತನೆ ನೀಡುವ ಏಕೈಕ ಪಕ್ಷವಾಗಿ ಬಿಜೆಪಿ ಹೊರಹೊಮ್ಮಿದೆ ಎಂದು ಹೇಳಿದರು.

ಯುವ ಪೀಳಿಗೆಯಲ್ಲಿ ಭಾರತದ ಐಕ್ಯತೆಯ ನಿಟ್ಟಿನಲ್ಲಿ ಬಹಳ ದೊಡ್ಡ ಜವಾಬ್ದಾರಿ ಇದೆ. 9 ವರ್ಷಗಳಿಂದ ದೇಶದ ಪ್ರಗತಿಗೆ ಪ್ರಧಾನಿ ಮೋದಿ ಶ್ರಮಿಸುತ್ತಾ ಬಂದಿದ್ದಾರೆ. ಆರೋಗ್ಯ, ಶಿಕ್ಷಣ, ರಸ್ತೆ, ನೀರು ಸೇರಿದಂತೆ ಮೂಲ ಸೌಲಭ್ಯಗಳಿಗೆ ಬಿಜೆಪಿ ನೀಡಿದಷ್ಟು ಯೋಜನೆ ಬೇರೆ ಯಾವ ಸರ್ಕಾರಗಳೂ ನೀಡಿಲ್ಲ. ಯುವ ಜನಾಂಗಕ್ಕೆ ಉದ್ಯೋಗಾವಕಾಶಗಳಿಗೂ ಸಾಲ ಸೌಲಭ್ಯದ ಮೂಲಕ ಬಿಜೆಪಿ ನೆರವಾಗಿದೆ. ಸಂಪರ್ಕದಲ್ಲಿಯೂ ಬಿಜೆಪಿಯಿಂದ ಎಂದೂ ಕಾಣದ ಪ್ರಗತಿಯಾಗಿದ್ದು, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ಇದಕ್ಕೊಂದು ಉದಾಹರಣೆಯಾಗಿದೆ. ಇದೀಗ ಕೆಲವೇ ತಿಂಗಳಲ್ಲಿ ಮೈಸೂರಿನಿಂದ ಕುಶಾಲನಗರದವರೆಗೂ ಸುಸಜ್ಜಿತ ಹೈವೇ ನಿರ್ಮಾಣವಾಗಲಿದೆ ಎಂದರು.

ಎಲ್ಲಾ ಸಮುದಾಯದವರಿಗೂ ಬಿಜೆಪಿ ನಾನಾ ಯೋಜನೆಗಳ ಮೂಲಕ ನೆರವಾಗಿದೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಸಂದರ್ಭ ಕೂಡ ರೈತರಿಗೆ ನಾನಾ ಯೋಜನೆಗಳ ಮೂಲಕ ನೆರವು ನೀಡಿದ್ದರು. ಬಿಜೆಪಿ ಸರ್ಕಾರದ ಸಾಧನೆಗಳನ್ನು ಯುವಮೋರ್ಚಾದ ಕಾರ್ಯಕರ್ತರು ಮತದಾರರಿಗೆ ಮನವರಿಕೆ ಮಾಡಿಕೊಡಬೇಕೆಂದು ಡಾ.ಸಂದೀಪ್ ಕರೆ ನೀಡಿದರು.

ಮಡಿಕೇರಿ ಕ್ಷೇತ್ರದಲ್ಲಿ ಶಾಸಕ ಅಪ್ಪಚ್ಚು ರಂಜನ್ ಏನು ಕೆಲಸ ಮಾಡಿದ್ದಾರೆ ಎಂದು ಕೇಳುವವರಿಗೆ ಪ್ರಗತಿ ಯೋಜನೆಗಳು ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಶಾಸಕ ರಂಜನ್ ಪ್ರಶ್ನಿಸಿದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ಎಲ್ಲಾ ಸಮುದಾಯದ ಅಭಿವೃದ್ಧಿಗೆ ವಿವಿಧ ಯೋಜನೆ ಜಾರಿಗೊಳಿಸಿದೆ. ಯಾವುದೇ ಸರ್ಕಾರವೂ ನೀಡದಂತಹ ಕೊಡುಗೆಗಳನ್ನು ಬಿಜೆಪಿ ನೀಡಿದೆ. ಕಾಂಗ್ರೆಸ್ ಸರ್ಕಾರ ಕೇವಲ ವೋಟ್ ಬ್ಯಾಂಕ್‌ಗಾಗಿ ಮಾತ್ರ ಹಿಂದುಳಿದ ಸಮುದಾಯಗಳನ್ನು ಬಳಕೆ ಮಾಡುತ್ತಿತ್ತು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಇಂತಹ ಸಮುದಾಯಗಳ ಸಮಸ್ಯೆ ಗಮನಿಸಿ ಸಂಕಷ್ಟ ಪರಿಹಾರಕ್ಕೆ ಸೂಕ್ತ ರೀತಿಯಲ್ಲಿ ಮುಂದಾಗಿದೆ ಎಂದರು.

ಚುನಾವಣೆಗೆ ದಿನಗಳು ಹತ್ತಿರದಲ್ಲಿದೆ. ಬಿಜೆಪಿ ಸಾಧನೆಗಳನ್ನು ಮನೆ ಮನೆಗೆ ತಲುಪಿಸಿ ಎಂದು ಕಾರ್ಯಕರ್ತರಿಗೆ ಶಾಸಕ ಅಪ್ಪಚ್ಚು ರಂಜನ್ ಕರೆ ನೀಡಿದರಲ್ಲದೇ, ಹಳೇ ಬೇರಿದ್ದರೆ ಮಾತ್ರ ಹೊಸ ಚಿಗುರು ಎಂಬಂತೆ ಯುವಮೋರ್ಚಾವು ಹಿರಿಯರ ಬೆಂಬಲದೊಂದಿಗೆ ಜಿಲ್ಲೆಯಲ್ಲಿ ಪ್ರಬಲವಾಗಿದೆ ಎಂದು ಹೇಳಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಸೋಮವಾರಪೇಟೆ ಕಕ್ಕೆಹೊಳೆಯಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೂರಾರು ಕಾರ್ಯಕರ್ತರು ಬೈಕ್ ಜಾಥಾ ನಡೆಸಿದರು. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಪಕ್ಷ ಪ್ರಮುಖರಿಗೆ ಜೈಕಾರದ ಘೋಷಣೆಗಳು ಮೊಳಗಿದವು.

ವೇದಿಕೆಯಲ್ಲಿ ಶಾಸಕ ಕೆ.ಜಿ.ಬೋಪಯ್ಯ, ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ದರ್ಶನ್ ಜೋಯಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ಎಂ.ಎಲ್.ಸಿ ಸುಜಾ ಕುಶಾಲಪ್ಪ ಮಾಜಿ ಎಂ.ಎಲ್.ಸಿ. ಎಸ್.ಜಿ. ಮೇದಪ್ಪ, ಪ್ರಮುಖರಾದ ವಿ.ಕೆ.ಲೋಕೇಶ್, ಭಾರತೀಶ್, ರವಿಕಾಳಪ್ಪ ಸೇರಿದಂತೆ ಬಿಜೆಪಿ ಮತ್ತು ಯುವ ಮೋರ್ಚಾದ ಪ್ರಮುಖರು ಹಾಜರಿದ್ದರು.

ಕೊಡಗಲ್ಲಿ 25 ವರ್ಷ ಬಿಜೆಪಿಯನ್ನು ಸಹಿಸಿಕೊಂಡದ್ದು ಸಾಕು, ಕಾಂಗ್ರೆಸ್ ಗೆಲ್ಲಿಸಿ

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ



ಮಡಿಕೇರಿ, ಮಾ.13– ಕೊಡಗಿನಲ್ಲಿ ಕಳೆದ 25 ವರ್ಷಗಳಿಂದ ಬಿಜೆಪಿಯನ್ನು ಸಹಿಸಿದ್ದು ಸಾಕು, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಚಂದ್ರಮೌಳಿ ಕರೆ ನೀಡಿದ್ದಾರೆ.

ಮಡಿಕೇರಿ ನಗರದ ವಿವಿಧೆಡೆ ವಿವಿಧ ಭರವಸೆಗಳ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಣೆಯ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿನೂತನ ಯೋಜನೆಗಳ ಮೂಲಕ ಬಡವರ ಹಾಗೂ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ ಎಂದರು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ 'ಗೃಹಜ್ಯೋತಿ' ಯೋಜನೆಯಡಿ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಪೂರೈಕೆ, ಪ್ರತಿ ಮನೆಯೊಡತಿಗೆ 2 ಸಾವಿರ ರೂ. ಪ್ರೋತ್ಸಾಹ ಧನ ನೀಡಲು 'ಗೃಹಲಕ್ಷ್ಮಿ' ಯೋಜನೆ ಜಾರಿ ಮತ್ತು ಅನ್ನ ಭಾಗ್ಯ ಯೋಜನೆ ಮೂಲಕ ಬಿಪಿಎಲ್ ಕಾರ್ಡ್‌ದಾರರಿಗೆ 10 ಕೆಜಿ.ಅಕ್ಕಿ ಉಚಿತವಾಗಿ ನೀಡುವ ಯೋಜನೆ ರಾಜ್ಯದಲ್ಲಿ ಜಾರಿಗೆ ಬರಲಿದೆ. ಈ ಯೋಜನೆ ದೇಶದಲ್ಲೇ ಮೊದಲು ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ 600 ಭರವಸೆಗಳಲ್ಲಿ 589 ಅನ್ನು ಈಡೇರಿಸಿದೆ. ಈ ಬಾರಿಯೂ ಕಾಂಗ್ರೆಸ್‌ಗೆ ಅವಕಾಶ ನೀಡಿದರೆ ಎಲ್ಲಾ ಭರವಸೆಗಳನ್ನು ಪೂರೈಸಲಾಗುವುದು. ಕೊಡಗಿನ ಜನ ಕಾಂಗ್ರೆಸ್ ಪರ ಒಲವು ತೋರುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ಗೆಲುವು ಖಚಿತವಾಗಿದೆ. ಗ್ಯಾರಂಟಿ ಕಾರ್ಡ್ ಭರವಸೆ ಹೆಚ್ಚು ಫಲ ನೀಡಲಿದೆ. ಕಾಂಗ್ರೆಸ್ ಪಕ್ಷದಲ್ಲಿ ನಾಯಕರು, ಕಾರ್ಯಕರ್ತರು ಎನ್ನುವ ಭೇದಭಾವವಿಲ್ಲ. ಪ್ರತಿಯೊಬ್ಬರು ಕಾರ್ಯಕರ್ತರಂತೆ ದುಡಿಯುತ್ತಿದ್ದಾರೆ. ಬಹುಮತದೊಂದಿಗೆ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಚಂದ್ರಮೌಳಿ ವಿಶ್ವಾಸ ವ್ಯಕ್ತಪಡಿಸಿದರು.

ಗ್ಯಾರಂಟಿ ಕಾರ್ಡ್ ಅಭಿಯಾನದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ನಗರಾಧ್ಯಕ್ಷ ಬಿ.ವೈ.ರಾಜೇಶ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ಮಾಜಿ ಅಧ್ಯಕ್ಷ ಕೆ.ಯು.ಅಬ್ದುಲ್ ರಜಾಕ್ ಹಾಗೂ ವಕ್ತಾರ ತೆನ್ನಿರ ಮೈನಾ ಮಾತನಾಡಿ, ಮನೆ ಮನೆಗಳಿಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ನೀಡಲಾಗುತ್ತಿದ್ದು, ಜನರಿಂದ ಉತ್ತಮ ಸ್ಪಂದನೆ ದೊರೆತ್ತಿದೆ ಎಂದರು. ನಗರದ ಮಲ್ಲಿಕಾರ್ಜುನ ನಗರ, ಭಗವತಿ ನಗರ ಮತ್ತಿತರ ಬಡಾವಣೆಗಳಲ್ಲಿ ಕಾಂಗ್ರೆಸ್ ಪ್ರಮುಖರು ಗ್ಯಾರಂಟಿ ಕಾರ್ಡ್ ವಿತರಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಮುಖರಾದ ಟಿ.ಎಂ.ಅಯ್ಯಪ್ಪ ಕಾವೇರಮ್ಮ ಸೋಮಣ್ಣ ಚುಮ್ಮಿ ದೇವಯ್ಯ, ಮಹಿಳಾ ಘಟಕದ ಅಧ್ಯಕ್ಷೆ ಸುರಯ್ಯ ಅಬ್ರಾರ್, ಜಫ್ರುಲ್ಲ, ಮಿನಾಜ್ ಪ್ರವೀಣ್, ಫ್ಯಾನ್ಸಿ ಬೆಳ್ಯಪ್ಪ, ಪ್ರೇಮ ಕೃಷ್ಣಪ್ಪ ಪ್ರಕಾಶ್ ಆಚಾರ್ಯ, ಸ್ವರ್ಣಲತಾ, ಮುಮ್ತಾಜ್ ಬೇಗ್, ಪ್ರೇಮ ಎಚ್.ಕೆ, ಬೂತ್ ಅಧ್ಯಕ್ಷರಾದ ರಾವುಫ್, ಹಫೀಜ್, ಮುದ್ದುರಾಜ್, ದಿವ್ಯಾ, ಹಮೀದ್, ಸುದಯ್ ನಾಣಯ್ಯ, ಹಜೀಜ್, ಹಬೀಬ್, ರಿಯಾ ಸುದ್ದಿನ್ ನಗರ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಆರ್.ಪಿ ಮತ್ತಿತರರು ಹಾಜರಿದ್ದರು.

ಅಂತರ್ರಾಷ್ಟ್ರೀಯ ಮಾಸ್ಟರ್ಸ್ ಗೇಮ್ಸ್‌ನಲ್ಲಿ ಕೊಡಗಿನ ಮೂವರಿಗೆ ಪದಕ

ಮಡಿಕೇರಿ, ಮಾ.13– ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆಯುತ್ತಿರುವ ಮಾಸ್ಟರ್ ಗೇಮ್ಸ್ ಚಾಂಪಿಯನ್ ಶಿಪ್‌ನಲ್ಲಿ ಕೊಡಗಿನ ಮೂವರು ಹಿರಿಯ ಕ್ರೀಡಾಪಟುಗಳು



ಭಾರತವನ್ನು ಪ್ರತಿನಿಧಿಸಿ ಒಟ್ಟು 5 ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಅದರಲ್ಲೂ ವಿಶೇಷವೆಂಬಂತೆ ಇಬ್ಬರು ಸಹೋದರರು ಈ ಹಿರಿಯರ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಸಾಧನೆ ಮಾಡಿ ಬೆರಗುಗೊಳಿಸಿದ್ದಾರೆ. ಗೋಣಿಕೊಪ್ಪ ಹಾಗೂ ಕದನೂರು ಗ್ರಾಮಗಳ ನಿವಾಸಿಗಳಾದ ಪಾಲೆಕಂಡ ಬೆಳ್ಳಿಯಪ್ಪ ಹಾಗೂ ಪಾಲೆಕಂಡ ಬೋಪಯ್ಯ ಭಾರತವನ್ನು ಪ್ರತಿನಿಧಿಸಿದ ಅಪರೂಪದ ಸಹೋದರರಾಗಿದ್ದಾರೆ. ಇವರಿಬ್ಬರೂ ಭಾರತದಲ್ಲಿ ನಡೆದ ಮಾಸ್ಟರ್ಸ್ ಗೇಮ್ಸ್ ಕ್ರೀಡಾಕೂಟದಲ್ಲಿ ಇದುವರೆಗೆ 13 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾರೆ. ಪಾಲೆಕಂಡ ಬೋಪಯ್ಯ ಅವರು ಜಾವಲಿನ್ ಥ್ರೋ ಹಾಗೂ ಡಿಸ್ಕಸ್ ಥ್ರೋನಲ್ಲಿ ಹಾಗು ಬೆಳ್ಳಿಯಪ್ಪ ಅವರು 100, 200, 1500 ಮೀಟರ್ ಕಾಲ್ನಡಿಗೆ ರೇಸ್‌ನಲ್ಲಿ ಭಾಗವಹಿಸಿದ್ದಾರೆ. ಹಿರಿಯರ ಕ್ರೀಡಾಕೂಟದಲ್ಲಿ ಬಿ.ಎಸ್.ಎನ್.ಎಲ್.ನ ನಿವೃತ್ತ ಉದ್ಯೋಗಿ, ಕರ್ನಾಟಕದ ಮಾಸ್ಟರ್ಸ್ ಕ್ರೀಡಾಕೂಟ ಸಂಘದ ಅಧ್ಯಕ್ಷೆ ಮರಾಮಡ ಮಾಚಮ್ಮ ಅವರು ಕೂಡ ಈ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಗಳಿಸಿದ್ದಾರೆ.

ಹಿರಿಯ ಪ್ರಸೂತಿ ತಜ್ಞೆ ಡಾ. ಪಾರುವಂಗಡ ಗೌರಮ್ಮಗೆ ಸನ್ಮಾನ



ಅತ್ತೂರು ಕೊಡವ ಕಲ್ಚರ್ ಆ್ಯಂಡ್ ರಿಕ್ರಿಯೇಷನ್ ಮಹಿಳಾ ಕ್ಲಬ್ ವತಿಯಿಂದ ಹಿರಿಯ ಪ್ರಸೂತಿ ತಜ್ಞೆ ಡಾ. ಪಾರುವಂಗಡ ಗೌರಮ್ಮರನ್ನು ಸನ್ಮಾನಿಸಲಾಯಿತು.

ಗೋಣಿಕೊಪ್ಪ, ಮಾ.13– ಅತ್ತೂರು ಕೊಡವ ಕಲ್ಚರ್ ಆ್ಯಂಡ್ ರಿಕ್ರಿಯೇಷನ್ ಮಹಿಳಾ ಕ್ಲಬ್ ವತಿಯಿಂದ ಹಿರಿಯ ಪ್ರಸೂತಿ ತಜ್ಞೆ ಡಾ. ಪಾರುವಂಗಡ ಗೌರಮ್ಮ ಅವರನ್ನು ಮಹಿಳಾ ದಿನಾಚರಣೆ ಅಂಗವಾಗಿ ಸನ್ಮಾನಿಸಲಾಯಿತು.

ಡಾ. ಪಾರುವಂಗಡ ಗೌರಮ್ಮ ಮಾತನಾಡಿ, ಮಹಿಳೆಯರು ಶಿಸ್ತುಬದ್ಧವಾಗಿ ಜೀವನ ನಡೆಸಬೇಕು. ಶುಚಿತ್ವಕ್ಕೆ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೋರಬೇಕಿದೆ. ಸದಾ ಕೌಟುಂಬಿಕ ಒತ್ತಡದಲ್ಲಿ ಉತ್ತಮ ಹವ್ಯಾಸ, ಮೈಗೂಡಿಸಿಕೊಂಡಾಗ ಮನಸ್ಸಿನ ಏಕಾಗ್ರತೆ ಕಾಪಾಡಿಕೊಳ್ಳಬಹುದು. ಸಾಂಸ್ಕೃತಿಕ ಚಟುವಟಿಕೆಯಲ್ಲಿ ಮನೊಲ್ಲಾಸ ಪಡೆದುಕೊಳ್ಳಬೇಕೆಂದು ಎಂದು ಸಲಹೆ ನೀಡಿದರು.

ಕ್ಲಬ್ ಅಧ್ಯಕ್ಷೆ ಕುಪ್ಪಂಡ ತೇಜಸ್ವಿನಿ ಚಂಗಪ್ಪ, ಸದಸ್ಯರಾದ ಸಣ್ಣುವಂಡ ಅನಿತಾ ಚಂಗಪ್ಪ, ಮಾರಮಾಡ ಸವಿತಾ ಪೂಣಚ್ಚ, ಚೆಪ್ಪುಡೀರ ಗೀತಾ ಪೊನ್ನಪ್ಪ, ಪುಲಿಯಂಡ ಅಂಬುಜ ಬೋಪಣ್ಣ ಸೇರಿದಂತೆ ಇನ್ನಿತರರಿದ್ದರು.

ಗುಂಡು ಹಾರಿಸಿ ಮಾವನ ಕೊಂದ ಸೊಸೆ

ಮಡಿಕೇರಿ, ಮಾ.13– ಕೌಟುಂಬಿಕ ಕಲಹದಿಂದ ಸೊಸೆಯೇ ಮಾವನ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿದ ಘಟನೆ ಸೋಮವಾರಪೇಟೆ ತಾಲೂಕಿನ ಕಿಕ್ಕರಳ್ಳಿ ಗ್ರಾಮದಲ್ಲಿ ನಡೆದಿದೆ. ಕೆ.ಎ.ಮಂದಣ್ಣ(73) ಎಂಬವರೇ ಮೃತ ವ್ಯಕ್ತಿಯಾಗಿದ್ದು, ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಸೊಸೆ ನೀಲಮ್ಮ(ಜ್ಯೋತಿ25) ಎಂಬಾಕೆಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಪತಿ ನಾಣಯ್ಯ ಈ ಘಟನೆಯ ಕುರಿತು ಪೊಲೀಸರಿಗೆ ದೂರು ನೀಡಿದ್ದಾರೆ.

ಕೆ.ಎ. ಮಂದಣ್ಣ ಅವರ ಪುತ್ರ ನಾಣಯ್ಯ ಅವರು ನೀಲಮ್ಮಳನ್ನು ಕಳೆದ 4 ವರ್ಷಗಳ ಹಿಂದೆ ವಿವಾಹವಾಗಿದ್ದರು. ಈ ದಂಪತಿಗೆ ಒಂದು ಗಂಡು ಮಗುವಿದೆ. ಕಳೆದ 3 ವರ್ಷಗಳಿಂದ ಮಾವ ಮಂದಣ್ಣ ಮತ್ತು ಸೊಸೆ ನೀಲಮ್ಮ ನಡುವೆ ಕೌಟುಂಬಿಕ ಕಲಹ ನಡೆಯುತ್ತಿತ್ತು. ಈ ಹಿನ್ನೆಲೆಯಲ್ಲಿ ನೀಲಮ್ಮ ಗುಂಡು ಹಾರಿಸಿದ್ದಾರೆ ಎಂದು ಪತಿ ನಾಣಯ್ಯ ಪತ್ನಿ ನೀಲಮ್ಮ ವಿರುದ್ಧ ದೂರು ನೀಡಿದ್ದಾರೆ. ಆರೋಪಿಯನ್ನು ಬಂಧಿಸಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕುಮಾರ್ ನಿಧನ



ಕುಶಾಲನಗರ, ಮಾ.13– ಕೂಡುಮಂಗಳೂರು ಗ್ರಾಪಂ ಸದಸ್ಯ ಕೆ.ಆರ್.ಕುಮಾರ್ (47) ಸೋಮವಾರ ತಮ್ಮ ಮನೆಯಲ್ಲಿ ನಿಧನರಾದರು. ಮೃತರು ಪತ್ನಿ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕೂಡ್ಲೂರಲ್ಲಿ ನಡೆಯಿತು. ಮೃತರ ಅಂತ್ಯಕ್ರಿಯೆಯಲ್ಲಿ ಶಾಸಕ ಅಪ್ಪಚ್ಚು ರಂಜನ್ ಪಾಲ್ಗೊಂಡಿದ್ದರು.

ಧ್ರುವನಾರಾಯಣ್ ಅಗಲಿಕೆಯಿಂದ ಜಿಲ್ಲೆಯ ಅಭಿವೃದ್ಧಿ, ಕಾಂಗ್ರೆಸ್ ಸಂಘಟನೆಗೂ ಹೊಡೆತ

• ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಮಾ.13– ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿದ್ದ ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರ ಅಕಾಲಿಕ ಸಾವು ಅವರ ಬೆಂಬಲಿಗರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರನ್ನು ಚಿಂತೆಗೀಡು ಮಾಡಿದೆ. ಇದೀಗ ಇವರುಗಳಿಗೆ ಧ್ರುವನಾರಾಯಣ್ ಅವರ ಸ್ಥಾನ ತುಂಬುವವರ್‍ಯಾರು ಎಂಬ ಪ್ರಶ್ನೆ ಎದುರಾಗಿದೆ.

ಧ್ರುವನಾರಾಯಣ್ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಜಿಲ್ಲೆಯ ಸಂತೇಮರಹಳ್ಳಿ ಕ್ಷೇತ್ರ ಮತ್ತು ಕೊಳ್ಳೇಗಾಲ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಪ್ರಭಾವಿ ನಾಯಕರಾಗಿದ್ದ ಅವರು ಕಾಂಗ್ರೆಸ್ ಪಕ್ಷದ ಮುಂಚೂಣಿ ನಾಯಕರಾಗಿದ್ದರು. ಇದೀಗ ಅವರು ನಿಧನರಾಗಿರುವುದರಿಂದ ಜಿಲ್ಲಾ ಕಾಂಗ್ರೆಸ್ ನಾಯಕತ್ವಕ್ಕೆ ಕೊರತೆ ಎದುರಾಗಿದೆ.

ಜಿಲ್ಲೆಯಲ್ಲಿ ಈ ಹಿಂದೆ ಹೆಚ್.ಎಸ್. ಮಹದೇವಪ್ರಸಾದ್ ಕಾಂಗ್ರೆಸ್‌ನ ಮುಂಚೂಣಿ ನಾಯಕರಾಗಿದ್ದರು. ಕಾಂಗ್ರೆಸ್‌ನಲ್ಲಿ ಇವರನ್ನು ಕ್ಯಾಪ್ಟನ್ ಎಂದೇ ಕರೆಯಲಾಗುತ್ತಿತ್ತು. ಅವರು ಜಿಲ್ಲೆಯ ಅಭಿವೃದ್ಧಿ ಜೊತೆಗೆ ಕಾಂಗ್ರೆಸ್‌ನ ಸಂಘಟನೆಯಲ್ಲೂ ತೊಡಗಿಕೊಂಡಿದ್ದರು. ಅವರು, ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾಗ ಜಿಲ್ಲೆಯ ಅಭಿವೃದ್ಧಿಗೆ ಟೊಂಕಕಟ್ಟಿ ನಿಂತಿದ್ದರು. ಇದಕ್ಕೆ ಧ್ರುವನಾರಾಯಣ್ ಅವರು ಸಾಥ್ ನೀಡುತ್ತಿದ್ದರು. 2017ರಲ್ಲಿ



ಹೆಚ್.ಎಸ್. ಮಹದೇವಪ್ರಸಾದ್ ಅವರ ಅಕಾಲಿಕ ಮರಣ ಜಿಲ್ಲೆಯ ಕಾಂಗ್ರೆಸ್ ಪಾಲಿಗೆ ಹಾಗೂ ಅಭಿವೃದ್ಧಿಗೆ ಬರ ಸಿಡಿಲಿನಂತೆ ಅಪ್ಪಳಿಸಿತ್ತು.

ಈ ವೇಳೆ ಜಿಲ್ಲೆಯ ಅಭಿವೃದ್ಧಿ ಮತ್ತು ಕಾಂಗ್ರೆಸ್ ನಾಯಕತ್ವವನ್ನು ಯಾರು ಹೊರಲಿದ್ದಾರೆ ಎಂಬ ಪ್ರಶ್ನೆ ಉದ್ಭವಿಸಿತ್ತು. ಈ ಪ್ರಶ್ನೆಗೆ ಆರ್. ಧ್ರುವನಾರಾಯಣ್ ಉತ್ತರವಾಗಿ ಮಹದೇವಪ್ರಸಾದ್ ಅವರ ಜಾಗವನ್ನು ಸಂಪೂರ್ಣವಾಗಿ ತುಂಬಿದ್ದರು. ಆದರೆ ಇದೀಗ ಇಂತಹ ಪರಿಸ್ಥಿತಿ ಜಿಲ್ಲೆಯಲ್ಲಿ ಇಲ್ಲ. ಮಹದೇವಪ್ರಸಾದ್ ಅವರು

> ಧ್ರುವನಾರಾಯಣ್ ಅವರ ಅಕಾಲಿಕ ಸಾವು ಚಾಮರಾಜನಗರ ಮತ್ತು ಮೈಸೂರು ಭಾಗದ ಅಭಿವೃದ್ಧಿಗೆ ಹಿನ್ನಡೆ ಆದಂತಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ನಷ್ಟವುಂಟಾಗಿದ್ದು, ದಿಕ್ಕು ತೋಚದಂತಾಗಿದೆ. ಪಕ್ಷದ ಹಿರಿಯ ನಾಯಕರು ಈ ಬಗ್ಗೆ ಚರ್ಚಿಸುವ ಅವಶ್ಯಕತೆ ಇದೆ.
>
> -ಜಿ.ಕೆ. ರವಿಕುಮಾರ್,
> ಜಿಲ್ಲಾ ಉಪಾಧ್ಯಕ್ಷರು, ಕಾಂಗ್ರೆಸ್ ಸಮಿತಿ

ಸಾವನ್ನಪ್ಪಿದ ನಂತರ ಆ ಸ್ಥಾನಕ್ಕೆ ಧ್ರುವನಾರಾಯಣ್ ಅವರು ಇದ್ದಾರೆ ಎಂಬ ಉತ್ತರ ದೊರೆತ ಪರಿಸ್ಥಿತಿ ಈಗ ಜಿಲ್ಲೆಯಲ್ಲಿ ಇಲ್ಲವಾಗಿದೆ. ಜಿಲ್ಲೆಯ ಅಭಿವೃದ್ಧಿ ಬಗ್ಗೆ ದೂರದೃಷ್ಟಿವುಳ್ಳ ಪಕ್ಷದ ಸಂಘಟನೆಯಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಬಹುದು ಎಂಬ ನಾಯಕ ಕಾಂಗ್ರೆಸ್ ಪಕ್ಷದಲ್ಲಿ ಇಲ್ಲದಿರುವುದು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಚಿಂತೆಗೀಡು ಮಾಡಿದೆ.

ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತಾಸೆಯಾಗಿದ ಕೆಲಸ ಮಾಡುತ್ತಿದ್ದ, ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡ ಎಲ್ಲಾ ನಾಯಕರುಗಳಿಗೆ ಮಾದರಿಯಾಗಿದ್ದ ಮಹದೇವಪ್ರಸಾದ್ ಹಾಗೂ ಧ್ರುವನಾರಾಯಣ್ ಇಲ್ಲದ ಕಾಂಗ್ರೆಸ್ ಈಗ ನಿಜವಾಗಿಯೂ ಬಡವಾಗಿದೆ ಎಂದೇ ಹೇಳಬಹುದು. ಇದೀಗ ಜಿಲ್ಲೆಯ ಕಾಂಗೆಸ್ ನಾವಿಕನಿಲ್ಲದ ಹಡಗಿನಂತಗಿದೆ. ಮುನ್ನಡೆಸುವವರು ಯಾರು ಎಂಬ ಪ್ರಶ್ನೆ ಕಾಡಿದೆ.

ಹನೂರಲ್ಲಿ ನಾಡಪ್ರಭು ಕೆಂಪೇಗೌಡ ಸಮುದಾಯ ಭವನ ಉದ್ಘಾಟನೆ



ಹನೂರು, ಮಾ.13– ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ನಿರ್ಮಾಣವಾಗಿರುವ ಸಮುದಾಯ ಭವನ ಎಲ್ಲಾ ಜನಾಂಗದ ಒಳಿತಿಗೆ ಸದ್ಬಳಕೆ ಆಗಲಿ. ಇಂದಿನಿಂದಲೇ ಈ ಭವನದಲ್ಲಿ ಕಲ್ಯಾಣ ಕಾರ್ಯಕ್ರಮಗಳು ಜರುಗಲಿ ಎಂದು ಸೋಮೇಶ್ವರನಾಥ ಸ್ವಾಮೀಜಿ ತಿಳಿಸಿದರು.

ಹನೂರು ಪಟ್ಟಣದ ಹೊರವಲಯದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿರುವ ಶ್ರೀ ಕೆಂಪೇಗೌಡ ಸಮುದಾಯ ಭವನ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು. ಭವನ ನಿರ್ಮಾಣಕ್ಕೆ ಇತರೆ ಸಮುದಾಯದ ಜನಪ್ರತಿನಿಧಿಗಳು ಹಾಗೂ ಮುಖಂಡರುಗಳು ಆರ್ಥಿಕ ನೆರವು ನೀಡಿದ್ದಾರೆ. ಕೆಂಪೇಗೌಡರು, ಕುವೆಂಪು ಅವರ ಆಶಯ ಅಭಿವೃದ್ಧಿ, ಸಮಸಮಾಜದ ನಿರ್ಮಾಣ ಮಾಡುವುದಾಗಿತ್ತು. ಸಮುದಾಯ ಭವನ ಕಲ್ಯಾಣ ಕಾರ್ಯಗಳ ಜೊತೆಗೆ ಶೈಕ್ಷಣಿಕ, ಧಾರ್ಮಿಕ ಕಾರ್ಯಗಳಿಗೆ ಬಳಕೆಯಾಗಲಿ ಎಂದರು.

ಧ್ರುವನಾರಾಯಣ್ ಉದಾತ್ತ ವ್ಯಕ್ತಿ: ಕಾರ್ಯಕ್ರಮದಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್ ನಿಧನದ ಬಗ್ಗೆ ಮರುಕ ವ್ಯಕ್ತಪಡಿಸಿ, ಧ್ರುವನಾರಾಯಣ್ ಜಿಲ್ಲೆ, ರಾಜ್ಯಕ್ಕೆ ಬೇಕಾದ ಉದಾತ್ತ ವ್ಯಕ್ತಿ. ನಮ್ಮಿಂದ ದೂರವಾದದ್ದು ದುರದೃಷ್ಟಕರ ಎಂದರು.

ಶಾಸಕ ಆರ್.ನರೇಂದ್ರ ಮಾತನಾಡಿ, ಸಮುದಾಯ ಭವನ ಕೇವಲ ಮದುವೆ ಕಾರ್ಯಗಳಿಗೆ ಸೀಮಿತವಾಗಿರದೆ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ ಬಳಕೆಯಾಗಲಿ. ಪ್ರಮುಖವಾಗಿ ಕೆಂಪೇಗೌಡರ ಅಧ್ಯಯನ ಕೇಂದ್ರವಾಗಬೇಕು. ಕ್ಷೇತ್ರ ವ್ಯಾಪ್ತಿಯಲ್ಲಿ ಎಲ್ಲ ಜನಾಂಗದವರಿಗೆ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಒತ್ತು ನೀಡಿದ್ದೇನೆ. ಶ್ರೀ ಕೆಂಪೇಗೌಡ ಸಮುದಾಯ ಭವನಕ್ಕೆ ಮಾಜಿ ಸಂಸದ ಆರ್.ಧ್ರುವನಾರಾಯಣ್, ಧರ್ಮಸೇನಾ, ಸೀತಾರಾಮ್ ಅವರು ಅನುದಾನದ ಜೊತೆಗೆ ಹನೂರು ಒಕ್ಕಲಿಗ ಸಮುದಾಯದ ಜನತೆ ದೇಣಿಗೆಯಿಂದ ಸುಸಜ್ಜಿತ ಕಟ್ಟಡ ನಿರ್ಮಾಣವಾಗಿದೆ ಮುಂದಿನ ದಿನಗಳಲ್ಲಿ ತಮ್ಮೆಲ್ಲ ಸಹಕಾರವಿದ್ದರೆ ಮೊದಲ ಮಹಡಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು. ಕಟ್ಟಡ ನಿರ್ಮಾಣಕ್ಕೆ ಜಮೀನು ನೀಡಿದ ಕುಟುಂಬದವರಿಗೆ ನಾವು ಅಭಾರಿಯಾಗಿದ್ದೇವೆ ಎಂದರು.

ಕೊಳ್ಳೇಗಾಲ ನಗರಸಭೆಯಿಂದ ಧ್ರುವನಾರಾಯಣ್‌ಗೆ ಶ್ರದ್ಧಾಂಜಲಿ



ಕೊಳ್ಳೇಗಾಲ, ಮಾ.13– ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅಕಾಲಿಕ ನಿಧನ ಹಿನ್ನೆಲೆ ಸೋಮವಾರ ನಗರಸಭೆ ಆಡಳಿತ ಮಂಡಳಿ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಗರಸಭೆ ಕಾರ್ಯಾಲಯ ಮುಂಭಾಗದಲ್ಲಿ ಧ್ರುವನಾರಾಯಣ್ ಭಾವಚಿತ್ರವನ್ನು ಇಟ್ಟು ಪೂಜೆ ಸಲ್ಲಿಸಿ ಪುಷ್ಪನಮನ ಅರ್ಪಿಸಿ, ಬಳಿಕ ಕೆಲಕಾಲ ಮೌನ ಆಚರಿಸಲಾಯಿತು.

ಈ ವೇಳೆ ನಗರಸಭಾಧ್ಯಕ್ಷೆ ರೇಖಾ ರಮೇಶ್ ಮಾತನಾಡಿ, ಧ್ರುವನಾರಾಯಣ್ ಅಗಲಿಕೆ ಪಕ್ಷಕ್ಕೆ ದೊಡ್ಡ ನಷ್ಟವುಂಟಾಗಿದೆ, ಅವರ ಜನಾನುರಾಗಿ ನಾಯಕರಾಗಿದ್ದರು, ಸ್ನೇಹಜೀವಿ, ಹಿರಿಯ ನಾಯಕರು ಮತ್ತೊಮ್ಮೆ ಹುಟ್ಟಿ ಬರಲಿ, ಅವರ ಅಗಲಿಕೆಯಿಂದ ಪಕ್ಷದ ಕಾರ್ಯಕರ್ತರಿಗೆ ನೋವುಂಟಾಗಿದೆ. ಅವರು ಹಾಕಿಕೊಟ್ಟಿರುವ ಹಾದಿಯಲ್ಲಿ ನಾವೆಲ್ಲಾ ನಡೆಯುವ ಮೂಲಕ ಅವರ ಆತ್ಮಕ್ಕೆ ಶಾಂತಿ ದೊರೆಯುವಂತೆ ಮಾಡೋಣ. ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ಧ್ರುವನಾರಾಯಣ್‌ರವರ ಅಗಲಿಕೆಯ ನೋವನ್ನು ಭರಿಸುವಂತೆ ದೇವರಲ್ಲಿ ಪ್ರಾರ್ಥಿಸೋಣ ಎಂದರು. ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷೆ ಸುಶೀಲಾ ಶಾಂತರಾಜು, ಸದಸ್ಯರುಗಳಾದ ಎ.ಪಿ.ಶಂಕರ್, ಮಂಜುನಾಥ್, ಧರಣೇಶ್, ಸುಮಾ ಸುಬ್ಬಣ್ಣ ಜಯಮೇರಿ, ಶಾಂತರಾಜು, ನಟರಾಜು, ಸುರೇಶ್, ರಾಘವೇಂದ್ರ ಮನೋಹರ್, ನಾಗಣ್ಣ, ಪ್ರಕಾಶ್, ಮಾಜಿ ಅಧ್ಯಕ್ಷ ರಮೇಶ್, ಮಲ್ಲಿಕಾರ್ಜುನ, ಪರಮೇಶ್ವರಯ್ಯ, ಮಾಜಿ ಸದಸ್ಯ ಮುಡಿಗುಂಡ ಶಾಂತರಾಜು, ಮುಖಂಡರು ಜಗದೀಶ್, ಪ್ರಭುಸ್ವಾಮಿ, ಬಸ್ತೀಪುರ ರವಿ, ಶಾಂತರಾಜು, ಸೋಮಣ್ಣ, ಶಿವಕುಮಾರ್ ಇನ್ನಿತರರು ಇದ್ದರು.

ಕಸಾಪದಿಂದ ಮಲೆಯೂರು ಗುರುಸ್ವಾಮಿ, ಧ್ರುವನಾರಾಯಣರಿಗೆ ಶ್ರದ್ಧಾಂಜಲಿ



ಚಾಮರಾಜನಗರ ಮಾ.13– ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಭಾನುವಾರ ಪ್ರೊ: ಮಲೆಯೂರು ಗುರುಸ್ವಾಮಿ ಮತ್ತು ಮಾಜಿ ಸಂಸದ ಆರ್.ಧ್ರುವನಾರಾಯಣ ಅವರ ಭಾವಚಿತ್ರಕ್ಕೆ ಶ್ರದ್ಧಾಂಜಲಿ ಸಭೆ ನಡೆಯಿತು.

ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾದ ಶೈಲಕುಮಾರ್, ಇಬ್ಬರೂ ಮಹನೀಯರು ಜಿಲ್ಲೆಯಲ್ಲಿ ಸಾಹಿತ್ಯ ಹಾಗೂ ರಾಜಕೀಯ ಕ್ಷೇತ್ರ ದಿಗ್ಗಜರಾಗಿದ್ದರು. ಇವರ ಅಗಲಿಕೆ ತುಂಬಲಾರದ ನಷ್ಟವಾಗಿದೆ. ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿ ಸಾಹಿತ್ಯಾತ್ಮಕ ಕಾರ್ಯದಲ್ಲಿ ಭದ್ರ ಭುನಾದಿ ಹಾಕಿದ ಮಲೆಯೂರು ಅವರಿಗೆ ಶ್ರದ್ಧಾಂಜಲಿ ಸಲ್ಲಿಸೋಣ ಎಂದರು.

ಸಾಹಿತಿಗಳಾದ ಮಹದೇವ ಶಂಕನಪುರ ರವರು ಮಾತನಾಡುತ್ತಾ, ಗುರುಸ್ವಾಮಿಯವರು ನಾಡಿನ ಶ್ರೇಷ್ಠ ವಿದ್ವಾಂಸರಾದರೂ ಎಲ್ಲರೊಂದಿಗೆ ಬೆರೆಯುತ್ತಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಾ ಸಾಹಿತ್ಯ ಪರಂಪರೆಗೆ ಹೊಸಬರನ್ನು ತರುವ ಮೂಲಕ ಶ್ರೀಮಂತಗೊಳಿಸಿದರು. ಹಾಗೆಯೇ ರಾಜಕೀಯ ಕ್ಷೇತ್ರದಲ್ಲಿ ಧೃವನಾರಾಯಣ ರವರು ಯುವಕರಿಗೆ ಆದರ್ಶಪ್ರಾಯರಾಗಿದ್ದರು ಎಂದು ಹೇಳಿದರು. ಸಾಹಿತಿ ಸೋಮಶೇಖರ ಬಿಸಲ್ವಾಡಿ ಹಾಗೂ ಎಂ.ನಾಗಮಲ್ಲಪ್ಪರವರು ಮಾತನಾಡಿ ಅಗಲಿದ ಇಬ್ಬರು ಮಹಾನ್ ಚೇತನಗಳ ಭಾಂದವ್ಯವನ್ನು ಮೆಲಕು ಹಾಕಿದರು.

ಈ ಸಭೆಯಲ್ಲಿ ಭಾಗವಹಿಸಿದ್ದ ಕನ್ನಡ ಹೋರಾಟಗಾರ ಶಾ.ಮುರಳಿ, ಚಾ.ರಂ. ಶ್ರೀನಿವಾಸಗೌಡ, ಚಾ.ಹ.ರಾಮು, ಕೊತ್ತಲವಾಡಿ ಶಿವಕುಮಾರ್, ದೇಪಾಪುರ ಚಂದ್ರು, ನಾಗಭೂಷಣ, ಬಸವಪುರ ಸುರೇಶ್, ಸುರೇಶ್ ಎನ್.ಋಗ್ವೇದಿ, ಪಳನಿಸ್ವಾಮಿ, ಮಹಾಲಿಂಗಗಿರ್ಗಿ, ಕಲೆನಟರಾಜು, ಕಿಶೋರ್, ಮಂಗಳಾ ವೇಣುಗೋಪಾಲ್, ಲಕ್ಷ್ಮಿನರಸಿಂಹ, ಹಾಗೂ ಇನ್ನು ಮುಂತಾದವರು ಇಬ್ಬರು ಮಹಾನೀಯರ ಕುರಿತು ಮಾತನಾಡಿದರು.

ಬಿ.ಆರ್.ಹಿಲ್ಸ್‌ನಲ್ಲಿ ಸಫಾರಿ ವೇಳೆ 3 ಹುಲಿ ಕಂಡು ಪುಳಕಿತರಾದ ಪ್ರವಾಸಿಗರು



ಚಾಮರಾಜನಗರ, ಮಾ.13– ತಾಲೂಕಿನ ಬಿಳಿಗಿರಿರಂಗನಬೆಟ್ಟ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಕೆ. ಗುಡಿ (ಕ್ಯಾತದೇವರಗುಡಿ) ಯಲ್ಲಿ ಸೋಮವಾರ ಬೆಳಗಿನ ಸಫಾರಿಯಲ್ಲಿ ಮೂರು ಹುಲಿಗಳು ಒಂದೇ ಸ್ಥಳದಲ್ಲಿ ಕಾಣಿಸಿಕೊಂಡಿರುವುದು ವಿಶೇಷವಾಗಿದ್ದು, ಪ್ರವಾಸಿಗರು ಪುಳಕಿತರಾಗಿದ್ದಾರೆ. ಸೋಮವಾರ ಬೆಳಗ್ಗೆ ಕೆ. ಗುಡಿಯಲ್ಲಿ ಸಫಾರಿ ಹೋಗಿದ್ದ ಪ್ರವಾಸಿಗರಿಗೆ ಒಂದೇ ಕಡೆ ಮೂರು ಹುಲಿಗಳ ದರ್ಶನವಾಗಿರುವುದು ವಿಶೇಷವಾಗಿದೆ. ಅನೇಕ ಬಾರಿ ಒಂದು ಹುಲಿ ಕಾಣಿಸಿಕೊಳ್ಳುವುದು ಕೂಡಾ ಕಷ್ಟ, ಆದರೆ, ಒಂದೇ ಸ್ಥಳದಲ್ಲಿ ಮೂರು ವ್ಯಾಘ್ರಗಳು ಕಂಡಿರುವುದು ಅಪರೂಪವಾಗಿದೆ. ಈ ದೃಶ್ಯವನ್ನು ಪ್ರವಾಸಿಗರೊಬ್ಬರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಚಿತ್ರಿಕರಿಸಿದ್ದು, ಅದು ಎಲ್ಲೆಡೆ ವೈರಲ್ ಆಗಿದೆ.

ಬಸ್ ಹತ್ತುವ ವೇಳೆ ಗೃಹಿಣಿ ಮಾಂಗಲ್ಯ ಸರ ಕಳವು

ಕೊಳ್ಳೇಗಾಲ, ಮಾ.13– ಕೊಳ್ಳೇಗಾಲ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ಸಮಯದಲ್ಲಿ ಮಹಿಳೆಯ ಕತ್ತಿನಲ್ಲಿದ್ದ 40 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಖದೀಮರು ಕಳ್ಳತನ ಮಾಡಿರುವ ಘಟನೆ ನಡೆದಿದೆ.

ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದ ನಂಜುಂಡೇಗೌಡರವರ ಪತ್ನಿ ಶಶಿಕಲಾ ಎಂಬಾಕೆ 40 ಗ್ರಾಂ ಮಾಂಗಲ್ಯ ಸರ ಕಳೆದುಕೊಂಡವರು. ಶಶಿಕಲಾ ಅವರು ಹನೂರಿನಲ್ಲಿ ಕಾರ್ಯಕ್ರಮ ಮುಗಿಸಿ ವಾಪಸ್ಸು ತನ್ನ ಊರಿಗೆ ತೆರಳಲು ಕೊಳ್ಳೇಗಾಲದಲ್ಲಿ ಬಸ್ ಹತ್ತುವ ವೇಳೆ ದುಷ್ಕರ್ಮಿಗಳು ಕತ್ತಿನಲ್ಲಿದ್ದ 40 ಚಿನ್ನದ ಸರವನ್ನು ಎಗರಿಸಿ ಪರಾರಿಯಾಗಿದ್ದಾರೆ. ಪಟ್ಟಣದಿಂದ ಸ್ವಲ್ಪ ದೂರಿನಲ್ಲಿ ಹೋಗಿ ಗಮನಿಸಿದಾಗ ಕತ್ತಿನಲ್ಲಿದ್ದ ಸರ ಇಲ್ಲದಿದ್ದನ್ನು ಗಮನಿಸಿ ಗಾಬರಿಗೊಂಡ ಈಕೆ ಪೊಲೀಸ್ ಠಾಣೆಗೆ ಬಂದು ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಠಾಣಾ ಪೊಲೀಸರು ಸರಗಳ್ಳತನ ಎಸಗಿದ್ದ ಕಳ್ಳರ ಪತ್ತೆಗೆ ಸೂಕ್ತ ಕ್ರಮ ಕೈಗೊಂಡಿದ್ದಾರೆ.

ಒಂದನೇ ಪುಟದಿಂದ

11,133 ಪೌರಕಾರ್ಮಿಕರ ಖಾಯಂ

ಇದಕ್ಕೆ ಆರ್ಥಿಕ ಇಲಾಖೆ ಸಮ್ಮತಿಸಿದ್ದು, ಶೀಘ್ರದಲ್ಲಿ ಈ ಸಂಬಂಧ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಮಾಹಿತಿ ನೀಡಿದರು.

ಹೊರಗುತ್ತಿಗೆ ತೆಗೆದು ನೇರಪಾವತಿ ವ್ಯವಸ್ಥೆ: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚಾಲಕರು, ಲೋಡರ್ಸ್, ಕ್ಲೀನರ್ಸ್ ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿದ್ದು, ಈ ಸಂಬಂಧ ಹೊರಗುತ್ತಿಗೆ ರದ್ದುಗೊಳಿಸಿ, ನೇರ ಪಾವತಿ ವ್ಯವಸ್ಥೆ ತರಲು ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಳೆದ ಜುಲೈನಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಪೌರಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿ ನಾನು ಇದ್ದು, ಈಗಾಗಲೇ ಸರ್ಕಾರಕ್ಕೆ ಪೌರಕಾರ್ಮಿಕರ ಶ್ರೇಯೋಭಿವೃದ್ಧಿಗೆ ಸಂಬಂಧ ಮೂರು ಶಿಫಾರಸ್ಸು ಮಾಡಿದ್ದೇನೆ ಎಂದು ತಿಳಿಸಿದರು. ಸಾಮಾನ್ಯವಾಗಿ 45ರಿಂದ 50 ವರ್ಷ ಮಾತ್ರ ಪೌರಕಾರ್ಮಿಕರು ಆಯಸ್ಸು ಇರುವುದನ್ನು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಹಾಗಾಗಿ ಪೌರಕಾರ್ಮಿಕರ ಆರೋಗ್ಯ ಮುಖ್ಯ ಎಂಬುದನ್ನು ಮನಗಂಡು ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಸ್ವಚ್ಛತಾ ಕಾರ್ಮಿಕರ ಸರ್ವೇ: ಇಡೀ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರ ಸಂಖ್ಯೆ ನಿಖರವಾಗಿ ದೊರೆಯಲಿದೆ. ಆದರೆ ರೈಲ್ವೆ, ಬಸ್ ನಿಲ್ದಾಣ, ಆಸ್ಪತ್ರೆ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಸ್ವಚ್ಛತಾ ಕಾರ್ಮಿಕರ ಸಂಖ್ಯೆಯ ನಿಖರ ಮಾಹಿತಿ ಇಲ್ಲ. ಹಾಗಾಗಿ ಈ ಸಂಬಂಧ ಸರ್ವೇ ಕಾರ್ಯ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಮೊದಲ ಹಂತದಲ್ಲಿ ಮೈಸೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸರ್ವೇ ಕಾರ್ಯ ಆರಂಭವಾಗಲಿದ್ದು, ಸರ್ವೇ ವೇಳೆ ಸ್ವಚ್ಛತಾ ಕಾರ್ಮಿಕರಿಗೆ ಗುರುತಿನ ಚೀಟಿ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಏಕರೂಪದ ಸಮವಸ್ತ್ರ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕರಿಗೆ ಏಕರೂಪದ ಸಮವಸ್ತ್ರ ನೀಡಲು ಉದ್ದೇಶಿಸಲಾಗಿದೆ. ಅಲ್ಲದೆ, ರಾಜ್ಯದಲ್ಲಿ 770 ಮಂದಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಇದ್ದಾರೆಂದು ಗುರುತಿಸಲಾಗಿದೆ. ಇವರಿಗೆ ಪುನರ್ವಸತಿ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಅವರಿಗೆ ಉದ್ಯೋಗ ಮತ್ತು ವಸತಿ ಕಲ್ಪಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ ಎಂದು ಶಿವಣ್ಣ ತಿಳಿಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ತಾತ್ಕಾಲಿಕ ಆಯ್ಕೆ ಪಟ್ಟಿ ರದ್ದಾಗಿಲ್ಲ

ಈ ಖಾಲಿ ಹುದ್ದೆಗಳ ಭರ್ತಿಗೆ ಇತ್ತೀಚೆಗೆ ಅಧಿಸೂಚನೆ ಹೊರಡಿಸಿ, 170 ಮಂದಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಪಟ್ಟಿಗೆ ಆಕ್ಷೇಪಣಾ ಅವಧಿಯಲ್ಲಿ ಕೆಲ ಆಕ್ಷೇಪಣೆಗಳು ಸಲ್ಲಿಕೆಯಾಗಿವೆ. ಶೀಘ್ರದಲ್ಲಿ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು. 170 ಮಂದಿಯ ತಾತ್ಕಾಲಿಕ ಆಯ್ಕೆ ಪಟ್ಟಿ ರದ್ದಾಗಿಲ್ಲ. ಎಲ್ಲರನ್ನು ಖಾಯಂಗೊಳಿಸಲು ಪೌರಕಾರ್ಮಿಕರು ಬೇಡಿಕೆ ಮುಂದಿಟ್ಟಿದ್ದಾರೆ. ಆದರೆ 205 ಮಂದಿಗೆ ಮಾತ್ರ ಖಾಯಂ ಮಾಡಲು ಸರ್ಕಾರ ಅನುಮತಿ ನೀಡಿದೆ. ಸದರಿ ಬೇಡಿಕೆ ಮುಂದಿಟ್ಟು ಪ್ರತಿಭಟನೆ ನಡೆಸಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಮುಂದಿನ ಸೂಚನೆವರೆಗೆ 170 ಮಂದಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ರಾಜ್ಯದಲ್ಲಿ ಮೊದಲ ಹಂತದಲ್ಲಿ ಖಾಯಂಗೊಳಿಸಿರುವ 11,133 ಪೌರಕಾರ್ಮಿಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಪಾಲಿಕೆ ಹೊರತುಪಡಿಸಿ ಜಿಲ್ಲೆಯ 13 ನಗರ ಸ್ಥಳೀಯ ಸಂಸ್ಥೆಗಳಲ್ಲಿ 306 ಮಂದಿ ಖಾಯಂ ಆಗಲಿದ್ದಾರೆ. ಈ ಸಂಬಂಧ 358 ಅರ್ಜಿಗಳು ಸಲ್ಲಿಕೆಯಾಗಿದ್ದು, ಸದ್ಯಕ್ಕೆ 240 ಮಂದಿಗೆ ಖಾಯಮಾತಿ ಅವಕಾಶ ದೊರೆಯಲಿದೆ ಎಂದು ತಿಳಿಸಿದರು.

ಚುನಾವಣೆ ಮತ್ತೆ ಮುಂದೂಡಿಕೆ

ತಮ್ಮನ್ನು ಹಾಗೂ ಅಧಿಕಾರಿಗಳನ್ನು ಅರ್ಧ ದಿನ ಕಾಯಿಸಿದ ಮೇಯರ್, ತಾವೇ ನಿಗದಿಗೊಳಿಸಿದ್ದ ಸಭೆಗೆ ಹಾಜರಾಗದೇ ದುರ್ವರ್ತನೆ ಪ್ರದರ್ಶಿಸಿದ್ದಾರೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಮಾಜಿ ಮೇಯರ್ ಅಯೂಬ್ ಖಾನ್, ಬಿಜೆಪಿಯವರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ್ದಾರೆ ಎಂದು ಆರೋಪಿಸಿದರು. ಮೇಯರ್ ಚುನಾವಣೆಯಾಗಿ 7 ತಿಂಗಳು ಕಳೆದರೂ ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಡೆಸದೇ ಇರುವುದು ಪ್ರಜಾಪ್ರಭುತ್ವದಲ್ಲಿ ಅಪರಾಧ. ಅಧಿಕಾರ ವಿಕೇಂದ್ರೀಕರಣಗೊಳಿಸಲೆಂದೇ ಸಂವಿಧಾನದತ್ತವಾಗಿ ರಚಿಸಿರುವ ಪಾಲಿಕೆ ಸ್ಥಾಯಿ ಸಮಿತಿಗಳ ಅಧ್ಯಕ್ಷರನ್ನು ಆಯ್ಕೆ ಮಾಡದೇ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಅವರು ಮೇಯರ್ ವಿರುದ್ಧ ಹರಿಹಾಯ್ದರು.

ನೂರಾರು ಕೋಟಿ ರೂ. ವೆಚ್ಚದ ರಸ್ತೆ–ಚರಂಡಿ ಕಾಮಗಾರಿಗಳು ನಡೆಯುತ್ತಿವೆ. ಅದರ ಗುಣಮಟ್ಟ ಪರಿಶೀಲಿಸುವುದು ವರ್ಕ್ಸ್ ಕಮಿಟಿ ಜವಾಬ್ದಾರಿಯಾಗಿದೆ. ಆದರೆ ಸ್ಥಾಯಿ ಸಮಿತಿಗಳೇ ಅಸ್ತಿತ್ವದಲ್ಲಿ ಇಲ್ಲದ ಕಾರಣ ಅಧಿಕಾರಿಗಳೇ ಮೇಲುಸ್ತುವಾರಿ ಮಾಡುವಂತಾಗಿದೆ. ಅದಕ್ಕೆ ಮೇಯರ್ ಬೇಜವಾಬ್ದಾರಿಯೇ ಕಾರಣ ಎಂದು ಅಯೂಬ್ ಖಾನ್ ದೂರಿದರು. ಸಭೆ ಕರೆದು, ತಾವೇ ನಾಪತ್ತೆಯಾಗಿರುವ ಶಿವಕುಮಾರ್ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅವಮಾನಿಸಿದ್ದಾರೆ. ತಮಗಿಷ್ಟ ಬಂದ ರೀತಿ, ದರ್ಪದಿಂದ ಆಡಳಿತ ನಡೆಸುತಿದ್ದಾರೆ. ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ಸಮಯ ಸಮೀಪಿಸುತ್ತಿರುವುದರಿಂದ ಹಾಗೆಯೇ ಅಧಿಕಾರದಲ್ಲಿ ಮುಂದುವರಿಯುವ ಹುನ್ನಾರ ಬಿಜೆಪಿಯವರದ್ದು ಎಂದು ಕಿಡಿಕಾರಿದರು.

ಅನಾರೋಗ್ಯದಿಂದ ಸಭೆಗೆ ಗೈರಾದೆ

ಸಮಿತಿಗಳ ಚುನಾವಣೆ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದ್ದು ನಿಜ. ಆದರೆ, ಆರೋಗ್ಯದಲ್ಲಿ ವ್ಯತ್ಯಯವಾದ ಕಾರಣ ಸಭೆಗೆ ಹಾಜರಾಗಲು ಸಾಧ್ಯವಾಗಿಲ್ಲ. ಇದರಲ್ಲಿ ಯಾವುದೇ ಬೇರೆ ಉದ್ದೇಶವಿಲ್ಲ ಎಂದು ಶಿವಕುಮಾರ್ ತಿಳಿಸಿದರು. ಮತ್ತೊಂದು ಮೂಲದ ಪ್ರಕಾರ, ಜೆಡಿಎಸ್‌ನೊಂದಿಗೆ ಹೋಗಲು ಬಿಜೆಪಿ ಮುಖಂಡರು ಶತಾಯ–ಗತಾಯ ಒಪ್ಪದಿರುವುದು. ಚುನಾವಣೆ ಸಮೀಪಿಸುತ್ತಿರುವುದರಿಂದ ಕೆಟ್ಟ ಸಂದೇಶ ರವಾನೆಯಾಗಲಿದೆ ಎಂಬ ಕಾರಣಕ್ಕೆ ಇಂದಿನ ಸ್ಥಾಯಿ ಸಮಿತಿ ಚುನಾವಣೆ ಮತ್ತೆ ಮುಂದೂಡುವ ಕಾರ್ಯತಂತ್ರ ರೂಪಿಸಲಾಗಿದೆ ಎಂದು ತಿಳಿದು ಬಂದಿದೆ.

ಮತಗಟ್ಟೆಗಳು ವಿಹಾರ ತಾಣಗಳಂತಿರುತ್ತವೆ



ಸಂವಾದದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ನಗರ ಕಾರ್ಯದರ್ಶಿ ರಂಗಸ್ವಾಮಿ ಇದ್ದರು.

ಬಡಾವಣೆಗಳ ಮತದಾರರು ಮತಗಟ್ಟೆಗೆ ಹೋಗಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ವೋಟರ್ ಹೆಲ್ಪ್‌ಲೈನ್ ಆ್ಯಪ್ ಬಳಕೆ ಮಾಡಿಕೊಂಡು ಈ ಬಗ್ಗೆ ಮಾಹಿತಿ ಪಡೆದುಕೊಳ್ಳುವಂತೆ ಸೂಚಿಸಿದರು.

ಅಕ್ರಮ, ಆಮಿಷ ತಡೆಗೆ ಕ್ರಮ : ಚುನಾವಣಾ ಆಯೋಗ ಇನ್ನು ನೀತಿ ಸಂಹಿತೆ ಜಾರಿಗೊಳಿಸದಿ ದ್ದರೂ, ಜಿಲ್ಲಾಡಳಿತ ಅಕ್ರಮ ಹಾಗೂ ಅಮಿಷವೊಡ್ಡುವವರ ವಿರುದ್ಧ ಹದ್ದಿನ ಕಣ್ಣಿಟ್ಟಿದೆ. ನಗರದ ಪ್ರತಿ ಸಂಪರ್ಕ ರಸ್ತೆಯಲ್ಲಿನ ಚೆಕ್‌ಪೋಸ್ಟ್‌ಗಳ ತಪಾಸಣೆಗೆ ಕ್ರಮ ಕೈಗೊಳ್ಳಲಾಗುವುದು. ಮತದಾರ ರಿಗೆ ಹಂಚಲು ವಿವಿಧ ವಸ್ತು ಕೊಂಡೊಯ್ಯುವುದರ ಮೇಲೂ ಕಣ್ಣಿಡಲಾಗಿದೆ. ಜಿಎಸ್‌ಟಿ, ತೆರಿಗೆ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ಮಾಡುತ್ತಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಮತದಾರರನ್ನು ಬೆದರಿ ಸುವವರ ವಿರುದ್ಧವೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ನಾಲ್ವರನ್ನು ಗಡೀಪಾರು ಮಾಡಲು ಪಟ್ಟಿ ಮಾಡಲಾಗಿತ್ತು. ಅವರಲ್ಲಿ ಒಬ್ಬರನ್ನು ಗಡೀಪಾರು ಮಾಡಲಾಗಿದೆ. ಇನ್ನು ಮೂವರ ವಿರುದ್ಧ ಆದೇಶ ನಿರೀಕ್ಷಿಸ ಲಾಗುತ್ತಿದೆ ಎಂದು ತಿಳಿಸಿದರು.

ಆರೋಗ್ಯ ಇಲಾಖೆಯಲ್ಲಿ ಸುಧಾರಣೆ ಆರೋಗ್ಯ ಇಲಾಖೆ ಯಲ್ಲಿ ನಾನಾ ವರ್ಗದ ಸಿಬ್ಬಂದಿ ಕೊರತೆ ಇದೆ. ಇದರಿಂದ ಇರುವ ಸಿಬ್ಬಂದಿ ಮೇಲೆ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಮಾತ್ರವಲ್ಲದೇ ರೋಗಿಗಳ ಪಾಲನೆಗೂ ಇದರಿಂದ ತೊಡಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮುಂದಿನ 3 ತಿಂಗಳಲ್ಲಿ ಕ್ರಮವಹಿಸುತ್ತೇನೆ ಎಂದರು.

ಮಾಜಿ ರಾಯಭಾರಿ ಎ.ಮಾಧವನ್ ನಿಧನ

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 1956ರಲ್ಲಿ ಭಾರತದ ವಿದೇಶಾಂಗ ಸಚಿವಾಲಯದಲ್ಲಿ ಸೇವೆಗೆ ಸೇರಿದರು. ಫ್ರೆಂಚ್, ಜರ್ಮನ್ ಸೇರಿದಂತೆ ಹಲವು ವಿದೇಶಿ ಭಾಷೆಗಳ ಕಲಿತ್ತಿದ್ದ ಇವರು, 1991ರಲ್ಲಿ ಸೇವೆಯಿಂದ ನಿವೃತ್ತರಾದರು. ನಂತರ ದೆಹಲಿಯ ಇಂಡಿಯಾ ಇಂಟರ್‌ನ್ಯಾಷನಲ್ ಎಂಬ ಪ್ರತಿಷ್ಠಿತ ಸಂಸ್ಥೆಯಲ್ಲಿ ಮೂರು ವರ್ಷಗಳ ಕಾಲ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಬಳಿಕ ಮೈಸೂರಿನಲ್ಲಿ ನೆಲೆಸಿದ್ದರು. ಮಾಧವನ್ ಅವರ ಪತ್ನಿ ಗಿರಿಜಾ ಮಾಧವನ್ ಮೈಸೂರಿನವರಾಗಿದ್ದು, ಮೈಸೂರಿನ ಪರಂಪರೆ ಮತ್ತು ಸಾಂಸ್ಕೃತಿಕ ವಾತಾವರಣದ ಬಗ್ಗೆ ಅತೀವ ಪ್ರೀತಿ ಹೊಂದಿದ್ದ ಎ.ಮಾಧವನ್, ಮೈಸೂರಿನ ಯಾದವಗಿರಿಯಲ್ಲಿ ನೆಲೆಸಿದ್ದರು. ಓರ್ವ ಶಿಕ್ಷಕರ ಮೂಲಕ ಕನ್ನಡವನ್ನು ಸಹ ಕಲಿತಿದ್ದರು. ಅಮೆರಿಕದಲ್ಲಿರುವ ಪುತ್ರ ಅನಂತ್ ಎನ್.ಮಾಧವನ್, ಸೊಸೆ ಮತ್ತು ಮೊಮ್ಮಕ್ಕಳ ಆಗಮನದ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಗುವುದು. ಬಹುಶಃ ಮಾ.15ರಂದು ಅಂತ್ಯಕ್ರಿಯೆ ನಡೆಯಬಹುದು ಎಂದು ಮೃತರ ಪತ್ನಿ ಗಿರಿಜಾ ಮಾಧವನ್ ತಿಳಿಸಿದ್ದಾರೆ.

ಇಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ

ಮೇ 28ರಂದು ಕಾಮೆಡ್–ಕೆ ಯುಗೇಟ್, ಯುನಿ–ಗೇಜ್ ಪ್ರವೇಶ ಪರೀಕ್ಷೆ

ಮೈಸೂರು,ಮಾ.13(ಪಿಎಂ)– ರಾಜ್ಯದ 150 ಇಂಜಿನಿಯರಿಂಗ್ ಕಾಲೇಜು ಮತ್ತು ದೇಶದ 50ಕ್ಕೂ ಹೆಚ್ಚು ಪ್ರತಿಷ್ಠಿತ ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾನಿಲಯಗಳಲ್ಲಿ ಇಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕಾಗಿ ಕಾಮೆಡ್–ಕೆ ಯುಗೇಟ್ ಮತ್ತು ಯುನಿ–ಗೇಜ್ ಪ್ರವೇಶ ಪರೀಕ್ಷೆಯು ಮೇ 28ರಂದು ನಡೆಯಲಿದೆ ಎಂದು ಕಾಮೆಡ್–ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್.ಕುಮಾರ್ ತಿಳಿಸಿದರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಕಾಮೆಡ್ ಕರೇಸ್ ಇನ್ನೋವೇಷನ್ ಹಬ್‌ನಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಮೆಡ್–ಕೆ (ಕರ್ನಾಟಕದ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ) ಮೇ 28ರಂದು ಕಾಮೆಡ್–ಕೆ ಯುಗೇಟ್ (COMEDK UGET) ಮತ್ತು ಯುನಿ–ಗೇಜ್ (Uni-GAUGE) ಪ್ರವೇಶ ಪರೀಕ್ಷೆಯು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಹಾಗೂ ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ ಎಂದು ಹೇಳಿದರು.

ಕಾಮೆಡ್–ಕೆ ಯುಗೇಟ್ ಪರೀಕ್ಷೆ ಮೂಲಕ ಕರ್ನಾಟಕ ರಾಜ್ಯದ 150 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 22 ಸಾವಿರ ಸೀಟುಗಳನ್ನು ಹಂಚಿಕೆ ಮಾಡಲು ಅವಕಾಶವಿದೆ. ಕಾಮೇಡ್–ಕೆ ವ್ಯಾಪ್ತಿಯ ಕಾಲೇಜುಗಳಿಂದ ಶೇ.45ರಷ್ಟು ಸೀಟುಗಳನ್ನು ಸರ್ಕಾರಿ ಕೋಟಾಗೆ ಈಗಾಗಲೇ ಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಈ ಪರೀಕ್ಷೆಯಲ್ಲಿ ಯಾವುದೇ ರೀತಿ ಮೀಸಲಾತಿ ಇಲ್ಲ. ಕಾಮೆಡ್ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ರ‍್ಯಾಂಕ್ ಮತ್ತು ಅವರ ಆಯ್ಕೆ ಯನ್ನು ಆಧರಿಸಿ ಸದರಿ 22 ಸಾವಿರ ಸೀಟುಗಳು ಕೇಂದ್ರೀಕೃತ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಹಂಚಿಕೆಯಾಗಲಿವೆ ಎಂದು ವಿವರಿಸಿದರು.

ಎಜುಕೇಷನಲ್ ರೇಟಿಂಗ್ ಅಂಡ್ ಅಸೆಸ್‌ಮೆಂಟ್ ಫೌಂಡೇಷನ್ (ಎರಾ ಫೌಂಡೇಷನ್), ಕಳೆದ 5 ವರ್ಷಗಳಿಂದ ಯುನಿ ಗೇಜ್ ಪರೀಕ್ಷೆಯನ್ನು ಕಾಮೆಡ್–ಕೆ ಯುಗೇಟ್ ಪರೀಕ್ಷೆಯೊಂದಿಗೆ ಸಂಯೋಜಿಸಿದೆ. ಈ ಯುನಿ–ಗೇಜ್ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವ ಮೂಲಕ ಭಾರತದಲ್ಲಿರುವ 55 ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಇಂಜಿನಿಯರಿಂಗ್ (ಬಿಇ, ಬಿ.ಟೆಕ್) ಪ್ರವೇಶ ಪಡೆಯಬಹುದು. ಕಾಮೆಡ್–ಕೆ ಯುಗೇಟ್ ಮತ್ತು ಯುನಿ–ಗೇಜ್ ಪ್ರವೇಶ ಪರೀಕ್ಷೆಯು ಒಂದೇ ವಿಷಯಗಳನ್ನು ಒಳಗೊಂಡಿದ್ದು, ಒಂದೇ ಪರೀಕ್ಷೆ ಮೂಲಕ ಎರಡೂ ವಿಧದ ಸೀಟು ಪಡೆಯಲು ಅವಕಾಶ ಲಭ್ಯವಿದೆ. ಆದರೆ ಎರಡು ವಿಧದ ಪರೀಕ್ಷೆಗೆ ನಿಗದಿತ ಶುಲ್ಕ ಪಾವತಿಸಿರಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೈಸೂರಿನ 4 ಕೇಂದ್ರಗಳಲ್ಲಿ ಪರೀಕ್ಷೆ: ಕಂಪ್ಯೂಟರ್ ಬಳಸಿ ಆನ್‌ಲೈನ್‌ನಲ್ಲಿ ಪರೀಕ್ಷೆ ಬರೆಯುವ ಬಗ್ಗೆ ತಿಳುವಳಿಕೆ ಮೂಡಿಸಲು ಈಗಾಗಲೇ ನೋಂದಣಿ ಮಾಡಿದ ಅಭ್ಯರ್ಥಿಗಳಿಗೆ ಮಾಕ್ ಟೆಸ್ಟ್ (ಅಣಕು ಪರೀಕ್ಷೆ) ನಡೆಸಲಾಗಿದೆ. ದೇಶದಾದ್ಯಂತ 150ಕ್ಕೂ ಹೆಚ್ಚು ನಗರಗಳ 400 ಪರೀಕ್ಷಾ ಕೇಂದ್ರಗಳಲ್ಲಿ ಆನ್‌ಲೈನ್‌ನಲ್ಲಿ ಪರೀಕ್ಷೆ ನಡೆಸಲಾಗುವುದು. ಈ ಬಾರಿ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ನಿರೀಕ್ಷೆ ಹೊಂದಿದ್ದೇವೆ. ಮೈಸೂರಿನ ನಾಲ್ಕು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದರು.

ಎರಾ ಫೌಂಡೇಶನ್ ಸಿಇಓ ಪಿ.ಮುರಳೀಧರ್ ಮಾತನಾಡಿ, ಆಸಕ್ತ ಅಭ್ಯರ್ಥಿಗಳು www.comedk.org ಅಥವಾ www.unigauge.com ಜಾಲತಾಣದಲ್ಲಿ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಬಹುದು. ಫೆ.15ರಿಂದ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದ್ದು, ಏ.24ರವರೆಗೆ ನೋಂದಣಿಗೆ ಅವಕಾಶವಿದೆ. ಕಾಮೆಡ್–ಕೆ ಯುಗೇಟ್ ಪರೀಕ್ಷೆಗೆ 1,800 ರೂ., ಯುನಿ–ಗೇಜ್ ಪರೀಕ್ಷೆಗೆ 1,600 ರೂ. ಹಾಗೂ ಎರಡೂ ವಿಧದ ಪರೀಕ್ಷೆಗೆ 2,950 ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ ಎಂದು ತಿಳಿಸಿದರು.



ಮೈಸೂರಿನ ಕಾಮೆಡ್ ಕರೇಸ್ ಇನ್ನೋವೇಷನ್ ಹಬ್‌ನಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಎರಾ ಫೌಂಡೇಶನ್ ಸಿಇಓ ಪಿ.ಮುರಳಿಧರ್ ಮಾತನಾಡಿದರು. ಕಾಮೆಡ್–ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್.ಕುಮಾರ್ ಚಿತ್ರದಲ್ಲಿದ್ದಾರೆ.

ಕಾಮೆಡ್ ಕರೇಸ್ ಇನ್ನೋವೇಷನ್ ಹಬ್

ಕಾಮೆಡ್–ಕೆ ವತಿಯಿಂದ ಈ ವರ್ಷ ಮೈಸೂರು ಸೇರಿದಂತೆ ರಾಜ್ಯದಲ್ಲಿ 8 'ಕಾಮೆಡ್ ಕರೇಸ್' ಇನ್ನೋವೇಷನ್ ಹಬ್‌ಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ತರಬೇತಿ ಪಡೆಯುವ ಮೂಲಕ ವಿದ್ಯಾರ್ಥಿಗಳು ತಮ್ಮ ಕೌಶಲ್ಯ ವೃದ್ಧಿಸಿಕೊಂಡು ಭವಿಷ್ಯದ ವೃತ್ತಿ ಜೀವನಕ್ಕೆ ಸಿದ್ಧರಾಗಬಹುದು. ಬೆಂಗಳೂರಿನಲ್ಲಿ 4 ಹಬ್‌ಗಳು ಸೇರಿದಂತೆ ಮೈಸೂರು, ಕಲಬುರಗಿ, ಮಂಗಳೂರು ಮತ್ತು ಬೆಳಗಾವಿಯಲ್ಲಿ ತಲಾ ಒಂದೊಂದು ಹಬ್ ಕಾರ್ಯಾರಂಭ ಮಾಡಿವೆ. ಪ್ರತಿ ಹಬ್ ಅನ್ನು 5 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಅತ್ಯಾಧುನಿಕ ಕೇಂದ್ರವಾಗಿ ವಿನ್ಯಾಸಗೊಳಿಸಲಾಗಿದೆ. ಅಲ್ಲದೆ, ಉನ್ನತ ಮಟ್ಟದ ಸಾಧನಗಳೊಂದಿಗೆ ಸಜ್ಜುಗೊಳಿಸಲಾಗಿದೆ. ಈ ಹಬ್‌ಗಳಲ್ಲಿ ರ‍್ಯಾಪಿಡ್ ಪ್ರೊಟೊಟೈಪಿಂಗ್, ರೊಬೊಟಿಕ್ಸ್, ಕೃತಕ ಬುದ್ಧಿಮತ್ತೆ, ಮೆಷಿನ್ ಲರ್ನಿಂಗ್ ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ ಕುರಿತ ತರಬೇತಿಗಳನ್ನು ನೀಡಲಾಗುತ್ತದೆ.

-ಡಾ.ಎಸ್.ಕುಮಾರ್, ಕಾರ್ಯನಿರ್ವಾಹಕ ಕಾರ್ಯದರ್ಶಿಗಳು, ಕಾಮೆಡ್–ಕೆ.

ಸೇವಾ ಸಂಘ ಸಂಸ್ಥೆಗಳು ಅರ್ಹ ವಿಕಲಚೇತನರಿಗೆ ನೆರವಾಗಬೇಕು

ಮೈಸೂರು ಜಿಲ್ಲಾಧಿಕಾರಿ ಡಾ॥ ರಾಜೇಂದ್ರ ಸಲಹೆ



ಮೈಸೂರು,ಮಾ.13(ಎಂಟಿವೈ)– ಸಂಘ ಸಂಸ್ಥೆಗಳು ವಿಕಲಚೇತನರಿಗೆ ಅಗತ್ಯ ಸಲಕರಣೆ ನೀಡಬೇಕು ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ, ಲಯನ್ಸ್ ಕ್ಲಬ್ ಆಫ್ ಕಾಮಧೇನು ಹಾಗೂ ಮೈಸೂರು ಸ್ತ್ರೀಶಕ್ತಿ ಮಹಿಳಾ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮೂವರು ಹಿರಿಯ ವಿಕಲಚೇತನರಿಗೆ ಕೃತಕ ಕಾಲು ಹಾಗೂ ವ್ಹೀಲ್ ಛೇರ್ ವಿತರಿಸಿ ಮಾತನಾಡಿದ ಅವರು, ಲಯನ್ಸ್ ಕ್ಲಬ್ ಸೇರಿದಂತೆ ಇನ್ನಿತರ ಸೇವಾ ಸಂಘ–ಸಂಸ್ಥೆಗಳು ಸೇವಾ ಮನೋಭಾವದಿಂದ ಅರ್ಹ ವಿಕಲಚೇತನರು, ಬಡಕುಟುಂಬದ ಅಶಕ್ತರಿಗೆ ನೆರವು ನೀಡಬೇಕು ಎಂದರು.

ಮೈಸೂರು ಸ್ತ್ರೀಶಕ್ತಿ ಮಹಿಳಾ ವೇದಿಕೆಯ ಅಧ್ಯಕ್ಷೆ ಲಯನ್ಸ್ ಎಸ್.ಪ್ರಮೀಳಾ ಮಾತನಾಡಿ, ಲಯನ್ಸ್‌ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ ಸಂಸ್ಥೆ ಸೇರಿದಂತೆ ವಿವಿಧ ಲಯನ್ಸ್ ಕ್ಲಬ್‌ಗಳ ವತಿಯಿಂದ ಕೃತಕ ಕಾಲು ಸೇರಿದಂತೆ ಕೆಲವು ವಸ್ತುಗಳನ್ನು ಅರ್ಹರಿಗೆ ನಿರಂತರವಾಗಿ ವಿತರಿಸಲಾಗುತ್ತಿದೆ ಅರ್ಹರನ್ನು ಗುರುತಿಸಿ ಸೇವಾ ಕಾರ್ಯ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಲಯನ್ಸ್ ಪಾಸ್ಟ್ ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಡಾ.ನಾಗರಾಜ್ ವಿ.ಭೈರಿ, ಲಯನ್ಸ್ ಮಹಾವೀರ್ ಚಂದ್ ಬನ್ಸಾಲಿ, ಲಯನ್ಸ್‌ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ ಅಧ್ಯಕ್ಷ ಟಿ.ಸುರೇಶ್, ಜಿ.ಎನ್.ಉಮಾಶಂಕರ್, ಆಶಾ ಜೆ.ಮಂಜುನಾಥ್ ಹಾಗೂ ಇನ್ನಿತರರಿದ್ದರು.

ಬೇರೆ ರಾಜಕಾರಣಿಗಳ ಮಕ್ಕಳಿಗೂ ಟಿಕೆಟ್ ಇಲ್ಲ ಅಂದ್ರೆ ನನ್ನ ಮಗನಿಗೂ ಬೇಡ...!

- ಬಿಜೆಪಿಯಲ್ಲಿ ಅಸಮಾಧಾನಿತ ಸಚಿವ ಸೋಮಣ್ಣ ಕಿಡಿನುಡಿ
- ಎಲ್ಲಾ ಪಕ್ಷದಲ್ಲೂ ಕೆಲಸ ಮಾಡಿದ್ದೇನೆ; ಈಗ ಬಿಜೆಪಿಯಲ್ಲಿದ್ದೇನೆ



ಬೆಂಗಳೂರು, ಮಾ. 13 (ಕೆಎಂಶಿ)– ಬೇರೆ ರಾಜಕಾರಣಿ ಮಕ್ಕಳಿಗೆ ಟಿಕೆಟ್ ಇಲ್ಲ ಅನ್ನುವುದಾದರೆ ನಮಗೂ ಬೇಡ ಎಂದು ವಸತಿ ಸಚಿವ ಸೋಮಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವಕಾಶ, ಹಣೆಬರಹ ಇದ್ದರೆ ಮಗನಿಗೆ ಟಿಕೆಟ್ ಸಿಗುತ್ತದೆ. ನನಗೆ ಅಸಮಾಧಾನ ಇದೆ ಅಂತ ಎಲ್ಲಾದ್ರೂ ಹೇಳಿದ್ದೀನಾ ಎಂದು ಪ್ರಶ್ನಿಸಿದರು.

ನನ್ನ ಮಗನಿಗೆ ಟಿಕೆಟ್ ಕೇಳಿದ್ದೀನಾ, ನಾಲ್ಕು ಗೋಡೆ ಮಧ್ಯೆ ಯಾರಿಗೆ ಏನ್ ಹೇಳಬೇಕು ಹೇಳಿದ್ದೇನೆ. ಬೇರೆ ರಾಜಕಾರಣಿ ಮಕ್ಕಳು ರಾಜಕಾರಣದಲ್ಲಿ ಇರಬಹುದು. ಎಲ್ಲರಿಗೂ ಮಕ್ಕಳು, ಪ್ರೀತಿ ಅನ್ನೋದು ಇರುತ್ತೆ. ನನಗೆ ಇರುವ ನಿಯಮ ಎಲ್ಲರಿಗೂ ಅನ್ವಯಿಸಬೇಕಲ್ಲವೇ. ನಾನು ಯಾವತ್ತೂ ಮಕ್ಕಳನ್ನು ರಾಜಕಾರಣಕ್ಕೆ ತಂದವನಲ್ಲ. ರಾಜಕಾರಣಿಗಳಿಗೆ ಬದ್ಧತೆ ಇರಬೇಕು. ನನ್ನನ್ನು ಬೆಂಗಳೂರಿಗೆ ಮಾತ್ರ ಏಕೆ ಸೀಮಿತ ಮಾಡ್ತೀರಾ ಎಂದರು.

ನನಗೆ ಕೊಟ್ಟ ಜವಾಬ್ದಾರಿಗಳೆಲ್ಲವನ್ನೂ ನಿರ್ವಹಿಸಿದ್ದೇನೆ. ಉಪ ಚುನಾವಣೆಗಳ ಜವಾಬ್ದಾರಿ, ತುಮಕೂರು ಲೋಕಸಭೆಯಲ್ಲಿ ಗೆಲ್ಲಿಸಿಕೊಂಡು ಬಂದಿದ್ದೇನೆ. ನಾನು ಮೊದಲು ಕಾಂಗ್ರೆಸ್‌ನಲ್ಲೇ ಇದ್ದೆ, ಜನತಾ ಪಾರ್ಟಿ, ಜನತಾ ದಳದಲ್ಲೂ ಕೆಲಸ ಮಾಡಿದ್ದೇನೆ. ರಾಜಕಾರಣದಲ್ಲಿ ಇವೆಲ್ಲ ಇರುತ್ತವೆ ಎಂದು ತಿಳಿಸಿದರು.

ಕವಲುದಾರಿಗಳು ಇರುತ್ತವೆ. ನಾನೇನೂ ಸನ್ಯಾಸಿ ಅಲ್ಲ. ಬಿಜೆಪಿಯಲ್ಲಿ ಟಿಕೆಟ್ ಕೊಟ್ಟರೆ ನಿಂತ್ಕೊತೀನಿ, ಇಲ್ಲ ಅಂದ್ರೆ ಇಲ್ಲ. ಡಿಕೆ ಶಿವಕುಮಾರ್, ಸಿದ್ದರಾಮಯ್ಯ ನಾವೆಲ್ಲ ಸ್ನೇಹಿತರು. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ. ಅವರ ಕೆಲಸ ಅವರು ಮಾಡುತ್ತಾರೆ. ನನ್ನ ಕೆಲಸ ನಾನು ಮಾಡುತ್ತೇನೆ ಎಂದು ಹೇಳಿದರು.

ಅಭಿಮಾನಿಗಳು ಸಭೆ ಮಾಡಿದರೆ ನಾನು ಮಾಡಬೇಡ್ರಿ ಅಂತ ಹೇಳೋಕೆ ಆಗುತ್ತಾ. ರಾಜಕಾರಣ ಅಂದ್ರೆ ಬೆಂಗಳೂರಿಗೆ ಅಷ್ಟೆ ಸೀಮಿತ ಆಗಬೇಕಾ. ಚುನಾವಣೆ ಬಂದಾಗ ಇಡೀ ರಾಜ್ಯಕ್ಕೆ ಕರೆಸುತ್ತಾರೆ ಎಂದರು. ಪಕ್ಷ ಏನೂ ಹೇಳುತ್ತೋ ಅದನ್ನು ಮಾಡ್ತೀನಿ. ರಾಜಕಾರಣ ಇದು ಖುಷಿ ಇದ್ದೋ ಇಲ್ವೋ ಗೊತ್ತಿಲ್ಲ. ಅರ್ಹತೆ ಇರೋರಿಗೆ ಕೆಲವು ಸಲ ಕವಲು ದಾರಿ ಆಗುತ್ತವೆ.

ಅನೇಕ ತೊಡರುಗಳನ್ನೂ ನೋಡಿದ್ದೇವೆ. ಕೆಲಸ ಮಾಡೋವ್ರನ್ನ ಜನ ಗೌರವಿಸ್ತಾರೆ ಅಂದರೆ ಅದಕ್ಕೆ ಉದಾಹರಣೆ ಸೋಮಣ್ಣ. ಕಾಂಗ್ರೆಸ್‌ಗೆ ಬರ್ತಾರೆ ಅಂತ ಅವರ ಭಾವನೆಗಳಿವೆ. ಅವರಿಗೆಲ್ಲಾ ಒಳ್ಳೆಯದಾಗಲಿ ಎಂದರು.

ಬ್ರಾಹ್ಮಣ ಸಮುದಾಯದ ಹಿತಕಾಯುವವರಿಗೆ ನಮ್ಮ ಬೆಂಬಲ

ಮೈಸೂರು ಬ್ರಾಹ್ಮಣ ಯುವ ವೇದಿಕೆ ನಿರ್ಧಾರ



ಮೈಸೂರು, ಮಾ.13(ಎಂಕೆ)– ಬ್ರಾಹ್ಮಣ ಸಮುದಾಯದ ಅಭಿವೃದ್ಧಿ ಹಾಗೂ ಸಮಸ್ಯೆಗಳಿಗೆ ಸ್ಪಂದಿಸುವ ಎಂಎಲ್‌ಎ ಅಭ್ಯರ್ಥಿಗೆ ಪೂರ್ಣ ಬೆಂಬಲ ನೀಡಲು ಮೈಸೂರು ಬ್ರಾಹ್ಮಣ ಯುವ ವೇದಿಕೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೈಸೂರಿನ ಜಯನಗರದಲ್ಲಿರುವ ರಾಮಮಂದಿರದಲ್ಲಿ ಸೋಮವಾರ 'ವಿಪ್ರ ಯುವಕರಿಗೆ ಪ್ರಾತಿನಿಧ್ಯ ಮತ್ತು ಪ್ರಾಮುಖ್ಯತೆ' ಕುರಿತು ನಡೆದ ಸಭೆಯಲ್ಲಿ ಕೆ.ಆರ್.ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬ್ರಾಹ್ಮಣ ಸಮುದಾಯದ ಅಭಿವೃದ್ಧಿ, ಯುವಕರಿಗೆ ರಾಜಕೀಯ ಕ್ಷೇತ್ರದಲ್ಲಿ ಪ್ರೋತ್ಸಾಹ, ಸಮಸ್ಯೆಗೆ ಸ್ಪಂದನೆ ನೀಡುವ ಎಂಎಲ್‌ಎ ಅಭ್ಯರ್ಥಿಗಳು ಯಾವುದೇ ಪಕ್ಷವಾದರೂ ಅವರನ್ನು ಬೆಂಬಲಿಸಲು ನಿರ್ಧರಿಸಲಾಯಿತು.

ಕೆ.ಆರ್.ಕ್ಷೇತ್ರದ ಶಾಸಕರಾದ ಎಸ್.ಎ. ರಾಮದಾಸ್ ಅವರಿಗೆ ಟಿಕೆಟ್ ನೀಡದಂತೆ ಕೆಲ ಬ್ರಾಹ್ಮಣ ಮುಖಂಡರು ಹೇಳಿಕೆ ನೀಡಿರುವುದು ಸರಿಯಲ್ಲ. ಎಸ್.ಎ. ರಾಮದಾಸ್ ಅವರಾಗಲೀ ಅಥವಾ ಬ್ರಾಹ್ಮಣ ಸಮುದಾಯದಿಂದ ಯಾರೇ ಟಿಕೆಟ್ ತಂದರೂ ಅವರಿಗೆ ಪೂರ್ಣ ಬೆಂಬಲ ನೀಡಬೇಕು. ಚುನಾವಣೆಗೂ ಮುನ್ನವೇ ಸಮುದಾಯದ ಸಮಸ್ಯೆಗಳ ಬಗ್ಗೆ ಅಭ್ಯರ್ಥಿಗೆ ಮನವರಿಕೆ ಮಾಡಿಕೊಡಬೇಕು. ಬ್ರಾಹ್ಮಣ ಸಮುದಾಯದಲ್ಲಿನ ಯುವಕರಿಗೆ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ಮಾಡಿಕೊಡುವ ಮೂಲಕ ಬ್ರಾಹ್ಮಣ ಸಮುದಾಯದ ಸಂಘಟನೆಗೆ ಸಹಕಾರ ನೀಡಬೇಕು ಎಂಬುದು ಸೇರಿದಂತೆ ಹಲವು ವಿಚಾರಗಳ ಕುರಿತು ಚರ್ಚಿಸಲಾಯಿತು.

ಬ್ರಾಹ್ಮಣ ಯುವ ವೇದಿಕೆಯ ಅಧ್ಯಕ್ಷ ಮುಳ್ಳೂರು ಗುರುಪ್ರಸಾದ್, ಗೌರವಾಧ್ಯಕ್ಷ ಶ್ರೀಧರಮೂರ್ತಿ, ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ರಾಕೇಶ್ ಭಟ್, ವಿನಯ್ ಕಣಗಾಲ್, ನಿಶಾಂತ್, ಪ್ರದೀಪ್ ಪ್ರಸಾದ್, ಮಂಜು ಶಂಕರ್, ಶ್ರೀಕಾಂತ ಕಶ್ಯಪ್, ಅರುಣ್, ಕಡಕೋಳ ಜಗದೀಶ್, ಗಣೇಶ್ ಪ್ರಸಾದ್, ಹೆಚ್.ವಿ.ಭಾಸ್ಕರ್, ರಾಜಕುಮಾರ್, ರಾಜಗೋಪಾಲ್, ಹರೀಶ್ ಭಾರದ್ವಾಜ್, ಪ್ರಶಾಂತ್, ರಂಗನಾಥ್, ಪ್ರಸಾದ್, ಸುಚೀಂದ್ರ ಪುನೀತ್ ಕೊಡ್ಲೂರು, ವಿಘ್ನೇಶ್ವರ ಭಟ್, ಅರವಿಂದ್, ಮಂಜುನಾಥ್ ಮತ್ತಿತರರಿದ್ದರು.

ದ.ಆಫ್ರಿಕಾ: ಫೆಡ್ಡಿ ಚಂಡಮಾರುತದಿಂದ 44 ಮಂದಿ ಸಾವು; ಹಲವರು ನಾಪತ್ತೆ



ಬ್ಲಾಂಟೈರ್, ಮಲಾವಿ (ಎಪಿ): ದಕ್ಷಿಣ ಆಫ್ರಿಕಾವನ್ನು ಜರ್ಜರಿತಗೊಳಿಸಿರುವ ಫೆಡ್ಡಿ ಚಂಡಮಾರುತವು ಮಲಾವಿ ಮತ್ತು ಮೊಜಾಂಬಿಕ್‌ಗೆ ಶನಿವಾರ ರಾತ್ರಿ ಎರಡನೇ ಬಾರಿ ಅಪ್ಪಳಿಸಿದ್ದು, ಇಲ್ಲಿಯವರೆಗೆ ಕನಿಷ್ಠ 44 ಮಂದಿಯನ್ನು ಬಲಿ ತೆಗೆದುಕೊಂಡಿದೆ ಎಂದು ಎರಡೂ ದೇಶಗಳ ಅಧಿಕಾರಿಗಳು ಖಚಿತಪಡಿಸಿದ್ದಾರೆ ಮಲಾವಿಯ ವಾಣಿಜ್ಯ ನಗರ ಬ್ಲಾಂಟೈರ್‌ನಲ್ಲಿ ಕನಿಷ್ಠ 39 ಮಂದಿ ಮೃತಪಟ್ಟಿದ್ದು, ಅನೇಕ ಮಂದಿ ಗಾಯಗೊಂಡಿದ್ದಾರೆ ಮತ್ತು ಕಾಣೆಯಾಗಿದ್ದಾರೆ ಎಂದು ನಗರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೋಮವಾರ ಮಾಧ್ಯಮವರಿಗೆ ತಿಳಿಸಿದ್ದಾರೆ. ಜೊತೆಗೆ ಮೊಜಾಂಬಿಕ್‌ನಲ್ಲಿ ಶನಿವಾರದಿಂದ ಇಲ್ಲಿಯವರೆಗೆ ಐದು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮೈಸೂರಿನ ಸುಣ್ಣದಕೇರಿಯ ಸಮುದಾಯ ಭವನದಲ್ಲಿ ಸುವರ್ಣ ಬೆಳಕು ಫೌಂಡೇಶನ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ವೇಳೆ ರಘುರಾವ ವಾಜಪೇಯಿ, ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್, ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗಿರೀಶ್ ಕುಮಾರ್, ಮುಖಂಡರುಗಳಾದ ಲೋಕೇಶ್, ಮಹೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.13– ಹೂಟಗಳ್ಳಿ ಉಪವಿಭಾಗ ವ್ಯಾಪ್ತಿ ಕಾಮಗಾರಿ ನಿಮಿತ್ತ ಮಾ.14 ರಿಂದ 17 ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕರಕನಹಳ್ಳಿ ಹಾಗೂ ಸಮೃದ್ಧಿ ಬಡಾವಣೆ, ಯಲಚನಹಳ್ಳಿ, ಗುಂಗ್ರಾಲ್‌ಛತ್ರ ಹಾಗೂ ಗುಂಗ್ರಾಲ್ ಛತ್ರದ ಕೊಪ್ಪಲು, ದಡದಕಲ್ಲಹಳ್ಳಿ, ಹೊಸಕೋಟೆ ಗ್ರಾಮ ಹಾಗೂ ಪೆಟ್ರೋಲ್ ಬಂಕ್, ಇಟ್ಟಿಗೆ ಕಾರ್ಖಾನೆ, ಸಾಗರಕಟ್ಟೆ, ಯಾಚೇಗೌಡನ ಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ವರ್ಷಪೂರ್ತಿ ಪ್ರವಾಸಿಗರ ಸೆಳೆಯಲು ವಿಶೇಷ ಕಾರ್ಯಕ್ರಮ ಆಯೋಜನೆ

ವರ್ಷದ 52 ವಾರಾಂತ್ಯದಲ್ಲೂ ಪ್ರವಾಸೋದ್ಯಮ ಪೂರಕ ಕಾರ್ಯಕ್ರಮ, ಮನರಂಜನೆ



ಮೈಸೂರು,ಮಾ.13(ಎಂಟಿವೈ)– ಸಾಂಸ್ಕೃತಿಕ ನಗರಿ ಹಾಗೂ ಪಾರಂಪರಿಕ ನಗರವೂ ಆಗಿರುವ ಮೈಸೂರಿಗೆ ವರ್ಷವಿಡೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಸೆಳೆಯಲು ಸ್ಮಾರ್ಟ್ ಸಿಟಿ ಪರಿಕಲ್ಪನೆಯಂತೆ ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸಿಸ್ಟಮ್ ಜಾರಿಗೆ ತಂದು 52 ವಾರಾಂತ್ಯದ ದಿನದಲ್ಲಿ ಥೀಮ್ ಬೇಸ್ಡ್ ಕಾರ್ಯಕ್ರಮ ರೂಪಿಸಲು ಚಿಂತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಮೈಸೂರು ನಗರದಲ್ಲಿ ವಿಶ್ವವಿಖ್ಯಾತ ಅರಮನೆಯಿದೆ. ಏಷ್ಯಾದಲ್ಲೇ ಮುಂಚೂಣಿಯಲ್ಲಿರುವ ಮೃಗಾಲಯವಿದೆ. ಇಷ್ಟೆಲ್ಲಾ ಇದ್ದರೂ ಸಂಜೆ ವೇಳೆ ಮೈಸೂರಿಗೆ ಬರುವ ಪ್ರವಾಸಿಗರಿಗೆ ನಿರಾಸೆಯಾಗುತ್ತಿದೆ. ಈ ನಡುವೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ, ರೈಲ್ವೆ, ವಿಮಾನಯಾನ ಸೇವೆ ಸುಧಾರಿಸಿದೆ. ಹೀಗಾಗಿ ಮೈಸೂರಿನಲ್ಲಿ ಪ್ರವಾಸೋದ್ಯಮ ಚಟುವಟಿಕೆಗೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳನ್ನು ತರುವ ಅಗತ್ಯವಿದೆ ಎಂದರು.



ಮೈಸೂರಲ್ಲಿರುವ ಎಲ್ಲಾ ಪ್ರವಾಸಿ ತಾಣಗಳು ಸಂಜೆ 5.30ರ ನಂತರ ಬಂದ್ ಆಗುತ್ತಿದೆ ಸಂಜೆ ವೇಳೆ ಪ್ರವಾಸಿಗರಿಗೆ ಯಾವುದೇ ರೀತಿಯ ಮನರಂಜನೆ ಸಿಗುತ್ತಿಲ್ಲ. ಸ್ಮಾರ್ಟ್ ಸಿಟಿ ಪರಿಕಲ್ಪನೆಯಲ್ಲಿರುವಂತಹ ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸಿಸ್ಟಮ್ ಜಾರಿಗೆ ತಂದು ವರ್ಷದ ಎಲ್ಲಾ ವಾರಾಂತ್ಯಗಳಲ್ಲಿಯೂ ಕಾರ್ಯಕ್ರಮ ಆಯೋಜಿಸಲು ಪ್ರಯತ್ನಿಸಲಾಗುತ್ತಿದೆ. ರಕ್ಷಣೆ, ಟ್ರಾಫಿಕ್ ಕಂಟ್ರೋಲ್ ಹಾಗೂ ಇನ್ನಿತರ ವಿಷಯಗಳಲ್ಲಿ ಬದಲಾವಣೆಗಳನ್ನು ತಂದು ಪ್ರವಾಸೋದ್ಯಮ ಅಭಿವೃದ್ಧಿ ಮಾಡಲು ಉದ್ದೇಶಿಸಲಾಗಿದೆ. ಈ ವಿಶೇಷ ವ್ಯವಸ್ಥೆಯಿಂದ ರಾತ್ರಿ ವೇಳೆಯಲ್ಲಿಯೂ ನಮ್ಮ ವಿಶ್ವವಿಖ್ಯಾತ ಪಾರಂಪರಿಕ ತಾಣಗಳನ್ನು ಜಗತ್ತಿಗೆ ತೋರಿಸಲಾಗುವುದು. ಅದಕ್ಕಾಗಿ ಎಲ್ಲರಿಂದಲೂ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ. ಮೈಸೂರು ಅರಮನೆಯನ್ನು ವಾರಾಂತ್ಯಗಳಲ್ಲಾದರೂ ರಾತ್ರಿ 10 ಗಂಟೆವರೆಗೆ ಪ್ರವಾಸಿಗರ ವೀಕ್ಷಣೆಗೆ ಅವಕಾಶ ನೀಡಿದರೆ ಉತ್ತಮ. ಆ ನಿಟ್ಟಿನಲ್ಲೂ ಚಿಂತನೆ ನಡೆಸಲಾಗಿದೆ. 52 ವಾರಾಂತ್ಯಗಳಲ್ಲಿ ಥೀಮ್ ಬೇಸ್ಡ್ ಚಟುವಟಿಕೆಗಳನ್ನು ನಡೆಸಲು ಚಿಂತಿಸಲಾಗುತ್ತಿದೆ. ಚಿತ್ರಕಲೆ, ಸಿರಿಧಾನ್ಯ ಕೈಟ್ ಫೆಸ್ಟಿವಲ್‌ನಂತಹ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಪಾರಂಪರಿಕತೆ, ಕಲೆ, ವಾಸ್ತುಶಿಲ್ಪ ಶ್ರೀಮಂತಿಕೆಯನ್ನು ಉಳಿಸುವುದು ಮುಖ್ಯವಾಗಿದೆ. ಅದಕ್ಕಾಗಿ ಪಾರಂಪರಿಕ ಸಮಿತಿ ಸಭೆ ನಡೆಸಲಾಗುತ್ತಿದೆ. ತನ್ಮೂಲಕ ಮಾಹಿತಿ ಸಂಗ್ರಹಿಸಿ ಡಾಟಾ ಬೇಸ್ ಸಿದ್ಧಗೊಳಿಸಲಾಗುತ್ತಿದೆ ಸಾರ್ವಜನಿಕರು, ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ (ಪಿಪಿಪಿ)ಪಾರಂಪರಿಕತೆ ಉಳಿಸುವ ಪ್ರಯತ್ನ ನಡೆಯುತ್ತಿದೆ. ಪ್ರವಾಸೋದ್ಯಮಕ್ಕೆ ಒತ್ತು ನೀಡುವ ಉದ್ದೇಶದಿಂದ ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಓಪನ್ ಸ್ಟ್ರೀಟ್ ಫೆಸ್ಟಿವಲ್ ನಡೆಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಇಂತಹ ಚಟುವಟಿಕೆಗಳನ್ನು ಆಯೋಜಿಸಲು ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಇಂತಹ ಉಪಯುಕ್ತ ಕಾರ್ಯಕ್ರಮಗಳು ವಾರಾಂತ್ಯಗಳಲ್ಲಿ ನಿರಂತರವಾಗಿ ನಡೆಯುವಂತೆ ಶಾಶ್ವತ ಯೋಜನೆ ರೂಪಿಸಲಾಗುವುದು. ಈ ಕಾರ್ಯಕ್ರಮ ಒಂದೆರಡು ವರ್ಷ ನಡೆಸಿ, ಆ ನಂತರ ಸ್ಥಗಿತಗೊಳ್ಳುವಂತಾಗಬಾರದು ಎಂಬ ಉದ್ದೇಶದಿಂದ 32 ಇಲಾಖೆಗಳಿಗೂ ಒಂದೊಂದು ವಾರ ಕಾರ್ಯಕ್ರಮ ಆಯೋಜನೆ ಜವಾಬ್ದಾರಿ ನೀಡುವ ಆಲೋಚನೆ ನಮ್ಮದಾಗಿದೆ ಎಂದು ವಿವರಿಸಿದರು.

2023ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ: ಸಾರಾ ಭವಿಷ್ಯ

ಕೆ.ಆರ್.ನಗರದಲ್ಲಿ 843 ಜಿ+2 ಮನೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ

ಕೆ.ಆರ್.ನಗರ, ಮಾ.13– ಈ ಬಾರಿ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಅನ್ನು ಅಧಿಕಾರಕ್ಕೆ ತರಲು ಜನತೆ ತೀರ್ಮಾನಿಸಿದ್ದಾರೆ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. 2023ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ ಭವಿಷ್ಯ ನುಡಿದರು.



ಪಟ್ಟಣದ ಡಾ.ರಾಜ್‌ಕುಮಾರ್ ಬಡಾವಣೆಯಲ್ಲಿ ನಡೆದ 843 ಜಿ+2 ಮನೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಾನು ಜಿಲ್ಲಾಧಿಕಾರಿ ವಿರುದ್ಧ ಹೋರಾಟ ಮಾಡಿದ್ದರಿಂದ ಜಿಲ್ಲೆಯಲ್ಲಿ ಕೋವಿಡ್‌ನಿಂದ ಮೃತಪಟ್ಟ 1500 ಮಂದಿ ಕುಟುಂಬಕ್ಕೆ ಪರಿಹಾರ ಸಿಕ್ಕಿತ್ತು. ಇಲ್ಲಿವರೆಗೆ ನಾನು ನನ್ನ ಸ್ವಂತಕ್ಕೆ ಯಾರ ಬಳಿಯೂ ಕೈಚಾಚಿಲ್ಲ. ಅಂತಹ ಸ್ಥಿತಿ ನನಗೆ ಬಂದಿಲ್ಲ. ಒಂದು ವೇಳೆ ಅದನ್ನು ಸಾಬೀತುಪಡಿಸಿದರೆ ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆ ಎಂದರು.

ಚುನಾವಣೆ ವೇಳೆ ಕೆಲವರಿಗೆ ಟೀಕೆ ಮಾಡುವುದೇ ಕೆಲಸ. ಆದರೆ ನಾನು ಮಾಡುವ ಕಾರ್ಯ ಒಳ್ಳೆಯದಾದಾಗ ಹಳಿಯಾನ ಮಾಡುತ್ತಾರೆ. ಅವರ ನಾಯಕರಂತೆ ಅವರು ಇನ್ನು ಎಳಸು. ಇದನ್ನು ನಾನು ಹೇಳಿಲ್ಲ. ಬದಲಿಗೆ ಅವರ ರಾಜ್ಯಾಧ್ಯಕ್ಷರೇ ಹೇಳಿದ್ದಾರೆ ಎಂದು ಕಾಂಗ್ರೆಸ್ ಮುಖಂಡರಿಗೆ ಟಾಂಗ್ ನೀಡಿದರು.

ಮನೆ ಕೊಡಿಸುವುದಾಗಿ, ಬೇರೆ ಬಡಾವಣೆ ಸೇರಿದಂತೆ ಎಲ್ಲಿ ಬೇಕೋ ಅಲ್ಲಿ ಮನೆ ಕೊಡಿಸುತ್ತೇನೆ ಎಂದು ಹೇಳುವ ಮಧ್ಯವರ್ತಿಗಳು ಹಾಗೂ ಪುರಸಭೆ ಸದಸ್ಯರು, ಮುಖಂಡರ ಮಾತಿಗೆ ಮರುಳಾಗಿ ಹಣ ನೀಡಬೇಡಿ ಎಂದು ಫಲಾನುಭವಿಗಳಿಗೆ ಕಿವಿಮಾತು ಹೇಳಿದರು.

80 ವರ್ಷದ ಇತಿಹಾಸದಲ್ಲಿ ಪಟ್ಟಣಕ್ಕೆ 68.67 ಕೋಟಿ ಅನುದಾನ ತಂದಿರುವುದು ಇದೇ ಪ್ರಥಮ. ಇಂತಹ ಸಮಯದಲ್ಲಿ ಪ್ರೋತ್ಸಾಹಿಸುವ ಬದಲು ಟೀಕೆ ಮಾಡುತ್ತಾರೆ. ಅದಕ್ಕೆಲ್ಲ ಹೆದರುವ ಜಾಯಮಾನ ನನ್ನದಲ್ಲ ಎಂದು ಗುಡುಗಿದರು.

ನಾನು ಯಾರೋ ಒಬ್ಬರಿಗೆ ಕೆಲಸ ಕೊಡಿಸಲು ಸಾಧ್ಯವಿಲ್ಲ ಹಾಗೂ ಗುತ್ತಿಗೆ ನೀಡಲು ಆಗಿಲ್ಲ. ಆದರೆ ಎರಡೂ ತಾಲೂಕಿನ ಶಿಕ್ಷಣ, ಆರೋಗ್ಯ, ವಸತಿ, ರಸ್ತೆ, ವಿದ್ಯುತ್, ನೀರಾವರಿ ಸೇರಿದಂತೆ ಜನಸಾಮಾನ್ಯರಿಗೆ ಅನುಕೂಲವಾಗುವ ಅಭಿವೃದ್ಧಿ ಕಾರ್ಯ ಮಾಡಿರುವ ತೃಪ್ತಿ ಇದೆ ಎಂದರು. ಚುನಾವಣೆ ಘೋಷಣೆಯಾದಾಗ ನಾನು ರಾಜಕೀಯ ಮಾಡುತ್ತೇನೆ. ವಿರೋಧಿಗಳ ಹಾಗೇ ಅನುಕಂಪದ ಮತ ಗಿಟ್ಟಿಸಲು ಕಣ್ಣೀರು ಹಾಕಿ ಕಾಲು ಹಿಡಿದು ನಮ್ಮ ಕುಟುಂಬದ ಪ್ರಾಣ ಉಳಿಸಿ, ಮಾಂಗಲ್ಯ ಉಳಿಸಿ ಎಂದು ಬೇಡುವವನಲ್ಲ. ಚುನಾವಣೆಯಲ್ಲಿ ಅಭಿವೃದ್ಧಿಗಾಗಿ ಜನ ಸೇವೆಗಾಗಿ ಮತ ನೀಡಿ ಎಂದು ಕೇಳುತ್ತೇನೆ ಎಂದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪುರಸಭಾ ಮುಖ್ಯಾಧಿಕಾರಿ ಡಾ. ಜಯಣ್ಣ, ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಉಮೇಶ, ಸಮುದಾಯ ಸಂಘಟನಾಧಿಕಾರಿ ಡಾ.ಶಂಕರ್ ಮಾತನಾಡಿದರು. ವೇದಿಕೆಯಲ್ಲಿ ನಗರದ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಡಾ.ಮೊಹಬೂಬ್ ಖಾನ್, ಪುರಸಭಾ ಸದಸ್ಯರಾದ ಸಂತೋಷ್‌ಗೌಡ, ತೋಂಟದಾರ್ಯ, ಕೆ.ಎಲ್.ಜಗದೀಶ್, ಸರೋಜ, ಮಂಜುಳಾ, ನಾಮನಿರ್ದೇಶಿತ ನಂಜುಂಡ, ಜೆ.ಪಿ.ಮಂಜು, ರಂಗಸ್ವಾಮಿ, ಆಶ್ರಯ ಸಮಿತಿ ಸದಸ್ಯ ಸದಸ್ಯರಾದ ಮುಕ್ಕೋಟಿ, ಕೆ.ಆರ್.ಮಂಜು, ಮುಖಂಡರಾದ ಗಣೇಶ್, ಸೈಯಾದ್ ಅಸ್ಲಂ ಸೇರಿದಂತೆ ಇತರರಿದ್ದರು.

ಪಟ್ಟಣದ 4 ಕಡೆ 843 ಮನೆಗಳ ನಿರ್ಮಾಣಕ್ಕೆ ನಾನು ಪಟ್ಟಿರುವ ಶ್ರಮ ನನಗೆ ಮಾತ್ರ ಗೊತ್ತು ಎಂದ ಅವರು ಇದಕ್ಕಾಗಿ ನಾನು ಸಾಕಷ್ಟು ಬಾರಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಚಿವರನ್ನು ಭೇಟಿ ಮಾಡಿ ಇದನ್ನು ಕಾರ್ಯಗತಗೊಳಿಸಿದ್ದೇನೆ. 843 ಫಲಾನುಭವಿಗಳಿಗೆ ನಗರೋತ್ಥಾನ ಯೋಜನೆಯಡಿ 15 ಸಾವಿರ ಹಾಗೂ ವೈಯಕ್ತಿಕವಾಗಿ 10 ಸಾವಿರ ರೂಗಳನ್ನು ನೀಡುತ್ತೇನೆ. ಮುಂದಿನ ದಿನಗಳಲ್ಲಿ ಕುಮಾರಣ್ಣನ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಬ್ಯಾಂಕಿನಿಂದ ಸಾಲ ಪಡೆದ ಫಲಾನುಭವಿಗಳು ಕಟ್ಟಬೇಕಾದ 4 ಲಕ್ಷ ರೂಗಳನ್ನು ಸರ್ಕಾರದಿಂದಲೇ ಭರಿಸುವ ಪ್ರಯತ್ನ ಮಾಡುತ್ತೇನೆ.
–ಸಾ.ರಾ.ಮಹೇಶ್, ಶಾಸಕ.

ನಾಗದೇವತೆ, ಅರಳೀಕಟ್ಟೆ ಪ್ರಾಣ ಪ್ರತಿಷ್ಠಾಪನೆ



ಹುಣಸೂರು, ಮಾ.13– ಧಾರ್ಮಿಕ ವಿಧಿ ವಿಧಾನ, ಕಲೆ, ಸಂಸ್ಕೃತಿ ಮರೆಯಾಗುತ್ತಿರುವ ದಿನಗಳಲ್ಲಿ ಗ್ರಾಮಸ್ಥರು ನಾಗದೇವತೆ ಮೂರ್ತಿ ಪ್ರತಿಷ್ಠಾಪಿಸಿ ಧಾರ್ಮಿಕ ಕಾರ್ಯಗಳಿಗೆ ಮೆರುಗು ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಲ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ.ದೇವೇಗೌಡ ತಿಳಿಸಿದರು.

ತಾಲೂಕಿನ ಹನಗೋಡಿನ ಬಸವೇಶ್ವರ ದೇವಾಲಯದ ಆವರಣದಲ್ಲಿ ನಾಗದೇವತಾ ಹಾಗೂ ಅರಳೀಕಟ್ಟೆ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿ ನಂತರ ನಡೆದ ಧರ್ಮ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮಸ್ಥರು ಗ್ರಾಮದಲ್ಲಿ ಧಾರ್ಮಿಕ ಕಾರ್ಯ ಕೈಗೊಳ್ಳುವ ಮೂಲಕ ನಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಮುಂದಿನ ಯುವ ಪೀಳಿಗೆಗೆ ತಿಳಿಸುವ ಕಾರ್ಯ ಮಾಡಿದ್ದಾರೆ. ನಾವು ತಾಲೂಕಿನಲ್ಲಿ ಹತ್ತು ಹಲವು ದೇವಾಲಯಗಳನ್ನು ನಿರ್ಮಿಸಿದ್ದು ಧಾರ್ಮಿಕ ಕಾರ್ಯ ನಡೆಯಲು ನಮ್ಮ ಕುಟುಂಬ ಸದಾ ಸಿದ್ಧ ಎಂದರು.

ಸಮಾರಂಭದಲ್ಲಿ ತಾಪಂ ಮಾಜಿ ಸದಸ್ಯ ಹೆಚ್.ಆರ್.ರಮೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಸುಭಾಷ್, ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ರಾಮಚಂದ್ರು, ಗ್ರಾಪಂ ಮಾಜಿ ಅಧ್ಯಕ್ಷೆ ಮಂಜುಳಾ, ಶಾಂತಕುಮಾರಿ, ರಾಣಿರುದ್ರಪ್ಪ, ರಾಜೇಗೌಡ, ಕುಮಾರ್, ಪುಟ್ಟಸ್ವಾಮಪ್ಪ, ಸೋಮಪ್ಪ, ಸಂದೀಪ್ ಮತ್ತಿತರರಿದ್ದರು. ಇದಕ್ಕೂ ಮುನ್ನಾ ಭಾನುವಾರ ಬೆಳಗ್ಗೆ 7.30ಕ್ಕೆ ನಾಗದೇವತೆ ಮಹಾಮೂರ್ತಿ ಹಾಗೂ ಎಲ್ಲ ವೃಕ್ಷಗಳಿಗೆ ಮಹಾ ರುದ್ರಾಭಿಷೇಕ ನಡೆಯಿತು. ನಂತರ ಮಾದಳ್ಳಿಮಠದ ಪೀಠಾಧ್ಯಕ್ಷ ಸಾಂಬಸದಾಶಿವ ಸ್ವಾಮೀಜಿ ಅಮೃತ ಹಸ್ತದಿಂದ ನಾಗದೇವತೆ ಮಹಾಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ನೆರವೇರಿತು. ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ನಡೆಯಿತು.

ಕಾನೂನಿನಲ್ಲಿರುವ ಹಕ್ಕುಗಳನ್ನು ಸದುಪಯೋಗಪಡಿಸಿಕೊಳ್ಳಿ



ತಿ.ನರಸೀಪುರ, ಮಾ.13– ಕಾನೂನಿನಲ್ಲಿರುವ ಹಕ್ಕುಗಳ ಬಗ್ಗೆ ತಿಳಿದು ಅದನ್ನು ಸದುಪಯೋಗಪಡಿಸಿಕೊಳ್ಳುವಂತೆ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಚೇತನ್ ಅನ್ನದಾನಿ ಮಂಜುನಾಥ್ ಮಹಿಳೆಯರಿಗೆ ಕರೆ ನೀಡಿದರು.

ತಾಲೂಕಿನ ಇಂಡವಾಳು ಗ್ರಾಮದ ಅಂಬೇಡ್ಕರ್ ಭವನದಲ್ಲಿ ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತಾಪಂ ಹಾಗೂ ಹೊಸಕೋಟೆ ಗ್ರಾಪಂ ಸಹಯೋಗದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಮಹಿಳೆಯರ ಹಕ್ಕುಗಳ ಕುರಿತು ಕಾನೂನು ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನ ಪ್ರತಿಯೊಬ್ಬ ಪ್ರಜೆಗೂ ಹಲವು ಮೂಲಭೂತ ಹಕ್ಕುಗಳನ್ನು ನೀಡಿದೆ. ಗರ್ಭದಲ್ಲಿರುವ ಭ್ರೂಣ ಹತ್ಯೆ ಮಾಡಬಾರದೆಂಬ ಕಾನೂನಿನಿಂದ ಹಿಡಿದು ಮುಪ್ಪಿನ ತನಕ, ನಮ್ಮನ್ನು ಮಕ್ಕಳು ನೋಡಿಕೊಳ್ಳುತ್ತಿಲ್ಲ ಎಂದಾಗ ಅವರ ರಕ್ಷಣೆಗೂ ಹಕ್ಕುಗಳಿವೆ. ಆ ಹಕ್ಕುಗಳ ಸಂರಕ್ಷಣೆಯಾಗಬೇಕಾದರೆ ನಮಗೆ ಅದರ ಬಗ್ಗೆ ಅರಿವಿರಬೇಕು. ಕಾನೂನಿನ ಬಗ್ಗೆ ನಮಗೆ ತಿಳುವಳಿಕೆ ಇದ್ದಾಗ ಮಾತ್ರ ಸೌಲಭ್ಯ ಪಡೆಯಲು ಸಾಧ್ಯ ಎಂದರು.

ತಾಪಂ ಇಓ ಸಿ.ಕೃಷ್ಣ ಮಾತನಾಡಿ, ಪುರುಷರಷ್ಟೇ ಮಹಿಳೆಯರಿಗೂ ಸಮಾನ ಅವಕಾಶಗಳಿವೆ. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ತಮ್ಮ ಹಾಗೂ ತಮ್ಮ ಕುಟುಂಬದ ಶ್ರೇಯೋಭಿವೃದ್ಧಿಗೆ ಪೂರಕ ಜ್ಞಾನ ಪಡೆಯುವಂತೆ ಸಲಹೆ ನೀಡಿದರು. ವಕೀಲೆ ಬಿ.ಸುಮಿತ್ರ ಕೌಟುಂಬಿಕ ಕಾನೂನು, ಮಹಿಳೆಯರ ಹಕ್ಕುಗಳು ಮತ್ತು ಆಸ್ತಿ, ನಾಗರಿಕ ಹಾಗೂ ಅಪರಾಧ ಕಾನೂನುಗಳ ಬಗ್ಗೆ ವಿಷಯ ಮಂಡಿಸಿದರು. ಮತ್ತೋರ್ವ ವಕೀಲ ಶೋಭಾ, ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ, ಕಾರ್ಮಿಕರ ಕಾನೂನುಗಳು, ಆರೋಗ್ಯದ ಹಕ್ಕುಗಳು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಿಳಿಸಿದರು.

ಸಹಾಯಕ ಸರ್ಕಾರಿ ಅಭಿಯೋಜಕಿ ಸುಮಿಯಾ ಭಾನು, ವಕೀಲರ ಸಂಘದ ಕೆ.ಜಿ. ಪಾಲಾಕ್ಷಮೂರ್ತಿ, ಖಜಾಂಚಿ ಕಿರಣ್, ಬಸವಣ್ಣ, ಶಿಶು ಅಭಿವೃದ್ಧಿ ಅಧಿಕಾರಿ ಕೆ.ಎಸ್.ಭವ್ಯಶ್ರೀ, ಹೊಸಕೋಟೆ ಗ್ರಾಪಂ ಅಧ್ಯಕ್ಷ ಕೆಂಪಯ್ಯನಹುಂಡಿ ಆನಂದ್, ಪಿಡಿಓ ವಿ.ಎನ್.ಪೂರ್ಣಿಮಾ ಸೇರಿದಂತೆ ಮಹಿಳೆಯರು, ಆಶಾ ಕಾರ್ಯಕರ್ತರು ಹಾಜರಿದ್ದರು.

ಮತದಾರರಿಗೆ ಕೊಟ್ಟ ಮಾತಿನಂತೆ ನಡೆದಿದ್ದೇನೆ: ಹರ್ಷವರ್ಧನ್

ನಂಜನಗೂಡು/ಮಲ್ಲುಂಡಿ, ಮಾ.13– ಕ್ಷೇತ್ರದ ಪ್ರತಿಯೊಂದು ಗ್ರಾಮಗಳಲ್ಲೂ ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ನಾನು ಮತದಾರರಿಗೆ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇನೆಂಬ ಆತ್ಮತೃಪ್ತಿ ಇದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.



ತಾಲೂಕಿನ ನಲ್ಲಿತಾಳಪುರದಲ್ಲಿ 22 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಗ್ರಾಪಂ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಸಂಸದ ವಿ.ಶ್ರೀನಿವಾಸ ಪ್ರಸಾದ್ ನಂಜನಗೂಡು ಕ್ಷೇತ್ರವನ್ನು ಶಾಂತಿಯ ಗೂಡಾಗಿಸಬೇಕು. ಅಭಿವೃದ್ಧಿ ಕೆಲಸ ಮಾಡಿ ಮಾದರಿ ಕ್ಷೇತ್ರವನ್ನಾಗಿಸಬೇಕೆಂದು 2 ಜವಾಬ್ದಾರಿ ನೀಡಿದ್ದರು. ಅದರಂತೆ ನಾನು ಒಂಟಿಸಲಗದ ರೀತಿ ಹೋರಾಟ ನಡೆಸಿ 700 ಕೋಟಿಗೂ ಹೆಚ್ಚಿನ ಅನುದಾನ ತಂದು ಪ್ರತಿಯೊಂದು ಗ್ರಾಮದಲ್ಲೂ ಅಭಿವೃದ್ಧಿ ಕೆಲಸ ಮಾಡಿದ್ದೇನೆ. 35 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನುಗು ಏತ ನೀರಾವರಿ ಯೋಜನೆಯ ಕಾಮಗಾರಿ ಶೇ.75 ರಷ್ಟು ಮುಗಿದಿದ್ದು, ಈ ವರ್ಷದ ಅಕ್ಟೋಬರ್ ವೇಳೆಗೆ ಪೂರ್ಣಗೊಂಡು 28 ಸಾವಿರ ರೈತರಿಗೆ ನೆರವಾಗಲಿದೆ. ಅಲ್ಲದೇ ಶ್ರೀಕಂಠೇಶ್ವರ ದೇವಾಲಯದ ಬೆಳ್ಳಿರಥ ನಿರ್ಮಾಣ ಕಾಮಗಾರಿಯೂ ಮುಗಿಯಲಿದೆ. ಇನ್ನು ಕೌಲಂದೆ ಭಾಗದ ಕುಡಿಯುವ ನೀರಿನ ಪೂರೈಕೆಗಾಗಿ 8 ಕೋಟಿ ನೀಡಲಾಗಿದೆ. ಹೆಡಿಯಾಲ ಭಾಗದ ಕೆರೆ ತುಂಬಿಸುವ ಯೋಜನೆಗೂ ಅನುದಾನ ಬಿಡುಗಡೆಯಾಗಿದೆ. ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಕೊಟ್ಟ ಮಾತನ್ನು ನೆರವೇರಿಸಿರುವ ಆತ್ಮತೃಪ್ತಿ ಇದೆ ಎಂದರು.

ಇದೇ ವೇಳೆ ತಾಲೂಕಿನ ಕಸುವಿನಹಳ್ಳಿಯಲ್ಲಿ 24 ಲಕ್ಷ ವೆಚ್ಚದ ಬಸವ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಹಾಗೂ ಕಂದೇಗಾಲ ಗ್ರಾಮದಲ್ಲಿ ನೂತನ ಹಾಲಿನ ಡೈರಿ ಕಟ್ಟಡವನ್ನು ಶಾಸಕ ಬಿ.ಹರ್ಷವರ್ಧನ್ ಲೋಕಾರ್ಪಣೆಗೊಳಿಸಿದರು.

ಈ ವೇಳೆ ತಾಪಂ ಇಓ ಹೆಚ್.ಜಿ. ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ನಲ್ಲಿತಾಳಪುರ ಗ್ರಾಪಂ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ದೇವಮ್ಮ, ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಪ್ರಕಾಶ್, ಕೆ.ಕೆ.ಮಲ್ಲೇಶ್, ನಾಗೇಗೌಡ, ರಾಮಲಿಂಗಸ್ವಾಮಿ, ನಂಜುಂಡಸ್ವಾಮಿ, ಮಣಿಯಮ್ಮ, ಶಶಿಕಲಾ, ಕಸುವಿನಹಳ್ಳಿ ಗ್ರಾಪಂ ಅಧ್ಯಕ್ಷ ಸ್ವಾಮಿ, ಮುಖಂಡರಾದ ಗಿರೀಶ್, ಮಂಜುನಾಥ್, ನವೀನ್‌ರಾಜ್, ಪುಟ್ಟಸ್ವಾಮಿ, ಚಂದ್ರು, ಮಲ್ಲಿಕಾರ್ಜುನ್ ಗುರುಪಾದು ಸೇರಿದಂತೆ ಇತರರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ

ಹೆಚ್.ಡಿ.ಕೋಟೆ, ಮಾ.13– ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.



ಪಟ್ಟಣದ ಸರ್ಕಾರಿ ಅತಿಥಿ ಗೃಹದ ಬಳಿ ಜವಾಯಿಸಿದ ರೈತ ಮುಖಂಡರು ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಮುಖಂಡರು ದರಖಾಸ್ತು ಮಂಜೂರಾತಿಗೆ ಅರ್ಜಿ ಸಲ್ಲಿಸಿ 4 ದಶಕ ಕಳೆದರೂ ಅರ್ಹರಿಗೆ ಸಾಗುವಳಿ ಸಿಕ್ಕಿಲ್ಲ. ಕಳೆದ ವರ್ಷ ಬಿದ್ದ ಭಾರೀ ಮಳೆಗೆ ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿ ಸಾವಿರಾರು ಮನೆಗಳು ಕುಸಿದು ಬಿದ್ದರೂ ತಾಲೂಕು ಆಡಳಿತ ಇನ್ನೂ ಪರಿಹಾರ ನೀಡಿಲ್ಲ. ರೈತರ ಜಮೀನಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗದ ಕಾರಣ ರೈತರು ಬೆಳೆ ಬೆಳೆಯಲು ಸಾಧ್ಯವಾಗದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಡಂಚಿನಲ್ಲಿ ಬೆಳೆದ ಬೆಳೆಗಳು ವನ್ಯಪ್ರಾಣಿಗಳ ಪಾಲಾಗುತ್ತಿದ್ದು, ಅದನ್ನು ತಡೆಯುವಲ್ಲಿ ವಿಫಲವಾಗಿರುವುದು ಸೇರಿದಂತೆ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿದರು.

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ತಾಲೂಕಿನಲ್ಲಿ 3 ಜಲಾಶಯ, ಕೆರೆಗಳು, ಏತ ನೀರಾವರಿ ಇದ್ದರೂ ರೈತರ ಸಮಸ್ಯೆ ಬಗೆಹರಿದಿಲ್ಲ. ನಮ್ಮ ಹಕ್ಕುಗಳನ್ನು ಪಡೆಯಲು 4 ದಶಕಗಳಿಂದ ಹೋರಾಟ ಮಾಡಿಕೊಂಡೇ ಬಂದಿದ್ದೇವೆ. ನಮ್ಮನ್ನು ಆಳುವ ಸರ್ಕಾರ ನಾವು ಕೇಳದೆ ಯಾವುದೇ ಸೌಲಭ್ಯ ನೀಡಿಲ್ಲ. ಹೀಗಾಗಿ ಹಲವು ಸಮಸ್ಯೆಗಳಿಗೆ ಹೋರಾಟದ ಮೂಲಕವೇ ಪರಿಹಾರ ಕಂಡುಕೊಂಡಿದ್ದೇವೆ. ಇಂದು ಅರಿಶಿನ ಬೆಳೆದ ರೈತ ಬೆಲೆ ಕುಸಿತದಿಂದ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾನೆ. ಹಾಗಾಗಿ ರೈತನ ಕಾಪಾಡುವ ಹೊಣೆ ಸರ್ಕಾರದ್ದು ಎಂದರು.

ಸರ್ಕಾರಿ ಕಚೇರಿಗಳಲ್ಲಿ ಲಂಚ ನೀಡದಿದ್ದರೇ ಕೆಲಸ ಕಾರ್ಯಗಳು ಆಗುವುದಿಲ್ಲ. ಇದಕ್ಕೆ ಕಡಿವಾಣ ಹಾಕದಿದ್ದರೇ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಮಹದೇವನಾಯಕ, ಟೌನ್ ಅಧ್ಯಕ್ಷ ಪ್ರಸಾದ್, ಜೆ.ಕೆ.ರವಿಕುಮಾರ್, ಜವರಯ್ಯ, ಬಸವರಾಜು, ಶಿವ ಕುಮಾರ್ ಆರಾಧ್ಯ, ಸಿಂಗೇಗೌಡ, ಬೋರೇಗೌಡ, ಗಣೇಶ, ಮಹಾಲಿಂಗು, ಬಸವರಾಜು, ಚೆನ್ನನಾಯಕ, ಸಿದ್ದರಾಮೇಗೌಡ, ಮಹೇಂದ್ರ, ಕೋಟೆಗೌಡ, ರವಿಚಂದ್ರ, ದೇವಮ್ಮ, ನೇತ್ರಾವತಿ, ಲಿಂಗರಾಜು, ದೇವರಾಜ್, ಕರಿಗೌಡ, ಗುರುಸ್ವಾಮಿ, ಟಿ.ಮರಂಕಯ್ಯ, ವಿಜೇಂದ್ರ, ಚಿಕ್ಕಣ್ಣ, ಸಿದ್ದಪ್ಪ, ಪ್ರಕಾಶ್, ಪ್ರಭಾಕರ್, ಸ್ವಾಮಿಗೌಡ, ಮಲ್ಲೇಶ ಇದ್ದರು.

ತೆರಣಿಮುಂಟಿಯಲ್ಲಿ ಧ್ರುವಗೆ ಶ್ರದ್ಧಾಂಜಲಿ



ಸರಗೂರು, ಮಾ.13– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರಿಗೆ ತಾಲೂಕಿನ ಕಿತ್ತೂರು ತೆರಣಿ ಮುಂಟಿ ಗ್ರಾಮಸ್ಥರು ಶ್ರದ್ಧಾಂಜಲಿ ಸಲ್ಲಿಸಿದರು.

ಗ್ರಾಮದ ಮುಖಂಡ ಕೆ.ವಿ.ಸೀತಾರಾಂ ಮಾತನಾಡಿ, ಧ್ರುವನಾರಾಯಣ್ ಅವರು ಇಂದಿನ ಯುವ ಪೀಳಿಗೆಗೆ ಆದರ್ಶವಾಗಿದ್ದರು. ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಜನರ ನಾಡಿಮಿಡಿತವಾಗಿದ್ದ ಅವರು ಹಲವು ವರ್ಷಗಳಿಂದ ನೆನೆಗುದ್ದಿಗೆ ಬಿದ್ದಿದ್ದ ಕಿತ್ತೂರು ತೆರಣಿ ಮುಂಟಿ ರಸ್ತೆ ಮಾಡಿಸಿಕೊಟ್ಟರು. ಇವರ ಅಭಿವೃದ್ಧಿ ಕೆಲಸಗಳನ್ನು ನಾವು ಎಂದಿಗೂ ಮರೆಯುವಂತಿಲ್ಲ. ನೆಚ್ಚಿನ ನಾಯಕನ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸಿ ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಅರ್ಪಿಸಿದರು.

ಈ ವೇಳೆ ಗ್ರಾಮದ ನಾಡಗೌಡ ಕೆ.ಬಿ.ಮಾದಪ್ಪ, ಗ್ರಾಪಂಚಾಯಿತಿ ಸದಸ್ಯರಾದ ತಿಮ್ಮಪ್ಪ, ಕೆ.ಎಂ.ಸತೀಶ್, ಮುಖಂಡರಾದ ಕರಿಮಲ್ಲಯ್ಯ, ಗೋಪಾಲ ನಾಯಕ, ಸುರೇಶ್‌ಶೆಟ್ಟಿ, ಉಮ್ಮರ್, ಡೈರಿ ಸಿಇಓ ಸುಮಿತಾ, ಮಹದೇವಮ್ಮ, ಗೌರಮ್ಮ, ಗ್ರಾಮಸ್ಥರು ಸೇರಿದಂತೆ ಮಹಿಳಾ ಸದಸ್ಯರು ಭಾಗವಹಿಸಿದ್ದರು.

ಕ್ಷೇತ್ರದ ಅಭಿವೃದ್ಧಿ ವಿಚಾರ ಸಾರ್ವತ್ರಿಕವಾದದು

ಯಾರ ವೈಯಕ್ತಿಕ ವಿಚಾರವಲ್ಲ: ಶಾಸಕ ಎಂ.ಅಶ್ವಿನ್ ಕುಮಾರ್, ಮಾ.19ರ ಪಂಚರತ್ನ ಯಾತ್ರೆ ಯಶಸ್ವಿಗೆ ಮನವಿ

ತಿ.ನರಸೀಪುರ, ಮಾ.13– ಕ್ಷೇತ್ರದ ಅಭಿವೃದ್ಧಿಗೆ ಬಳಸುವ ಹಣ ಯಾರೂ ತಮ್ಮ ಸ್ವಂತ ಮನೆಯಿಂದ ತಂದಿಲ್ಲ. ಬದಲಾಗಿ ಅದು ಸಾರ್ವಜನಿಕರ ತೆರಿಗೆ ಹಣ. ಹಾಗಾಗಿ ಕ್ಷೇತ್ರದ ಅಭಿವೃದ್ಧಿ ವಿಚಾರ ಸಾರ್ವತ್ರಿಕವಾದದು. ಇದು ಯಾರ ವೈಯಕ್ತಿಕ ವಿಷಯವಲ್ಲ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.



ಬನ್ನೂರಿನ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ನಡೆದ ಪಂಚರತ್ನ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕೆಲವರು ಕ್ಷೇತ್ರಕ್ಕೆ ತಂದಿರುವ ಅನುದಾನದ ಬಗ್ಗೆ ಪದೇ ಪದೇ ಚರ್ಚಿಸುತ್ತಿದ್ದು, ಕ್ಷೇತ್ರದ ಅಭಿವೃದ್ಧಿಗೆ ಅವರು ತಮ್ಮ ಸ್ವಂತ ಹಣ ತಂದು ಖರ್ಚು ಮಾಡಿಲ್ಲ. ಪ್ರತಿಯೊಬ್ಬ ಶಾಸಕನು ಸಾರ್ವಜನಿಕರ ತೆರಿಗೆ ಹಣವನ್ನು ಅನುದಾನದ ರೂಪದಲ್ಲಿ ತಂದು ಅಭಿವೃದ್ಧಿ ಮಾಡುತ್ತಾನೆ. ನಾನು ತಂದಿರುವ ಅನುದಾನದ ಬಗ್ಗೆ ನನಗೆ ಮತ್ತು ಸಾರ್ವಜನಿಕರಿಗೆ ತೃಪ್ತಿಯಿದೆ. ಈ ಬಗ್ಗೆ ಯಾವುದೇ ಪಕ್ಷದ ವ್ಯಕ್ತಿಗಳನ್ನು ಮೆಚ್ಚಿಸುವ ಅಗತ್ಯತೆ ನನಗೆ ಇಲ್ಲ ಎಂದರು.

ಬನ್ನೂರು ಭಾಗದಲ್ಲಿ ಜೆಡಿಎಸ್ ಪ್ರಾಬಲ್ಯ ಕುಂದಿದೆ ಎಂದು ಇತರೆ ಪಕ್ಷದ ನಾಯಕರು ಬೊಬ್ಬೆ ಹೊಡೆಯುತ್ತಿದ್ದು, ಇಂದಿನ ಸಭೆ ಅವರ ಆರೋಪಗಳಿಗೆ ಪ್ರತ್ಯುತ್ತರ ನೀಡಿದೆ. ಅಲ್ಲದೇ ಕ್ಷೇತ್ರದ ಎಲ್ಲಾ ಜನತೆಯ ಆಶೀರ್ವಾದ ಜೆಡಿಎಸ್ ಮೇಲಿದೆ ಎಂದರು.

ಕ್ಷೇತ್ರದಲ್ಲಿ ಮಾ.19ರಂದು ನಡೆಯುವ ಪಂಚರತ್ನ ಯಾತ್ರೆಯಲ್ಲಿ ಜೆಡಿಎಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರೈತಬಂಧು ಕುಮಾರಣ್ಣನವರಿಗೆ ಸ್ವಾಗತ ಕೋರಬೇಕು. ಅಲ್ಲದೆ, ಅಂದು ಸೇರುವ ಜನಸಾಗರ ರಾಜ್ಯ ಮತ್ತು ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷವನ್ನು ಗೆಲ್ಲಿಸುವ ವಾಗ್ದಾನವನ್ನು ಅವರಿಗೆ ನೀಡಬೇಕಿದೆ ಎಂದರು. ಪಂಚರತ್ನ ಯಾತ್ರೆ ಮಡವಾಡಿಯಿಂದ ಆರಂಭಗೊಂಡು ತಲಕಾಡು, ಹೊಳೆಸಾಲು, ಹೆಮ್ಮಿಗೆ ಮಾದಾಪುರ, ಮೂಗೂರು, ಕುರುಬೂರು, ತಿ.ನರಸೀಪುರ, ಸೋಸಲೆ, ಸೋಮನಾಥಪುರ ಮಾರ್ಗವಾಗಿ ಬನ್ನೂರು ತಲುಪಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಫುಟ್‌ಬಾಲ್ ಮೈದಾನದಲ್ಲಿ ಸಮಾರೋಪಗೊಳ್ಳಲಿದೆ. ಅಂದು ಬೃಹತ್ ಸಭೆಯನ್ನುದ್ದೇಶಿಸಿ ಕುಮಾರಣ್ಣ ಮಾತನಾಡಲಿದ್ದಾರೆ ಎಂದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ರಾಮಸ್ವಾಮಿ ಮಾತನಾಡಿ, ಜೆಡಿಎಸ್‌ಗೆ ಕರ್ನಾಟಕದ ಜನತೆಯ ದುಃಖ ದುಮ್ಮಾನಗಳ ಬಗ್ಗೆ ಅರಿವಿದೆ. ಕುಮಾರಸ್ವಾಮಿಯವರು ರೈತರ ಸಾಲಮನ್ನಾ ಮಾಡಿದ್ದಲ್ಲದೆ ಈಗ ಬಹು ನಿರೀಕ್ಷಿತ ಪಂಚರತ್ನ ಯೋಜನೆಯನ್ನು ಜಾರಿಗೆ ತರುವ ಮಹದಾಸೆ ಹೊಂದಿದ್ದಾರೆ. ರಾಜ್ಯದ ಜನತೆ ಅವರ ಆಕಾಂಕ್ಷೆಗೆ ನೀರೆರೆಯಬೇಕು. ಆಗ ಮಾತ್ರ ಕರ್ನಾಟಕ ಕಲ್ಯಾಣ ರಾಜ್ಯ ಆಗಲಿದೆ ಎಂದರು.

ಸಭೆಯಲ್ಲಿ ಜೆಡಿಎಸ್ ತಾಲೂಕು ಕಾರ್ಯಾಧ್ಯಕ್ಷ ತುರುಗನೂರು ಮಂಜುನಾಥ್, ಜಿಪಂ ಮಾಜಿ ಸದಸ್ಯ ಜಯಪಾಲ ಭರಣಿ, ಜೆಡಿಎಸ್ ತಾಲೂಕು ಪ್ರಧಾನ ಕಾರ್ಯದರ್ಶಿ ಗೊರವನಹಳ್ಳಿ ನಾಗರಾಜು, ಬನ್ನೂರು ಹೋಬಳಿ ಜೆಡಿಎಸ್ ಅಧ್ಯಕ್ಷ ಕೆ.ಕುಮಾರಸ್ವಾಮಿ, ಪುರಸಭೆ ಉಪಾಧ್ಯಕ್ಷೆ ಸೌಭಾಗ್ಯ ಮಾಜಿ ಎಪಿಎಂಸಿ ಅಧ್ಯಕ್ಷ ಬಸವನಹಳ್ಳಿ ವೆಂಕಟೇಶ್, ಕೊಡಗಹಳ್ಳಿ ಗ್ರಾಪಂ ಅಧ್ಯಕ್ಷ ಧನಂಜಯ, ಪೈಲ್ವಾನ್ ಚಂದ್ರು, ಪ್ರೀತಮ್, ಮಾಜಿ ಅಧ್ಯಕ್ಷ ಬಸವನಹಳ್ಳಿ ರಾಜು, ಗುತ್ತಿಗೆದಾರ ನಾಗರಾಜು, ಸಿದ್ದರಾಜು, ರಾಜೇಶ್ ಇತರರಿದ್ದರು.



ಪಿರಿಯಾಪಟ್ಟಣದ ಚೈತನ್ಯ ಚಾರಿಟಬಲ್ ಟ್ರಸ್ಟ್‌ನಿಂದ ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ವೀರ ಫರ್ನಾಂಡಿಸ್, ಸಂಸ್ಥೆಯ ಆಲ್ಫೋನಾ ವಿನ್ಸೆಂಟ್, ಲಯನ್ ಸಂಸ್ಥೆ ಅಧ್ಯಕ್ಷ ಮಹದೇವಪ್ಪ, ಲೈಫ್‌ಲೈನ್ ಡಯಾಗ್ನೋಸ್ಟಿಕ್‌ನ ಮಹೇಶ್, ಸೌಮ್ಯ ರಾಣಿ, ವಾಣಿ, ಜ್ಯೋತಿ ಇದ್ದರು.

ಜಾತಿ, ಧರ್ಮಗಳ ನಡುವಿನ ಸಂಘರ್ಷದ ವೈಮನಸ್ಸಿಗೆ
ಕೋವಿಡ್ ಮಾನವೀಯತೆಯ ಪಾಠ ಕಲಿಸಿದೆ



ಹುಣಸೂರು, ಮಾ.13– ಜಾತಿ, ಧರ್ಮಗಳ ನಡುವಿನ ಸಂಘರ್ಷದ ವೈಮನಸ್ಸಿಗೆ ಕೋವಿಡ್ ಮಾನವೀಯತೆಯ ಪಾಠ ಕಲಿಸಿದೆ ಎಂದು ಹಿರಿಯ ಪತ್ರಕರ್ತ ಬಿ.ಎಂ.ಹನೀಫ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಸಮಾನ ಮನಸ್ಕ ಸಂಘಟನೆಗಳು ಆಯೋಜಿಸಿದ್ದ ಸಾಮರಸ್ಯ, ಸಹಬಾಳ್ವೆ ಮತ್ತು ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೋವಿಡ್ ಸಮಯದಲ್ಲಿ ಜಾತಿ, ಧರ್ಮಗಳನ್ನು ಮೀರಿದ ಮನುಷ್ಯ ಧರ್ಮಕ್ಕೆ ಸಮಾಜ ಪುರಸ್ಕರಿಸಿ ಮಹಾ ಸಂದೇಶವನ್ನು ವಿಶ್ವಕ್ಕೆ ಕಳುಹಿಸಿದೆ. ಆ ದಿನಗಳಲ್ಲಿ ಅಧಿಕಾರ, ಅಂತಸ್ತು, ಜಾತಿ, ಧರ್ಮ, ಇದಾವುದೂ ಕೈ ಹಿಡಿಯಲಿಲ್ಲ. ಸಾವು ಜಾತಿ ಧರ್ಮ ಮೀರಿ ಅರಸಿ ಬಂದವು. ಇದನ್ನು ಅರಿತ ಸಮಾಜ ಜಾತಿ, ಧರ್ಮ ಬದಿಗಿಟ್ಟು ಮನುಷ್ಯ ಧರ್ಮಕ್ಕೆ ಕೈ ಜೋಡಿಸಿ ಜಾತ್ಯತೀತ ಭಾರತಕ್ಕೆ ಮರುಹುಟ್ಟು ನೀಡಿದ ನಿದರ್ಶನ ಕಣ್ಣೆದುರಿಗಿದೆ ಎಂದರು.


ಪ್ರಜಾಪ್ರಭುತ್ವದಲ್ಲಿ ರಾಜಕಾರಣ ಅನಿವಾರ್ಯ. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಜಾತಿ, ಧರ್ಮ ಒಡೆಯುವ ಪ್ರಯತ್ನದಲ್ಲಿದ್ದಾರೆ. ರಾಜಕೀಯದಲ್ಲಿ ಭಿನ್ನಮತವಿದ್ದರೂ ವ್ಯಕ್ತಿಗತವಾಗಬಾರದು. ಭಾರತದಲ್ಲಿ ಅನೇಕ ಸಂಸ್ಕೃತಿ, ಸಂಸ್ಕಾರ, ಭಾಷೆ ನಡುವೆಯೂ ಸೌಹಾರ್ದತೆಯೊಂದಿಗೆ ಬದುಕು ಕಟ್ಟಿಕೊಳ್ಳುವ ಮನಸ್ಸುಗಳಿವೆ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ದೇಶ ವಿಭಜನೆ ಸಮಯದಲ್ಲಿ ಎದುರಾಗಿದ್ದ ಸಂಘರ್ಷಕ್ಕಿಂತಲೂ ಈಗಿನ ಕೋಮು ಸಂಘರ್ಷ ಮನಸ್ಸುಗಳನ್ನು ಒಡೆದು ಒಂದುಗೂಡಿಸಲಾಗದ ಭೀಕರ ಪರಿಸ್ಥಿತಿ ಎದುರಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸೌಹಾರ್ದ ಬಯಸುವ ಮನಸ್ಸುಗಳು ಕಾರ್ಯಕ್ರಮದ ಭಾಗವಾಗಿದ್ದು, ಸೌಹಾರ್ದ ಕೇವಲ ವೇದಿಕೆಗೆ ಸೀಮಿತಗೊಳಿಸಿ ಸಮಾಜಮುಖಿ ಸೋಗಿನಲ್ಲಿ ಓಡಾಡುವ ಮನಸ್ಸುಗಳು ಹೊರಗಿದ್ದು, ಅವರಿಗೆ ಈ ಸಭೆಯ ಪ್ರಾಮುಖ್ಯತೆ ತಿಳಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಿಯಾಜ್ ಅಹಮದ್ ರೋಣ್, ಟಿಬೆಟ್ ಧರ್ಮಗುರು ಲಬ್ಸಿಂಗ್ ಪುರ್ಬ ಮಾತನಾಡಿದರು. ವೇದಿಕೆಯಲ್ಲಿ ದಲಿತ ಮುಖಂಡ ವರದರಾಜು, ಕುಮಾರ್, ಜೈಮುಲ್ ಅಬುದ್ದೀನ್ ಇದ್ದರು. ಸಂಘಟಕ ಮಹದೇವ್ ಜೆ. ಸ್ವಾಗತಿಸಿದರು.

ಮಿಠಾಯಿ ಶಂಕರ್ ನಿಧನ



ಕೆ.ಆರ್.ನಗರ, ಮಾ.13– ಪಟ್ಟಣದ ಕಾಮಧೇನು ಸ್ವೀಟ್ಸ್ ಮಾಲೀಕ ಮಿಠಾಯಿ ಶಂಕರ್ (72) ಸೋಮವಾರ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ರಾಜ್ಯದ 123 ಪತ್ರಕರ್ತರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ

● 4 ವರ್ಷಗಳ ಪ್ರಶಸ್ತಿ ಒಟ್ಟಿಗೆ ಪ್ರದಾನ ● ಇದರೊಂದಿಗೆ 'ಆಂದೋಲನ', 'ಮೈಸೂರು ದಿಗಂತ' ಸೇರಿ ಹಲವು ದತ್ತಿ ಪ್ರಶಸ್ತಿ ಪ್ರದಾನ



ಬೆಂಗಳೂರು, ಮಾ. 13– ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಸೂರಿನ ಒಂಭತ್ತು ಮಂದಿ ಪತ್ರಕರ್ತರು ಸೇರಿದಂತೆ ಒಟ್ಟು 123 ಪತ್ರಕರ್ತರಿಗೆ "ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ" ಪ್ರದಾನ ಮಾಡಿದರು.

2019ರಿಂದ 2022ರವರೆಗಿನ 4 ವರ್ಷದ ಅವಧಿಯ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗಿದ್ದು, ಇದರಲ್ಲಿ 'ಆಂದೋಲನ' ಪತ್ರಿಕೆ ಸ್ಥಾಪಿಸಿರುವ ಅತ್ಯುತ್ತಮ ಜಿಲ್ಲಾ ಪತ್ರಿಕೆಗೆ ನೀಡುವ 'ಆಂದೋಲನ' ಪ್ರಶಸ್ತಿಯನ್ನು 2019ನೇ ಸಾಲಿಗೆ ಕಲಬುರ್ಗಿಯ 'ನೃಪತುಂಗ' ದಿನಪತ್ರಿಕೆ, 2020ರ ಸಾಲಿಗೆ ಶಿವಮೊಗ್ಗದ 'ನಾವಿಕ' ದಿನಪತ್ರಿಕೆ, 2021ನೇ ಸಾಲಿಗೆ ಹುಬ್ಬಳ್ಳಿಯ 'ಸಂಜೆ ದರ್ಪಣ' ದಿನಪತ್ರಿಕೆ, 2022ರ ಸಾಲಿಗೆ ಮಂಗಳೂರಿನ 'ಜಯಕಿರಣ' ದಿನಪತ್ರಿಕೆಯ ಮುಖ್ಯಸ್ಥರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅತ್ಯುತ್ತಮ ಮಾನವೀಯ ಸಮಸ್ಯೆ ಲೇಖನಕ್ಕಾಗಿ ನೀಡುವ 'ಮೈಸೂರು ದಿಗಂತ' ಪ್ರಶಸ್ತಿಯನ್ನು 2019ನೇ ಸಾಲಿಗೆ ಬಾಗಲಕೋಟೆಯ 'ಉದಯವಾಣಿ' ವರದಿಗಾರ ಚಂದ್ರಶೇಖರ ಮೊರೆ ಅವರ 'ಮನೆಯಲ್ಲೇ ಈಜಿ ಸಾಮಗ್ರಿ ತಂದೆವು', 2020ನೇ ಸಾಲಿಗೆ ಮಂಗಳೂರಿನ 'ಪ್ರಜಾವಾಣಿ' ವರದಿಗಾರ ಪ್ರದೀಶ್ ಹೆಚ್. ಮರೋಡಿಯವರ 'ಕೇಳುತ್ತಿಲ್ಲ ಮಲೆ ಮಕ್ಕಳ ಅಳಲು', 2021ನೇ ಸಾಲಿಗೆ ರಾಮನಗರ 'ವಿಜಯ ಕರ್ನಾಟಕ' ವರದಿಗಾರ ತಿ.ನಾ. ಪದ್ಮನಾಭ ಅವರ 'ಪುಸ್ತಕ ಹಿಡಿವ ಕೈಗೆ ಹಸುವಿನ ಹಗ್ಗ' ಲೇಖನಗಳಿಗೆ ಪ್ರದಾನ ಮಾಡಲಾಗಿದ್ದು, 2022ನೇ ಸಾಲಿನ ಪ್ರಶಸ್ತಿಯನ್ನು ಹುಣಸೂರು 'ವಿಜಯವಾಣಿ' ವರದಿಗಾರ ವಿ.ಆರ್. ಶಿವಕುಮಾರ್ ಅವರ 'ಜೋಪಡಿಯಲ್ಲೇ ಜೀವನಬಂಡಿ' ಮತ್ತು ಶಿವಮೊಗ್ಗ 'ವಿಜಯವಾಣಿ' ವರದಿಗಾರ ದೀಪಕ್ ಸಾಗರ್ ಅವರ 'ಕಗ್ಗಾಡಲ್ಲಿ ಮುಳುಗಿದ ಮೇಘಾನೆ ವನವಾಸಿಗಳು' ಲೇಖನಗಳಿಗೆ ಸಮನಾಗಿ ಹಂಚಿಕೆ ಮಾಡಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ 'ಮೈಸೂರು ದಿಗಂತ' ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ಘನವಂತ ಮಳಲಿ ಉಪಸ್ಥಿತರಿದ್ದರು.

2019ನೇ ಸಾಲಿನ ವಿಶೇಷ ಪ್ರಶಸ್ತಿಯನ್ನು 'ಡೆಕ್ಕನ್ ಹೆರಾಲ್ಡ್'ನ ತಿಲಕ್‌ಕುಮಾರ್, 2020ನೇ ಸಾಲಿಗೆ 'ವಿಜಯವಾಣಿ' ಮುಖ್ಯಸ್ಥ ವಿಜಯ ಸಂಕೇಶ್ವರ್, 2021ನೇ ಸಾಲಿಗೆ 'ಪಬ್ಲಿಕ್ ಟಿವಿ' ಮುಖ್ಯಸ್ಥ ಹೆಚ್. ಆರ್. ರಂಗನಾಥ್, 2022ನೇ ಸಾಲಿಗೆ ಹಿರಿಯ ಆರ್ಥಿಕ ತಜ್ಞ ಸುಶೀಲ ಸುಬ್ರಹ್ಮಣ್ಯಂ ಅವರಿಗೆ ಪ್ರದಾನ ಮಾಡಲಾಯಿತು.

2019ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಚಾಮರಾಜನಗರ ಜಿಲ್ಲೆಯ ಆರ್. ಮನೋಜ್ (ಕಸ್ತೂರಿ ಟಿವಿ), ಹಾಸನದ ಸುದರ್ಶನ್ ಚನ್ನಂಗಿಹಳ್ಳಿ (ವಿಜಯಕರ್ನಾಟಕ), ಹೆಚ್.ವಿ. ಕಿರಣ್ (ಟಿವಿ9), ಮಂಡ್ಯದ ಕೆಂಚೇಗೌಡ (ವಿಜಯ ಕರ್ನಾಟಕ), ಕೊಡಗಿನ ಅನಂತಶಯನ (ಶಕ್ತಿ), 2020ನೇ ಸಾಲಿಗೆ ಮಂಡ್ಯದ ಧರಣೇಶ್ ಬೂಕನಕೆರೆ (ದಿಗ್ವಿಜಯ ನ್ಯೂಸ್), ಡಿ.ಎಲ್. ಲಿಂಗರಾಜು (ಹಿರಿಯ ಪತ್ರಕರ್ತ), ಕೊಡಗಿನ ನಾಗೇಶ್ ಪಾಣತ್ತಲೆ (ವಿಜಯ ಕರ್ನಾಟಕ), ಮಹೇಶ್ ಮಾಚಯ್ಯ (ಹಿರಿಯ ಪತ್ರಕರ್ತ), ಹಾಸನದ ಬಿ.ಆರ್. ಉದಯಕುಮಾರ್ (ಇಂಡಿಯನ್ ಎಕ್ಸ್‌ಪ್ರೆಸ್), ಜಿ. ಪ್ರಕಾಶ್ (ವಿಜಯ ಕರ್ನಾಟಕ), ಮೈಸೂರಿನ ಮುಳ್ಳೂರು ರಾಜು (ವಿಜಯವಾಣಿ), 2021ನೇ ಸಾಲಿಗೆ ಮೈಸೂರಿನ ಅ.ಮ. ಸುರೇಶ್ (ಉದಯವಾಣಿ), ನಂಜನಗೂಡು ಮೋಹನ್ (ವಿಶ್ವವಾಣಿ), ಮುಳ್ಳೂರು ಶಿವಪ್ರಸಾದ್ (ಆಂದೋಲನ), ಕೆ.ಪಿ. ನಾಗರಾಜ್ (ಪಬ್ಲಿಕ್ ಟಿವಿ), ಶಂಕರ ಬೆನ್ನೂರು (ದಿ ಹಿಂದು), 2022ನೇ ಸಾಲಿಗೆ ಚಾಮರಾಜನಗರದ ಕೆ.ಬಿ. ರಮೇಶ್ ನಾಯಕ್ (ಆಂದೋಲನ), ಹಾಸನದ ರವಿ ನಾಕಲಗೂಡು (ಹಲೋ ಹಾಸನ), ಮಂಡ್ಯದ ಸೋಮಶೇಖರ್ ಕೆರಗೋಡು (ಕೆಮ್ಮುಗಿಲು) ಅವರುಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿದರು.

ಮಾಧ್ಯಮ ಅಕಾಡೆಮಿಯ ಅಧ್ಯಕ್ಷ ಕೆ. ಸದಾಶಿವ ಶೆಣೈ ಆಶಯ ನುಡಿಗಳನ್ನಾಡಿದರು, ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಡಾ. ಪಿ.ಎಸ್. ಹರ್ಷ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು